ಲೋಚನ

೩

ಸಂಪುಟ ೨
ಸಂಚಿಕೆ ೧

ಜೂನ್
೧೯೮೪

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ವಾರ್ಷಿಕ ಚಂದಾ : ರೂ. ೬-೦೦

ಬಿಡಿ ಸಂಚಿಕೆ : ರೂ. ೪-೦೦

'ಲೋಚನ'

ಸಂಪಾದಕ ಮಂಡಲಿ

ಲೇಖನಗಳು–ಟಿಪ್ಪಣಿಗಳು

19–12–1982ರಂದು ನಡೆದ ಪ್ರತಿಷ್ಠಾನದ ಕಾರ್ಯಸಮಿತಿಯಲ್ಲಿ ಅಂಗೀಕೃತವಾದ ನಿರ್ಣಯ : "ಸಂಸ್ಥಾಪಕ ಕಾರ್ಯದರ್ಶಿಯವರ ಸೂಚನೆಯಂತೆ, ಬರುವ 1983ನೆಯ ವರ್ಷದಿಂದ ಸಂಶೋಧನಾತ್ಮಕ ಪಾಂಡಿತ್ಯಪೂರ್ಣ ಲೇಖನಗಳು ಹಾಗೂ ಹೊಸದಾಗಿ ಪ್ರಕಟವಾಗುವ ಉತ್ತಮ ಮಟ್ಟದ ಸಂಪಾದಿತ ಗ್ರಂಥಗಳು ಮತ್ತು ಶಾಸ್ತ್ರ ಸಾಹಿತ್ಯದ ಗ್ರಂಥಗಳು–ಇವುಗಳ ಮೇಲಣ ವಿಮರ್ಶೆಗಳು, ವಿದ್ವದ್ವಿಚಾರ ಮತ್ತು ವಿದ್ವತ್ ಪ್ರಪಂಚದ ವಿದ್ಯಮಾನ ಇವುಗಳಿಗೆ ಸಂಬಂಧಿಸಿದ ಟೀಕೆ ಟಿಪ್ಪಣಿಗಳು–ಇವುಗಳಿಗೆ ಮೀಸಲಾದ ವಿದ್ವತ್‌ಪತ್ರಿಕೆಯನ್ನು ವರ್ಷಕ್ಕೆ ಎರಡು ಸಲ (ಜೂನ್ ಮತ್ತು ಡಿಸೆಂಬರ್) ಪ್ರಕಟಿಸ ಬಹುದೆಂದೂ ಈ ಪತ್ರಿಕೆಗೆ "ಲೋಚನ" ಎಂಬ ಹೆಸರನ್ನು ಇಡಬಹುದೆಂದೂ ತೀರ್ಮಾನಿಸಲಾಯಿತು. ಪ್ರಾರಂಭವಲ್ಲಿ ಪತ್ರಿಕೆಯ ಗಾತ್ರ ಡೆಮಿ 1/8 ಆಕಾರದ 64 ಪುಟಗಳಷ್ಟು ಇರಬಹುದೆಂದು ಸೂಚಿಸಲಾಯಿತು."

ಲೇಖನಗಳಿಗೆ ಆಹ್ವಾನ

ಮೇಲ್ಕಂಡ ನಿರ್ಣಯದಲ್ಲಿ ವ್ಯಕ್ತಪಟ್ಟಿರುವ ಆಶಯಕ್ಕೆ ಅನುಗುಣವಾದ ಲೇಖನಗಳನ್ನು ವಿದ್ವಾಂಸರೂ ಭಾಷೆ ಸಾಹಿತ್ಯಗಳ ಪ್ರೌಢ ವಿದ್ಯಾರ್ಥಿಗಳೂ ಕಳಿಸಿಕೊಡಬೇಕೆಂದು ವಿನಂತಿ. 'ಲೋಚನ'ದ ಗಾತ್ರ ಪರಿಮಿತವಾದದ್ದರಿಂದ ಲೇಖನಗಳು ಅಚ್ಚಿನ 6–8 ಪುಟಗಳ ಪರಿಮಿತಿಯಲ್ಲಿ ಇದ್ದರೆ ಅನುಕೂಲ. ಟಿಪ್ಪಣಿಗಳು 1–2 ಪುಟಗಳ ಪರಿಮಿತಿಯಲ್ಲಿರಬಹುದು. ಲೇಖನಗಳು ಹಾಳೆಯ ಒಂದೇ ಪಕ್ಕದಲ್ಲಿ ಸ್ಫುಟವಾದ ಅಕ್ಷರಗಳಲ್ಲಿ ಬರೆದಿರಬೇಕು. ಅಡಿಟಿಪ್ಪಣಿಗಳನ್ನು ಪುಟದ ಅಡಿಯಲ್ಲಿಯೇ ಕಾಣಿಸುವುದು ಒಳಿತು. ಗ್ರಂಥ–ಲೇಖನಾಧಾರ ವಿವರಗಳನ್ನು (Bibliography) ಲೇಖನದ ಕಡೆಯಲ್ಲಿ ಕೊಡಬಹುದು. ಯಾವುದೇ ಕಾರಣದಿಂದ ಲೇಖನವನ್ನು ಹಿಂದಿರುಗಿಸಲಾಗದ ಪ್ರಯುಕ್ತ ಲೇಖಕರು ತಮ್ಮ ಲೇಖನದ ಒಂದು ಪ್ರತಿಯನ್ನು ಉಳಿಸಿಕೊಂಡಿರಬೇಕಾಗಿ ಕೋರಿಕೆ.

ವಿನಿಮಯ ಪತ್ರಿಕೆಗಳು

(ಪ್ರತಿಷ್ಠಾನದ ವಾರ್ತಾಪತ್ರಿಕೆಗೆಂದು ಬರುತ್ತಿದ್ದ ವಿನಿಮಯ ಪತ್ರಿಕೆಗಳನ್ನು "ಲೋಚನ"ಕ್ಕೆ ಸ್ವೀಕರಿಸಲಾಗಿದೆ.)

೧. ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ "ಸಾರ್ವಜನಿಕ" (ಇಂಗ್ಲಿಷ್), ೨. ಸೋವಿಯತ್ ದೇಶ, ೩. ಲಹರಿ (ಮದರಾಸು), ೪. ಅಂಕಣ, ಬೆಂಗಳೂರು.

ವಿಮರ್ಶೆಗಾಗಿ ಗ್ರಂಥಗಳ ಎರಡು ಪ್ರತಿಗಳನ್ನು ಲೇಖಕರು ಕಳಿಸಬೇಕು.

ಸೃಜನಾತ್ಮಕ ಗ್ರಂಥಗಳನ್ನು ಸಾಧಾರಣವಾಗಿ ವಿಮರ್ಶೆ ಮಾಡಲಾಗುವುದಿಲ್ಲ ; ಆದರೆ, ಕಳಿಸಿದರೆ 'ಸ್ವೀಕಾರ' ಭಾಗದಲ್ಲಿ ಗಮನಿಸಲಾಗುವುದು. ವೈಶಿಷ್ಟ್ಯವುಳ್ಳ ಗ್ರಂಥಗಳನ್ನು ಸಾಧ್ಯವಾದರೆ ಅವಲೋಕನ ಮಾಡಿಸಲಾಗುವುದು.

ಪ್ರತಿಷ್ಠಾನದ

ಆಜೀವ ಪೋಷಕರು

ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್



ಇದೇ 1984ರ ಜೂನ್ 6ಕ್ಕೆ ಪೂಜ್ಯ ಡಾ॥ ಮಾಸ್ತಿಯವರಿಗೆ 93 ವರ್ಷ ತುಂಬಿ, 94ನೆಯ ವರ್ಷಕ್ಕೆ ಅಡಿಯಿಟ್ಟಿದ್ದಾರೆ ಅವರು. ಅಂದು ಬೆಳಗ್ಗೆ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ನಿಟ್ಟೂರು ಶ್ರೀನಿವಾಸ ರಾವ್, ಶ್ರೀ ಜನ್ಮಶತಾಬ್ದಿ ಉತ್ಸವದ ಕಾರ್ಯಾಧ್ಯಕ್ಷರಾದ ಶ್ರೀ ಜಿ. ನಾರಾಯಣ, ಮೈಸೂರಿನಿಂದ ಬಂದಿದ್ದ ಡಾ॥ ಹಾ. ಮಾ. ನಾಯಕ, ಸಂಸ್ಥಾಪಕ ಕಾರ್ಯದರ್ಶಿ ಶ್ರೀ ಎಂ. ವಿ. ಸೀತಾರಾಮಯ್ಯ ಮತ್ತು ಪ್ರತಿಷ್ಠಾನದ ಕಚೇರಿಯ ಕಾರ್ಯಕರ್ತರು ಪೂಜ್ಯ ಮಾಸ್ತಿಯವರ ನಿವಾಸಕ್ಕೆ ತೆರಳಿ, ಅವರ ದರ್ಶನ ಪಡೆದು, ಅವರಿಗೆ ಶುಭಾಶಯಗಳೊಡನೆ ಫಲಪುಷ್ಪ ಸಮರ್ಪಣೆ ಮಾಡಿ, ಅವರ ಆಶೀರ್ವಾದವನ್ನು ಪಡೆದರು.

ಪೂಜ್ಯ ಮಾಸ್ತಿಯವರು ಪ್ರತಿಷ್ಠಾನಕ್ಕೆ ಶುಭ ಕೋರಿದರು.

For Distribution among Members Only

LOCHANA

(A Half-yearly Journal Published by B. M. Sri. Memorial Foundation, 54, 3rd Cross, Gavipuram Extension, Bangalore-19)

Chief Editor: Prof. G. Venkatasubbiah

Executive Editor: Prof. M. V. Seetharamiah

Editor: T. R. Mahadeviah

Vol. 2 *June 1984* *No. 1*

CONTENTS

1. Invocation —*Thimmappa Dasa*

2. Tradition in Rudra Bhatta — *Dr. K. G. Shastry* ... 1

3. Devaki's love for the infant
 – *Dr G. Varadaraja Rao* ... 9

4. Prathama or Prashama – an enquiry into the text of the 1st stanza of Meghaduta
 – *Prof. Gargeswari Venkatasubbiah* ... 15

5. Reaction to the article 'Music and literature'
 - *T. Keshava Bhatta* ... 24

6. A Shatpadi in an inscription—a reaction
 —*Na. Geethacharya* .. 26

7. Sojourn of words —*Prof. M. V. Seetharamiah* ... 32

8. Sri Vijaya's stanza on Dhwani —*Y. Krishna Sharma* ... 36

9. Book Review

 a) Suta Bharata, Dhruva Charitre
 —*Vidwan N. Ranganatha Sharma* .. 67

 b) The 'Nine Rasas' in Kannada poetry
 —*T. Keshava Bhatta* ... 72

10 News & Notes ... 46

11. Obituary ... 75

12. Ourselves: Report on Centenary Celebrations; Donors 77

ಪರಿವಿಡಿ

೧. ಹಸೆಗೆ ಕರೆಯುವ ಹಾಡು —ತಿಮ್ಮಪ್ಪದಾಸ

೨. ರುದ್ರಭಟ್ಟನ ಪರಂಪರಾಪ್ರಜ್ಞೆ —ಡಾ॥ ಕೆ. ಜಿ. ಶಾಸ್ತ್ರಿ ... ೧

೩. ದೇವಕಿ ವಾತ್ಸಲ್ಯ —ಡಾ॥ ಜಿ. ವರದರಾಜರಾವ್ ... ೯

೪. ಆಷಾಢಸ್ಯ ಪ್ರಶಮ/ಪ್ರಥಮ ದಿವಸೇ
—ಪ್ರೊ॥ ಗರ್ಗೇಶ್ವರಿ ವೆಂಕಟಸುಬ್ಬಯ್ಯ ... ೧೫

೫. 'ಸಂಗೀತ ಸಾಹಿತ್ಯ' ಲೇಖನಕ್ಕೆ ಪ್ರತಿಕ್ರಿಯೆ
—ಟಿ. ಕೇಶವಭಟ್ಟ ... ೨೪

೬. ಶಾಸನದಲ್ಲೊಂದು ಷಟ್ಪದಿ—ಪ್ರತಿಕ್ರಿಯೆ
—ನಾ. ಗೀತಾಚಾರ್ಯ ... ೨೬

೭. ಶಬ್ದಗಳ ವಿದೇಶ ಪ್ರಯಾಣ
—ಪ್ರೊ॥ ಎಂ. ವಿ. ಸೀತಾರಾಮಯ್ಯ ... ೩೨

೮. ಶ್ರೀ ವಿಜಯನ 'ಧ್ವನಿ'-ಕಂದ —ಯ. ಕೃಷ್ಣಶರ್ಮ ... ೩೬

೯. ಗ್ರಂಥವಿಮರ್ಶೆ

ಅ) ಸೂತಭಾರತ ಅಥವ ಸ್ವರ್ಗಾರೋಹಣ ಪರ್ವ ... ೬೨

ಆ) ಧ್ರುವ ಚರಿತ್ರೆ ... ೬೭
—ಎನ್. ರಂಗನಾಥ ಶರ್ಮಾ

ಇ) ಕನ್ನಡ ಕಾವ್ಯಗಳಲ್ಲಿ ನವರಸಗಳು —ಟಿ. ಕೇಶವಭಟ್ಟ ... ೭೨

೧೦. ವಸ್ತುಸಂಗ್ರಹ ... ೪೬

೧೧. ಶ್ರದ್ಧಾಂಜಲಿ ... ೭೫

೧೨. ಪ್ರತಿಷ್ಠಾನ ವಾರ್ತೆ ... ೭೭

ಶ್ರೀ ಶತಮಾನೋತ್ಸವ ವರದಿ

ಶ್ರೀ ಶತಮಾನೋತ್ಸವ ದಾನಿಗಳು

ಲೋಚನ

ಸಂಪುಟ ೨ ಜೂನ್ ೧೯೮೮ ಸಂಚಿಕೆ ೧

ಬೆಳ್ಳೂರಿನ ಮಾಧವಸ್ವಾಮಿಯನ್ನು ಹಸೆಗೆ ಕರೆಯುವ ಹಾಡು

ಕವಿ : **ತಿಮ್ಮಪ್ಪದಾಸ**

ರಾಗ : ಶಂಕರಾಭರಣ ತಾಳ : [ಮಿಶ್ರಛಾಪು]

ಏಕದಂತನ ಪಾದಕೆರಗಿ । ಸುವಿ।ವೇಕದಿಂ ವಾಣಿಗೆ ನಮಿಸಿ । ಅ–।
ನೇಕ ಮಹಿಮ ಗುರು ವಾಸುದೇವಗೊಂದಿಸಿ । ಲೋಕನಾಯಕ ಮಾಧವನನ್ನು ಹಸೆಗೆ ।
ಕೋಕಿಲಗಾನೆಯರು ಕರೆದರು । ಶೋಭನವೇ ॥ ೧

ಇನಕೋಟಿತೇಜದೊಳ್ಪೊಳೆವ ದಿವ್ಯತರ । ಮಣಿಮಕುಟದೊಳಿರುವ ।
ಮಣಿಗಣಕಾಂತಿ ಕಸ್ತೂರಿತಿಲಕಗಳಿಂದಲು । ಮಿನುಗು[1][ತಿಹ][1]ಸುಲಲಾಟನೆ ಮಾಧವ ।
ಘನಮಹಿಮ ಹರಿಯೇ ಹಸೆಗೇಳು ॥ ೨

ಸ್ಮರಚಾ[2][ಪೋಪಮ ಭ್ರೂಯುಗಳನೆ][2] । ಸರಸೀರುಹ[3][ದೊಲಾ][3]ಯತಾಂಬಕನೆ । ದಿವ್ಯ- ।
ತರ ಮಣಿಕುಂಡಲಯುತ ಕರ್ಣಯುಗ್ಮ[4][ನೆ][4] । ಭ್ರಮರರಿಪುಸುಮಸಮನಾಸಿಕ ಮಾಧವ ।
ಪರಮಪಾವನನೇ ಹಸೆಗೇಳು ॥ ೩

ಪೀತಾಂಬರ ಶೋಭನನೆ । [5][ಶರ।ಜಾತಾಪ್ತ][5] ತೇಜೋ [6][ಪುರುಷನೆ][6] । ಸಮ ।
ವಾತಾಸುರನನ್ನೆ ಮರ್ದಿಸಿದನೆ ಕೃಷ್ಣಾ । ಚೂತಾಂಕುರ ಸಮ ಪದಯುಗ ಮಾಧವ ।
ವಾ[7][ತಾತ್ಮಜ][7] ಸೇವಿ[8][ತ][8]ನೆ ಹಸೆಗೇಳು ॥ ೪

ಕಂಬುಕಂಠನೆ ಮುನಿಸ್ತುತನೆ । ಚಕ್ರ[9][ಶಂ][9]ಖಗದಾಭಯಕರನೆ । ಕ್ಷೀ–।
ರಾಂಬುಧಿಯಲಿ ಜನಿಸಿದ ಕೌಸ್ತುಭಹಾರ । ಬಿಂಬಿಪ ಮುಕ್ತಶೋಭಿತಹಾರ ಮಾಧವ ।
ಅಂಬುಜಭವಜನಕ ಹಸೆಗೇಳು ॥ ೫

ಹಸ್ತಪ್ರತಿಯ ಪಾಠ : 1. ತಿರುಹ (ತಿರುವ ?). 2. ಚಾಪಪಮ ಬೃಹುಗಳನೆ. 3. ದೊಳಾ. 4. ಸಂ. ಸೇರ್ಪಡೆ. 5. ಜರಜಾತಪ್ತ. 6. ಪುಷನೆ. 7. ವಾತಜ. 8. ಪ. 9. ಗಂ.

ಸುರವರಸಂಸ್ತುತಚರಣ । ಸಾ।ಗರ ತನಯಾ ಭೂರಮಣ ।
ಸುರವರ ಪಾಲಕ ಗರುಡಗಮನ ಕೃಷ್ಣ । ಹರಿತಾಪ್ತಶಯನನೇ ಹರಿಯೇ ।
ಹರಿಜವಂದ್ಯ ಪರಮ ಮಾಧವನೇ ಹಸೆಗೇಳು ॥ ೬

ತರುಣನಾಗಪುರಾಧೀಶ । ಹರಕರುಣಾಕರ ವೆಂಕಟೇಶ । ನೀನೆ ।
ಗುರುವರ ರೂಪ ತರಳ ತಿಮ್ಮದಾಸನ । ಪೊರೆಯಲು ವರರಜತನಗರವಾಸ ಮಾಧವ ।
ಪರಮಪುರುಷನೆ ಹಸೆಗೇಳು ॥ ೭

ಟಿಪ್ಪಣಿ : ತಿಮ್ಮಪ್ಪದಾಸರ 'ಪೂಜಾವಿಧಾನ ಕೀರ್ತನೆಗಳು' ('ಅರ್ಚನ' ಎಂಬ ಹೆಸರಿನಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಪ್ರಕಟಿತ : ೧೯೭೧) ಲಿಖಿತವಾಗಿರುವ ಕಾಗದದ ಹಸ್ತಪ್ರತಿಯಲ್ಲಿ ನೋಡಿದಾಗ, "ತರಳ ತಿಮ್ಮದಾಸನ ಪೊರೆಯಲು ವರ ರಜತ ನಗರವಾಸ ಮಾಧವ" ಎಂಬ ಮಾತುಗಳು ನನ್ನ ಕುತೂಹಲವನ್ನು ಕೆರಳಿಸಿದವು. 'ಬೆಳ್ಳೂರು' ಕನ್ನಡ ಮಾತಿನ ಸಂಸ್ಕೃತ ರೂಪವೆ 'ರಜತ ನಗರ' ಎನ್ನುವುದು ಸ್ಪಷ್ಟ. ಕೀರ್ತನೆ ಮಾಧವರಾಯಸ್ವಾಮಿಯನ್ನು ಹಸೆಗೆ ಕರೆಯುವ ಹಾಡಾದ್ದರಿಂದ, ಮಾಧವರಾಯಸ್ವಾಮಿ ದೇವಸ್ಥಾನವಿರುವ, ನಾಗಮಂಗಲ ತಾಲ್ಲೂಕಿನ ಬೆಳ್ಳೂರೆ ಕೀರ್ತನೆಯಲ್ಲಿ ಬಂದಿರುವ ಬೆಳ್ಳೂರು ಎನ್ನುವುದೂ ಸ್ಪಷ್ಟ. ತಿಮ್ಮಪ್ಪದಾಸರ ವಿಷಯವಾಗಿ ಸಂಶೋಧನೆ ನಡಸುತ್ತಿದ್ದ ಸಂದರ್ಭದಲ್ಲಿ ಅವರಿಗೂ ಬೆಳ್ಳೂರಿಗೂ ಸಂಬಂಧ ಇದ್ದು, ಚಿಕ್ಕನಾಯ್ಕನಹಳ್ಳಿಯಲ್ಲಿ ನೆಲಸಿದ್ದ ತಿಮ್ಮಪ್ಪದಾಸರ ಪೂರ್ವಜರು ಮಾಯಸಂದ್ರ ಬೆಳ್ಳೂರು ಕಡೆಗಳಿಂದ ಬಂದವರು ಎಂದು ಚಿಕ್ಕನಾಯ್ಕನ ಹಳ್ಳಿಯ ಹಿರಿಯರ ಹೇಳಿಕೆಗಳಿಂದ ತಿಳಿದುಬಂದಿತು. ಈ ವರ್ಷ ಜನವರಿಯಲ್ಲಿ ಬಿ. ಎಂ, ಶ್ರೀ. ಜನ್ಮಶತಾಬ್ದಿ ಉತ್ಸವದ ಉದ್ಘಾಟನೆ ಬೆಳ್ಳೂರಿನಲ್ಲಿ ನಡೆಯಿತಷ್ಟೆ. ಆಗ ಅಲ್ಲಿಯ 94 ವರ್ಷದ ವಯೋವೃದ್ಧರನ್ನು ತಿಮ್ಮಪ್ಪದಾಸರ ವಿಷಯವಾಗಿ ಶ್ರೀ ಗೀತಾಚಾರ್ಯರು ಪ್ರಶ್ನಿಸಿದರು. ಬೆಳ್ಳೂರಿನ ಹೆಣ್ಣನ್ನು ಚಿಕ್ಕನಾಯ್ಕನಹಳ್ಳಿಗೆ ತಂದುಕೊಂಡಿತ್ತು ಎಂದು ಆ ಹಿರಿಯರು ಹೇಳಿದರು. 'ತರಳ ತಿಮ್ಮದಾಸ' ಎಂದಿರುವುದರಿಂದ ದಾಸರು ತಮ್ಮ ಪೂರ್ವವಯಸ್ಸಿನಲ್ಲಿ ಬೆಳ್ಳೂರಿಗೆ ಹೋಗಿಬರುತ್ತಿದ್ದರು ಎಂದು ಹೇಳಬಹುದು. ಬಿ. ಎಂ. ಶ್ರೀ.ಯವರ ಪೂರ್ವಜರಿಗೂ ದಾಸರ ಪೂರ್ವಜರಿಗೂ ನಿಕಟ ಬಾಂಧವ್ಯ ಬೆಳೆದಿದ್ದಿತು ಎಂದು ಕಾಣುತ್ತದೆ. ಈ ಬಗೆಗೆ ಇನ್ನೂ ಸ್ವಲ್ಪ ಶೋಧನೆ ಮಾಡಬೇಕಾಗಿದೆ. ಇನ್ನೊಂದು ಮಾತು : ದಾಸರ ಅನೇಕ ರಚನೆಗಳು ಅವರ ಸ್ವಂತದ ಬರಹದಲ್ಲಿವೆ. ಈ ರಚನೆಯನ್ನು ಬಹುಶಃ ಅವರ ಮಕ್ಕಳು ವೆಂಕಟರಮಣಯ್ಯ ನಕಲು ಮಾಡಿರುವುದರಿಂದ, ಕೆಲವು ಸ್ಖಾಲಿತ್ಯಗಳು ಹೊಕ್ಕಿವೆ. ಪಾಠಾಂತರಗಳ ನೆರವು ಇಲ್ಲದೆ, ತಿದ್ದುಪಾಟುಗಳನ್ನು ಊಹೆಯಿಂದ ಮಾಡಿದೆ.—ಎಂ. ವಿ. ಸೀ.

ರುದ್ರಭಟ್ಟನ ಪರಂಪರಾ ಪ್ರಜ್ಞೆ

ಡಾ॥ ಕೆ. ಜಿ. ಶಾಸ್ತ್ರಿ

ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ಪುರಾಣದ ಕಥೆಯನ್ನು ಕಾವ್ಯವಾಗಿ ಬರೆದಿರುವ ವೈದಿಕ ಕವಿಗಳಲ್ಲಿ ರುದ್ರಭಟ್ಟನೇ ಮೊದಲಿಗನಾಗಿದ್ದಾನೆ. ನಮ್ಮ ಪ್ರಾಚೀನ ಕವಿಗಳೆಲ್ಲರೂ ಮಹಾಕಾವ್ಯಗಳನ್ನೇ ರಚಿಸುವ ಮಹತ್ವಾಕಾಂಕ್ಷೆ ತಳೆದಿರುವದಲ್ಲದೆ ಅದರಲ್ಲಿ ತಾವು ನಂಬಿರುವ ಧರ್ಮ, ಕಾವ್ಯಧರ್ಮಗಳನ್ನು ಮೇಳವಿಸಿ ಸಾಧಿಸಬೇಕೆಂಬ ಆಶಯವನ್ನೂ ಇಟ್ಟುಕೊಂಡಿರುವದು ಕಂಡುಬರುತ್ತದೆ. ಇದಕ್ಕೆ ಕಾರಣ ಅವರವರ ಧ್ಯೇಯಕ್ಕೂ, ಬದುಕಿಗೂ ಹಿನ್ನೆಲೆಯಾಗಿ ನಿಂತ ದೈವಶ್ರದ್ಧೆ, ಮತನಿಷ್ಠೆಗಳೆಂಬುದು ಸುಸ್ಪಷ್ಟ. ಆ ಶ್ರದ್ಧೆ, ನಿಷ್ಠೆಗಳು ಅವರು ನಂಬಿ ನಡೆದಿದ್ದ ಧಾರ್ಮಿಕ ಪರಂಪರೆಯ ಗಾಢವಾದ ಪ್ರಜ್ಞೆಗಳಿಂದ ಪ್ರಭಾವಿತವಾಗಿರುವದೂ ಅಷ್ಟೇ ಸಹಜ. ಈ ಮಾತು ಕನ್ನಡದ ಜೈನ, ವೀರಶೈವ, ವೈದಿಕ ಎಲ್ಲ ಮತದ ಕವಿಗಳಿಗೂ ಅನ್ವಯವಾಗುತ್ತದೆ.

ರುದ್ರಭಟ್ಟನ 'ಜಗನ್ನಾಥ ವಿಜಯ' ಕಾವ್ಯವನ್ನು ಪುರಾಣ ಕಥಾಕಾವ್ಯವಾಗಿಯೂ ಓದಬಹುದು ; ಧಾರ್ಮಿಕ ಕಾವ್ಯವಾಗಿಯೂ ಅಭ್ಯಸಿಸಬಹುದು. ಮೊದಲನೆಯ ವ್ಯಾಸಂಗ ಕಾವ್ಯದ ರಸ, ಶೈಲಿ ಮುಖಗಳ ಅವಲೋಕನವನ್ನು ಅವಧಾರಿಸಿದರೆ, ಎರಡನೆಯದು ಅದರಲ್ಲಿ ಅಭಿವ್ಯಕ್ತವಾದ ಧಾರ್ಮಿಕ ಅಂಶಗಳ ಪರಿಶೀಲನೆಯತ್ತ ವಿಶೇಷ ಲಕ್ಷ್ಯ ಪೂರೈಸುವದಾಗಿದೆ. 'ಜಗನ್ನಾಥ ವಿಜಯ'ವನ್ನು ಧಾರ್ಮಿಕ ಕಾವ್ಯವೆಂಬ ದೃಷ್ಟಿಯಿಂದ ಗಮನವಿತ್ತು ಪರೀಕ್ಷಿಸಿದಾಗ ವೈದಿಕಧರ್ಮ ಪರಂಪರೆಯ ಅನೇಕ ಅಂಶಗಳು ರುದ್ರಭಟ್ಟನ ಮನೋಮಂಡಲದ ಪ್ರಜ್ಞಾಲೋಕದಲ್ಲಿ ಆಳವಾಗಿ ಬೇರುಬಿಟ್ಟ ಕೆಲವು ಅಂಶಗಳನ್ನು, ಅವುಗಳನ್ನು ಅವನ ಕಾವ್ಯಪ್ರಜ್ಞೆ ಪರಿಣಾಮಕಾರಿಯಾಗಿ ಬಳಸಿಕೊಂಡು ಅಭಿವ್ಯಕ್ತವಾದ ಬಗೆಯನ್ನೂ ಕುರಿತು ಪ್ರಸ್ತಾಪಿಸುವದು ಈ ಪ್ರಬಂಧದ ಉದ್ದೇಶ.

ಮೊದಲಿಗೆ ಕವಿಯ ಮಾತಿನಲ್ಲಿಯೇ ಅವನ ಕಾವ್ಯರಚನೆಯ ಉದ್ದೇಶ, ಕಥಾವಸ್ತುವಿನ ಆಯ್ಕೆ, ಕಾವ್ಯಸಾಧನೆಯ ಗುರಿ ನಿರ್ದೇಶನಗಳನ್ನು ಗಮನಿಸೋಣ :

> ಈ ತೆರದಿಂ ಬುಧರ್ ಪೊಗಳ್ದು ಮತ್ಕೃತಿಯಂ ನೆರೆ ಶಾರದಾಭ್ರಚಂ ।
> ದ್ರಾತಪರುದ್ರ ಕೃಷ್ಣಕಥೆವೇಳೆನೆ ಕಾವ್ಯಸಮಾಧಿಯಿಂ ಪರಂ ॥
> ಜ್ಯೋತಿ ಮುಕುಂದನೆನ್ನ ಬಗೆಯೊಳ್‌ನಿಲೆ ನಿರ್ಮಳ ತತ್ತ್ವ ಬೋಧಮು
> ದ್ಯೋತಿಪುದೆಂಬುದಂ ಬಯಸಿ ಪೇಳಲೊಡರ್ಚಿದೆನೀ ಪ್ರಬಂಧಮಂ ॥ (1–17)

'ಕೃಷ್ಣಕಥೆ' ಹೇಳೆಂದು ವಿದ್ವಾಂಸರು ಸೂಚಿಸಿದರು. ಆದರೆ ಕವಿ ಅದಕ್ಕೆ ತೊಡಗುವದರ ಹಿಂದೆ ಮುಕುಂದನೇ ಮನದಲ್ಲಿ ನಿಂತು ಮುನ್ನಡೆಸುವನೆಂಬ ನೈಜ

ತ್ರದ್ಧೆಯೇ ಪ್ರೇರಕವಾಗಿದೆ, ಪ್ರಾಣ-ತ್ರಾಣವಾಗಿದೆ. ಏಕೆಂದರೆ, "ವೇದಶಾಸ್ತ್ರಾರ್ಥ ರಹಸ್ಯಾಚಿಂತ್ಯ ಸಾಮರ್ಥ್ಯದ ಮುರಹರನಂ ಬಣ್ಣಿಸಲ್ ಬಲ್ಲನಾವಂ?" (1–19), "ಏದೊರೆ ಪೆಂಪೊ......ದುಗ್ಧೋದಧಿ ತಲ್ಪನಂ ನರನಭಿಷ್ಟುತಿಗೆಯ್ವುದುಃ ಧಾರ್ಷ್ಟ್ಯ ವಲ್ಲವೇ?" (1–10) ಇದು ಕವಿಯ ವಿಷ್ಣುಭಕ್ತಿಯ ವಿಚಾರಸರಣಿ.

ಇನ್ನು—

ಕತೆ ವಿಷ್ಣುಪುರಾಣಂ ಸ—
ತ್ಕೃತಿವೇಳ್ದಂ ಸುಕವಿರುದ್ರನೀಕೃತಿಗೆ ಕಥಾ ।
ಪತಿ ಕೃಷ್ಣಂ ಕೃತಿಯುಂ ಭೂ
ನುತಮೆ ಜಗನ್ನಾಥ ವಿಜಯಮೆನೆ ಮೆಚ್ಚದರಾರ್ ॥ (1–21)

ಇಲ್ಲಿ ಹೇಳಿದ ಕಾವ್ಯವಿಷಯವಾದ ಕೃಷ್ಣಚರಿತೆಗೆ ಸಂಸ್ಕೃತ ವಿಷ್ಣುಪುರಾಣದ ಪಂಚಮಾಂಶದಲ್ಲಿರುವ 38 ಅಧ್ಯಾಯಗಳೇ ಆಕರವಾಗಿವೆ. ಮೂಲದ ಕಥಾಶರೀರಕ್ಕೆ ಸ್ವಂತದ ತತ್ತ್ವಶ್ರದ್ಧೆ, ಶೈಲಿಯ ಸೊಗಸಿನ ಮಾಂಸರಕ್ತಗಳನ್ನೂಡಿ ಸಜೀವಗೊಳಿಸಿದ್ದಾನೆ ಕವಿ. ಈ ಕಾವ್ಯರಚನೆಯ ಸಿದ್ಧಿಯ ಗುರಿಯನ್ನು ಕೊನೆಯ ಫಲಶ್ರುತಿಸೂಚಕ ವೃತ್ತದಲ್ಲಿ ಈ ಕೆಳಗಿನಂತೆ ಸೂಚಿಸಿದ್ದಾನೆ :

...ರುದ್ರಭಟ್ಟಕೃತಿ ವೈಷ್ಣವ ಕಾವ್ಯ ರಸಾರ್ಣವಂ ತುಳುಂ– ।
ಕಾಡುಗೆ ಭೂಮಿನಿಲ್ವಿನಮಹರ್ಪತಿ ನಿಲ್ವಿನಮಿಂದು ನಿಲ್ವಿನಂ ॥ (18–113)

ತನ್ನ ವಿಷ್ಣುಭಕ್ತಿಯ ಪೂರದ ಪೂರ್ಣಸ್ಮಾರಕವಾಗಿ (ಆಚಂದ್ರಾರ್ಕತಾರಂಬರಂ) ನೆಲೆನಿಲ್ಲಲಿ ಎಂದು ಹಂಬಲಿಸಿದ್ದಾನೆ.

ಮೇಲಿನ ಆಶಯಕ್ಕೆ ತಕ್ಕಂತೆ 'ಜಗನ್ನಾಥ ವಿಜಯ'ವು ವಿಷ್ಣುಭಕ್ತಿ ನಿರೂಪಣೆಯ ಕೆಲಸವನ್ನು ಸಮೃದ್ಧವಾಗಿ ಮಾಡಿದೆ. ಆದರೆ ಅದರ ಕರ್ತೃ ರುದ್ರಭಟ್ಟ ದ್ವೈತ ಪಂಥದ ವೈಷ್ಣವನಲ್ಲ: ಸ್ಮಾರ್ತ ವಿಷ್ಣುಭಕ್ತರೆನ್ನಬಹುದಾದ ಭಾಗವತ ಪಂಥಕ್ಕೆ ಸೇರಿದವನು. ಹರಿ–ಹರರಲ್ಲಿ ಅಭೇದವನ್ನೆಣಿಸಿದರೂ ವಿಷ್ಣುಪಾರಮ್ಯವನ್ನು ಒಪ್ಪಿಕೊಂಡ ಅದ್ವೈತಿ ಅವನು. 'ಜಗನ್ನಾಥ ವಿಜಯ'ದ ಆದಿಯಲ್ಲಿ ವಿಷ್ಣು (ಕೃಷ್ಣ), ಶಿವ, ಸೂರ್ಯ, ಗಣಪತಿ, ಅಂಬಿಕೆ–(ಸರಸ್ವತಿ)ಯರ ಸ್ತುತಿ ಮಾಡಿರುವದೇ ಅವನು ಸ್ಮಾರ್ತ ಸಂಪ್ರದಾಯದ 'ಪಂಚಾಯತನ'ವನ್ನೊಪ್ಪಿದ ಶ್ರೋತ್ರಿಯನೆಂಬುದಕ್ಕೆ ಸಾಕ್ಷಿಯಾಗಿದೆ. ಆದರೂ ಆತನ ಭಕ್ತಿಕೇಂದ್ರ ವಿಷ್ಣುವೇ ಆಗಿರುವದಕ್ಕೆ ವಿಷ್ಣುವೇ ಬ್ರಹ್ಮ ವಿಷ್ಣು ಮಹೇಶ್ವರಾದಿ ತ್ರಿಮೂರ್ತಿಗಳಿಗೂ ಮೂಲಪುರುಷನೆಂಬ ಪರಂಪರೆಯ ಪ್ರಜ್ಞೆ ಮತ್ತು ಶ್ರದ್ಧೆಯೇ ಕಾರಣವೆಂಬುದು ಸುಸ್ಪಷ್ಟ. ಕವಿ ತನ್ನ ಈ ಕಾವ್ಯದಲ್ಲಿ ಹೀಗೆ ತನಗೊಪ್ಪಿತವಾದ ಭಾಗವತ ಸಂಪ್ರದಾಯಕ್ಕೊಳಪಟ್ಟ ವಿಷ್ಣುಪಾರಮ್ಯ, ಅವತಾರ ಸಿದ್ಧಾಂತ ಹಾಗೂ ಭಕ್ತಿವೈವಿಧ್ಯಗಳ ವಿಚಾರಕಲ್ಪಗಳನ್ನು ಅರಿತು, ಅರಗಿಸಿ

ಕೊಂಡುದು ಹೇಗೆ ಢಾಳವಾಗಿ ಅಭಿವ್ಯಕ್ತವಾಗಿದೆಯೆಂಬುವನ್ನು ವಿಶ್ಲೇಷಿಸಿ ವಿವರಿಸುವದೇ ನಮ್ಮ ಆಶಯ.

I

'ಸರ್ವಂ ವಿಷ್ಣುಮಯಂ ಜಗತ್' ಎಂಬ ವೈದಿಕ ಶ್ರದ್ಧೆ ಅನೇಕ ಉಪನಿಷತ್ತುಗಳಲ್ಲಿ ಮತ್ತೆ ಮತ್ತೆ ವ್ಯಕ್ತವಾಗಿದೆ :

ಏಕೋಹ ವೈ ನಾರಾಯಣ ಆಸೀತ್ ನ ಬ್ರಹ್ಮ ನೇಶಾನಃ ।

—ಮಹೋಪನಿಷತ್.

ಓಂ ಅಥ ನಿತ್ಯೋನಾರಾಯಣಃ
ಬ್ರಹ್ಮನಾರಾಯಣಃ । ಶಿವಶ್ಚ ನಾರಾಯಣಃ......ದೇವ ಏಕೋ ನಾರಾಯಣಃ
ನ ದ್ವಿತೀಯೋ ಅಸ್ತಿಕಶ್ಚಿತ್ । ಯ ಏವಂವೇದ
ಸ ವಿಷ್ಣುರೇವ ಭವತಿ — ಸ ವಿಷ್ಣುರೇವ ಭವತಿ ॥

—ನಾರಾಯಣೋಪನಿಷತ್

ಪುರುಷಾನ್ ನ ಪರಂ ಕಿಂಚಿತ್ । ಸಾ ಕಾಷ್ಠಾ ಸಾ ಪರಾಗತಿಃ ॥

—ಕಠೋಪನಿಷತ್

ಯಸ್ಮಾತ್ ಪರಂ, ನಾ ಪರಂ ಅಸ್ತಿ ಕಿಂಚಿತ್
ಯಸ್ಮಾತ್ ನಾಣೀಯೋ ನ ಜ್ಯಾಯೋಸ್ತಿ ಕಶ್ಚಿತ್ ।

—ಮುಂಡಕೋಪನಿಷತ್

ಈ ಅಭಿಪ್ರಾಯಗಳನ್ನು ತನ್ನವಾಗಿಸಿಕೊಂಡು ರುದ್ರಭಟ್ಟನು ಕಾವ್ಯದ ಮೊದಲ ಆರು ಆಶ್ವಾಸಗಳಲ್ಲಿ ಚೆಲ್ಲುವರಿಸಿದ್ದನ್ನು ಗಮನಿಸುವದೇ ಒಂದು ಸ್ವಾರಸ್ಯಕರವಾದ ಅಭ್ಯಾಸವಾಗಿದೆ. ಇವುಗಳಲ್ಲಿಯ ತನ್ನ ನಂಬಿಕೆಯನ್ನು ಹಲವರ ಬಾಯಿಯಲ್ಲಿ ಒಡಮೂಡಿಸಿದ ಅವನ ವಿಧಾನ ಗಮನಾರ್ಹವಾಗಿದೆ.

ಪಾವಕನೇತ್ರನಾಗಿ ತಮದಿಂ ರಜದಿಂದಜನಾಗಿ ಸತ್ವದಿಂ
ಶ್ರೀವರನಾಗಿ ತೋರುವ ಗುಣತ್ರಯಧಾಮನಮೇಯನವ್ಯಯಂ
ದೇವರದೇವನಾದಿಪುರುಷಂ ಜಳಶಯ್ಯೆಯೊಳಿರ್ದಪಂ...... 1–32

ವಿಷ್ಣುಗೆ । ಪಿರಿಯರ್ ಮತ್ತಿಲ್ಲದೇವರಿದುವೆ ಯಥಾರ್ಥಂ 1–33

—ಇದು ದೇವಮಂತ್ರಿ ಬೃಹಸ್ಪತಿ ಬ್ರಹ್ಮನಿಗೆ ಹೇಳಿದ ಮಾತು.

ಉದಯಸ್ಥಿತಿ ಸಂಹಾರ
ಪ್ರದಂ ಜಗಕ್ಕೆನಿಪ ಕಮಲಭವಹರಿಹರನಾ
ಮದ ಪುರುಷಾಕಾರತ್ರಯ
ಮದು ನಿನ್ನ ವಿಡಂಬಮಲ್ತೆ ಪರಮಜ್ಯೋತೀ ॥

—ಕಾಳಿಂದಿಯ ಭೋಗಿ ಭಾಮಿನಿಯರ ಸ್ತುತಿ ಇದು.

ಎಲೆ ಸರ್ವಾತ್ಮ ಪಿಪೀಲಿಕಾದಿ ಗಜಪರ್ಯಂತಂ ಜಗತ್ಪ್ರಾಣಿಸಂ
ಕುಲಮೆಲ್ಲಂ ಭವದಂಶಜಾಲಮದರಿಂ ನೀನೀಗಳಂಶಾಂಶದಿಂ
ದಿಳೆಯೊಳ್ ಪುಟ್ಟಿದ ನಿನ್ನದೊಂದೆಸಕಮೇಂ ಸಾಮಾನ್ಯಮೋ...... 4–102

ಎಂದು ಸಹಸ್ರಲೋಚನನಾದ ಇಂದ್ರ ಸಹಸ್ರಪತ್ರಾಯತನೇತ್ರನೇ ಆದ ಕೃಷ್ಣನನ್ನು ಹೊಗಳುತ್ತಾನೆ.

ಜಗಮಂ ನುಂಗುವ ಶೂಲಿ ನೀನೆ ಜಗಮಂ ಮಾಳ್ಪಬ್ಜಜಂ ನೀನೆ ತ
ಜ್ಜಗಮಂ ರಕ್ಷಿಪ ವಿಷ್ಣು ನೀನೆ ಜಗಮುಂ ಪೋ ನೀನೆ ಸರ್ವೇಶ ಸ
ರ್ವಗ ಸರ್ವಾತ್ಮಕ ಸರ್ವಭೂತಮಯ ನಿನ್ನಿಂ ಭಿನ್ನವಾಗಿರ್ಪ ವಸ್ತುಗಳಿಲ್ಲ... 5–49

—ಎಂದು ನಾರದನು ನಿರೂಪಿಸುತ್ತಾನೆ.

ಆನತರಪ್ಪರಂಬುಜ ಭವಾದಿಗಳುಂ ತನಗಳ್ಕರಿಂದೆ ತಾ
ನಾನತನಾರ್ಗಮಲ್ಲವಧಿಕರ್ ತನಗಿಲ್ಲದ ಪೆಂಪಿನಿಂದಮೆಂ
ಬಾ ನಳಿನಾಕ್ಷನಂದು ವಸುದೇವನ ದೇವಕಿಯಂಘ್ರಿಗಳ್ಗೆ ಬಂ
ದಾನತನಾದನುಚಿತಂ ಗುರುಸನ್ನತಿ ಮರ್ತ್ಯವೇಷವೊಳ್ 6–84

—ಎಂದು ದೇವನು ಮರ್ತ್ಯನಾಗಿ ಆಡಿದ ಆಟವನ್ನು ಕವಿಯೇ ಸಂತಸದಿಂದ ಸೂಚಿಸುತ್ತಾನೆ.

ತರತಮಮಾಗಿ ಯೋಗಿತರ ಯೋಗವಿಭೇದದೆ ನಿಟ್ಟಿಪಾ ಶಿವಂ
ಪರಮಶಿವಂ ಸದಾಶಿವನೆನಿಪ್ಪಗುಣಂ ಗುಣಿಯಾಗಿ ನೀನಜಂ
ಪರಿಪರನೆಂಬ ಮೂರ್ತಿಗಳನಾಂತ ಮಹಾತ್ಮನೆ ಮರ್ತ್ಯ ಮೂರ್ತಿಯಂ
ಧರಿಯಿಸಿ ದೇವಕೀಸುತನೆನಿಪ್ಪುದು ನಿನ್ನ ವಿನೋದಮಾಗದೇ ॥ 6–90

—ಎಂದು ಸತ್ತ ಮಗನನ್ನು ಮರಳಿ ಪಡೆದ ತಾಯಿ ದೇವಕಿ–ದೇವನನ್ನು ಶಿಶುವಾಗಿ ಹಡೆದ ಹೆಮ್ಮೆಯಿಂದ ಉದ್ಗರಿಸುತ್ತಾಳೆ.

ಹೀಗೆ ಋಷಿ, ಮುನಿ, ದೇವರು, ಗುರುಹಿರಿಯರೆಲ್ಲರ ಬಾಯಿಂದಲ್ಲದೆ ತಾನೇ ಎತ್ತಿ ಆಡುವದರ ಜೊತೆಗೆ—

ತ್ರಿದಶಾಸುರರಂ ಸುಡುವ–
ಗ್ಗದವಿಷಮಂ ನುಂಗಿದಾ ತ್ರಿಣೇತ್ರನುಮಾನೆಂ– ।
ಬುದನರಿಯರ್ ಮಾನವರೆಂ-
ದದರ್ಕೆ ನಗುವಂತೆ ದನುಜರಿಪು ನಸುನಗುತುಂ ॥ 3–82

—ಇದ್ದ ಚಿತ್ರದಿಂದ ವಿಷ್ಣುಪಾರಮ್ಯದ ವಿಚಾರವು ರುದ್ರಭಟ್ಟನ ಮನ, ಎದೆಗಳನ್ನು ತುಂಬಿದ ತುಂಬುಬಗೆಯನ್ನು ಊಹಿಸಬಹುದಾಗಿದೆ.

II

ವೈದಿಕ ಧರ್ಮದ ಸಿದ್ಧಾಂತಗಳಲ್ಲಿ ಅವತಾರಸಿದ್ಧಾಂತವು ಅದರ ಕರ್ಮ ಸಿದ್ಧಾಂತ, ಪುನರ್ಜನ್ಮ ಸಿದ್ಧಾಂತದಷ್ಟೇ ಮೂಲಭೂತವಾದುದು. ಅದೊಂದು ಆಧ್ಯಾತ್ಮ ನಿಯಮ. ನಂಬಿದ ದೇವನು ಭಕ್ತರ ಧರ್ಮಭಾವನೆ, ಆಚರಣೆಗಳಿಗೆ ಲೋಕಕಂಟಕರಿಂದಾಗಿ ಆಪತ್ತು ಒದಗಿದಾಗ ಧರ್ಮಸಂಸ್ಥಾಪನೆಗಾಗಿ ತಾನು ಮರ್ತ್ಯಾಕಾರವನ್ನೇ ತಾಳುವಂತೆ ಹುಟ್ಟುಪಡೆದು ತನ್ನ ಬೋಧನೆ, ಆದರ್ಶ, ಬಾಧಾ ನಿವಾರಣೆಗಳ ಕಾರ್ಯದಿಂದ ಜೀವಕೋಟಿಗೆ ರಕ್ಷಣೆ, ಮಾರ್ಗದರ್ಶನಗಳನ್ನೊದಗಿಸು ವನು. ಹೀಗೆ ಭೂಭಾರದ ಸಮತೋಲನವನ್ನು ಕಾಪಾಡಿ ಅನುಗ್ರಹಿಸುವ ಶಕ್ತಿ, ವ್ಯಕ್ತಿರೂಪದಲ್ಲಿ ಇಳಿದುಬರುವದೆಂಬ ನಂಬಿಕೆ—ಆಳವಾಗಿದೆ. ಈ ಅವತಾರಶಕ್ತಿಗೆ ಮಾನವ ಸ್ವರೂಪ ಪ್ರಕಟನೆ, ಜೀವನದ ನಡವಳಿಕೆಗಳೆಲ್ಲ ಒಂದು ನಟನೆ–ಲೀಲೆ ಅಷ್ಟೇ. ಆದ್ದರಿಂದ ಅದು ಸಾಮಾನ್ಯರಂತೆಯೇ ಇದ್ದು ಅಸಾಮಾನ್ಯವನ್ನು ಸಾಧಿಸುತ್ತದೆ. ಮೊದಲಿನಿಂದಲೂ ಕೌತುಕವನ್ನು ಹುಟ್ಟಿಸಿ, ಮತ್ತೆ ಮತ್ತೆ ಬೆರಗುಪಡಿಸಿ, ಮೊತ್ತದಲ್ಲಿ ಸರ್ವರ, ಸಾರ್ವಕಾಲಿಕ ಮನ್ನಣೆಯು ಕಾಣಿಕೆ ಪಡೆಯುತ್ತದೆ ಎಂಬ ಕಲ್ಪನೆ ಸಹಜ ವಾಗಿ ಇದೆ.

'ಕೃಷ್ಣಾವತಾರ'ದ ಕಥೆಯು ನಿರೂಪಣೆಯಲ್ಲಿ ರುದ್ರಭಟ್ಟನು ಈ ಎಲ್ಲ ವಿಚಾರ ಗಳನ್ನು ಸೂಕ್ತವಾಗಿ ಹಾಗೂ ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾನೆ.

> ದುಷ್ಟೋರಗನಂ ತಗುಳ್ದೆಂ
> ಶಿಷ್ಟಜನಂ ಸೇವಿಪಂತು ಮಾಡುವೆನಿದನು
> ತ್ಕೃಷ್ಟಮೆನೆದುಷ್ಟನಿಗ್ರಹ
> **ಶಿಷ್ಟ ಪ್ರತಿಪಾಲನಾರ್ಥಮೆನ್ನವತಾರಂ** (3–83)

—ಎಂದು ಕೃಷ್ಣನೇ ಹೇಳುತ್ತಾನೆ.

ಅವನ ಅವತಾರಗಳ ಬಗೆಗೆ—"ನೀನಳವಡಿಸಿದ ಕಾರ್ಯ ವಿಧಾನಂಗಳಿವೆಮಗೆ ಪೊಸತೆ ಪೇಳಬ್ಜಾಕ್ಷಾ।" (1–65) ಎಂದು ಭಾರತೀಪತಿ ಬ್ರಹ್ಮ ಮೆಚ್ಚುತ್ತಾನೆ.

'ಕೃಷ್ಣ' ಶಿಶು ಭೂಮಿಗಿಳಿದಾಗಲೇ ವ್ಯಕ್ತವಾಯಿತು 'ಪ್ರಸೂತಿಕಾ ಕೌತುಕ' —ಇದು ತೇಜೋದುರ್ನಿರೀಕ್ಷ್ಯಂ ತೊಳಗಿಬೆಳಗಿ ಕಣ್ಗೊಪ್ಪುತಿರ್ದಪ್ಪುದಿಂತೀ। ಮುದವತ್ಕಂಸಂಗಕಾಂಡಕ್ಷಯು ಸಮುದಿತ ಚಂಡಾಂಶುವೆಂಬಂ। ದದಿನೊಪ್ಪುತ್ತಿರ್ಪ- ದಂದಬ್ಧಿಯೊಳುದಯಿಸಿದಾ ಕೌಸ್ತುಭಂ ಕೌಸ್ತುಭಂದಾ। ಳಿದನೀತಂ ಕೇವಲಂ ದಾನವರಿಪುವೆ ಪೆರಂಗಲ್ಲಿತೀದಿವ್ಯರೂಪಂ॥ (3–2). ಪೂತನೆ ಬಿದ್ದುದು, ಶಕಟನ- ನೊತ್ತಿದುದು, ಯಮಳಾರ್ಜುನವೃಕ್ಷ ಕೆಡವಿದುದು, ಕಾಳಿಯನನ್ನು ಮರ್ದಿಸಿದುದು, ಕೇಶಿಯನ್ನು ಕೊಂದುದು—ಒಂದೇ ಎರಡೇ ಬಾಲಕೃಷ್ಣನ ಸಾಹಸಗಳು ! ಇವೆಲ್ಲಕ್ಕೂ ಒಂದೇ ವಿವರಣೆ ಕವಿಯದು "**ಲೀಲಾಯಿತಂ** ಸ್ವಯಂಪ್ರಭುಗುಚಿತಂ" (3–70)

ಏಕೆಂದರೆ ಹರಿಯ ಮಹತ್ವ "ಪ್ರಥಿತಮಗಾಧಮಗಾಧಮುಮುನ್ನತೋನ್ನತೋನ್ನತ-ಮಲ್ತೇ" (3–106). **ತ್ರೈಲೋಕ್ಯ ಪಾಲಕಂ** ಗೋಪಾಲಕನಾಗಿರ್ದಲೀಲೆ" (4–101)ಯನ್ನು ಬಣ್ಣಿಸುವಲ್ಲಿ ಕವಿಗೆ ಅಮಿತ ಉತ್ಸಾಹ. "ಪಸುಗೂಸುತನದೊಳಂ ಸಾ। ಹಸವತಿಮಾನುಷವತೀಂದ್ರಿಯ"ವೆನಿಸಿ ಜೊತೆಯ ಗೋಪಾಲಕರು ಕಾಡಿಸಿ ಕೇಳಿದರೂ ಕೃಷ್ಣನದು ಸಹಜ ಹಾಸ್ಯದ ಉತ್ತರ :

ಸುರನೋ ಸಿದ್ಧನೋ ಯಕ್ಷನೋ ಗರುಡನೋ ನೀನಾರ್ಗೆಪೇಳೆಂದು ಗೋ–
ಪರೆನಲ್ ಸಪ್ರಣಯಪ್ರಕೋಪಿ ಹರಿ ಕೇಳ್ದಾನಾರುಮಲ್ಲೆಂ ಮದಾ–
ಚರಣಂ ದೂಷ್ಯಮೆ ಮಾಣ್ಬುದೆನ್ನ ಕೆಳೆಯಂ ಮೇಣ್ ಮುಚ್ಚರಿತ್ರಂ ಮನೋ
ಹರಮೇ ಭಾವಿಪುದೆನ್ನನಾತ್ಮಸಮನೆಂದೇಕನ್ಯಥಾ ಕಲ್ಪನಂ ॥ (4–110)

ಇದಕ್ಕೆಲ್ಲ **ಕಾರಣ** ಅಪ್ರಾಕೃತ ಶರೀರಿಯಾದ ದೇವನ ನಡವಳಿಕೆಯನ್ನು ನಾವು ಪ್ರಾಕೃತಿಕ ದೃಷ್ಟಿಯಿಂದ ಕಾಣುವದು. ಅಂತೆಯೇ ತಾಯಿ ದೇವಕಿಯ ಪ್ರೇಮದ ಉದ್ಗಾರ—

ಪ್ರಾಕೃತ ಮನುಷ್ಯಶಿಶುಗೆ–
ತ್ತೀ ಕಂಸನ ಭಯದೆ ನಿನ್ನನೊಲ್ದಿರಿಸಿದೆವಾ
ಗೋಕುಲದೊಳ್ ಮಾಯವೋ
ಹಾಕುಳದಿಂದರಿದೆವಿಲ್ಲ ನಿನ್ನಯ ತೆರನಂ ॥ (6–91)

III

ಇನ್ನುಮೇಲೆ ನಾವು ಗಮನಿಸಬೇಕಾದದ್ದು ರುದ್ರಭಟ್ಟನ ಅಕ್ರೂರ ಭಕ್ತಿಯ ಚಿತ್ರಣ. ನವವಿಧ ಭಕ್ತಿಗಳಲ್ಲಿ 'ವಂದನಾಭಕ್ತಿ'ಗೆ ಅಕ್ರೂರನದೇ ಪರಂಪರಾಗತವಾದ ಪ್ರಸಿದ್ಧ ಹೆಸರು (...ಅಕ್ರೂರಸ್ತ್ವಭಿವಂದನೇ). ಇದನ್ನು ಚಿತ್ರಿಸುವಲ್ಲಿ ಕವಿಯು ಭಾಗವತದಲ್ಲಿ ನಿರೂಪಿತವಾದ ಭಕ್ತನ ಲಕ್ಷಣಗಳ ವಿವರಗಳಿಗೂ ವಂದನಾ ಭಕ್ತಿಯ ವೈಶಿಷ್ಟ್ಯಕ್ಕೂ ಯಾವ ಊನವೂ ಬರದಂತೆ ಬಹು ಎಚ್ಚರ ವಹಿಸಿರುವದು ಕಂಡುಬರುತ್ತದೆ.

ಅಕ್ರೂರನನ್ನು 'ಪರಮಭಾಗವತ'ನೆಂದು ಬಿರುದಿಟ್ಟು ಅವನ ವಿಷ್ಣುಭಕ್ತಿಯಲ್ಲಿ ವಂದನೆಯ ವಿಚಾರಕ್ಕೇ ಪ್ರಾಮುಖ್ಯ ದೊರೆಯುವಂತೆ ಕವಿ ನೋಡಿಕೊಂಡಿದ್ದಾನೆ.

ನಿಜರಥಮನೇರಿ ಕೃಷ್ಣನೆಡೆಗೆ ಸಾಗುತ್ತಿದ್ದಾಗ ಅಕ್ರೂರನು 'ಪರಬ್ರಹ್ಮಮೆ ಸಾಕಾರತೆವೆತ್ತಂ। ದಮನೀಕ್ಷಿಸುವೊಂದು ಸೈಪು ಸಮನಿಸಿತೆನ್ನೊಳ್' (5–69) ಎಂದು ಹರುಷಪಡುತ್ತಾನೆ. ಇಲ್ಲಿಂದ ಮುಂದಿನ ಅವನ ಎಣಿಕೆಗಳೆಲ್ಲ 'ವಂದನ ಭಕ್ತಿ'

ಯನ್ನೇ ಅವಧರಿಸಿ ಹೇಳುತ್ತವೆ. ಮೊದಲ ಪ್ರಸ್ತಾಪವೇ—'ಪೊಡವಿಯೊಳಾಂ ಮೆಯ್ಯಿಕ್ಕಿರೆ...' (5–71) ಸುದರ್ಶನ ಚಕ್ರವನ್ನು ಹಿಡಿಯುವ ದಿವ್ಯ ಕರದಿಂದ ನನ್ನನ್ನು ಎತ್ತಬಹುದೇ ? ಎದ್ದ ನನ್ನನ್ನು ಮಂದರವಂತಳ್ಕೈಸಿದ ಭುಜದಿಂದ ತಳ್ಕೈಸಬಹುದೇ ? ನನ್ನ ಮುಖದ ಮೇಲಣ ಧೂಳಿಯನ್ನು ಶ್ರೀಲಕ್ಷ್ಮಿಯ ಬೆವರ ಹನಿಗಳನ್ನು ಒರಸುವಂತೆ ತೊಡೆಯಬಹುದೇ ? ಸ್ತುತಿಮಾಡಿ ಆರಾಧಿಸಲು ಬ್ರಹ್ಮಾದಿ ದೇವರುಗಳೊಡನೆ ನುಡಿದಂತೆ ದಿವ್ಯವಚನಗಳನ್ನು ಆಡಬಹುದೇ? ಆ ನರಸಿಂಹನೆಲ್ಲಿ? ಈ 'ನೃಕೀಟ'ನೆಲ್ಲಿ ? ಮುಖ್ಯವಾದ ಆತಂಕ ಕಂಸನ ಸೇವಕನೆಂದು ಅಪಮಾನಿಸು ವನೋ ಇಲ್ಲವೆ ಭಕ್ತನೆಂದು ಮನ್ನಿಸುವನೋ ಎಂಬುದು. ಆದರೆ ಇದ್ದ ವಿಚಾರ ಕರ್ಮಸಾಕ್ಷಿಯೂ ಚೈತನ್ಯರೂಪಿಯೂ ಆದ ಕೃಷ್ಣನಿಗೆ ತಿಳಿಯದಿರುವದೇ ? ಎಂದು ಸಂದೇಹವನ್ನು ಕೈಬಿಡುತ್ತಾನೆ (5–72, 75).

ನಂದಗೋಪನ ಮನೆಗೆ ಬಂದು ಇಳಿದಾಗ ಮೊದಲಿಗೆ ಆದುದೇ ಗೋದೋಹನ ಲೀಲೆಯಲ್ಲಿದ್ದ ಕೃಷ್ಣನ ದರ್ಶನ. ಅದನ್ನು ಭಕ್ತಹೃದಯದ ಅಕ್ರೂರನು 'ಸಂತಸ ದಿಂದಾದಿಸ್ವರೂಪದಿಂ ಚೆಲ್ವಾದುದು ಲೀಲಾಸ್ವರೂಪಮೆಂದೀಕ್ಷಿಸಿದಂ' (5–79). ಹರ್ಷೋದ್ರೇಕದಿಂದ ಸಾಷ್ಟಾಂಗ ಪ್ರಣತನಾದ ಆವನ ಭಕ್ತನು ಬಯಸಬಹುದಾದ ದೇವನ 'ಕರಸಂಸ್ಪರ್ಶನ, ಕಾರುಣ್ಯನಿರೀಕ್ಷಣ, ಪ್ರಸಾದೋಕ್ತಿ' (5 – 81) ಗಳೆಲ್ಲ ವನ್ನೂ ಪಡೆದು ಧನ್ಯನಾದನು.

ಮುಂದೆ ಕೃಷ್ಣ–ಬಲರಾಮರನ್ನು ಕರೆದುಕೊಂಡು ಮಧುರೆಯೆಡೆ ಸಾಗಿದಾಗ ಮಧ್ಯಾಹ್ನವಾಗಲು ಯಮುನೆಯ ತಡಿಯಲ್ಲಿ 'ಅಘಮರ್ಷಣ'ವನ್ನರ್ಜಿಸುವ ಮುನ್ನ ಹೊಳೆಯಲ್ಲಿ ಮುಳುಗಿದಾಗ ಕೃಷ್ಣ ದಯಪಾಲಿಸಿದ ವಿರಾಡ್‌ದರ್ಶನಕ್ಕೆ ವಿಸ್ಮಯಾ-ಕ್ರಾಂತನಾಗಿ. ರಥದಲ್ಲಿ ಕುಳಿತಿದ್ದ ವಸುದೇವನಂದನನಿಗೆ ತಲೆವಾಗಿ ಭಕ್ತಿಭರದಿಂದ ಆವನನ್ನು ಸ್ತುತಿಸುತ್ತಾನೆ. ಈ ಸ್ತೋತ್ರವು ಒಟ್ಟು 59 ಸಾಲುಗಳ ಲಲಿತರಗಳೆಯ ರೂಪದಲ್ಲಿದ್ದು ಒಂದು ಸುಸಂಬದ್ಧ ಶಿಲ್ಪವನ್ನು ಪಡೆದಿದೆ. ಸಾಲುಗಳು 1–4 (ತಾತ್ವಿಕ), 5–9 (ಮಹಿಮೆ). 10–24 (ವಿಷ್ಣುಸ್ವರೂಪ). 25–34 (ದಶಾವ ತಾರಗಳ ಸ್ಮರಣೆ). 35–58 (ಪ್ರಸ್ತುತ ಕೃಷ್ಣಾವತಾರದ ಪ್ರಸ್ತಾಪ–ಅದರಲ್ಲಿಯೂ ಕ್ರಮವಾಗಿ (1) ಆವನ ಬಾಲ್ಯದ ಸಾಹಸಗಳು (35–47) (2) ಗೋಪಾಲರ ಸ್ನೇಹ. ಗೋಪಾಂಗನೆಯರ ಪ್ರೀತಿಯ ಪ್ರತ್ರತೆ) (48–58) ಇಷ್ಟೆಲ್ಲ ಹೇಳಿ ಕೊನೆಯ 59ನೆಯ ಸಾಲಿನಲ್ಲಿ—"ದೇವ ನಿತ್ಯೋತ್ಸವದ ನಮಸ್ತೇ ನಮಸ್ತೇ..." ಎಂದು ಮುಕ್ತಾಯಗೊಳಿಸುತ್ತಾನೆ ಕವಿ. ಹೀಗೆ ಅಕ್ರೂರನ ಈ 'ಅಭಿಷ್ಟುತಿ'ಯೂ ಮಂದನೆಯಿಂದಲೇ ಕೊನೆಗಾಣುವದು ಅರ್ಥಪೂರ್ಣವಾಗಿದೆ. ಇದುವರೆಗೂ ವಿಷ್ಣು ಪಾರಮ್ಯದ ಭಾಗವತ ಸಂಪ್ರದಾಯ ಅವತಾರ ಸಿದ್ಧಾಂತ. ಅಕ್ರೂರನ ವಂದನಭಕ್ತಿ ಈ ಮೂರೇ ಅಂಶಗಳಿಗೆ ಸೀಮಿತಪಡಿಸಿ ರುದ್ರಭಟ್ಟನ ವೈದಿಕ ಪರಂಪರಾಪ್ರಜ್ಞೆ,

ಭಾಗವತೋಕ್ತ ಲಕ್ಷಣ ಸಮನ್ವಯದೃಷ್ಟಿಗಳನ್ನು ವಿವರಿಸಿದ್ದಾಯಿತು. ಖಂಡಿತವಾಗಿಯೂ ಕಾವ್ಯಕಲೆಯ ದೃಷ್ಟಿಯಿಂದ ರುದ್ರಭಟ್ಟನು ಒಬ್ಬ ಪ್ರಜ್ಞಾವಂತ ಕವಿ (Conscious poet) ಹಾಗೆಂದು ಭಕ್ತಿ ವಿಚಾರವು ಅವನಲ್ಲಿ ಬರಿಯ ಪಾಂಡಿತ್ಯದ ಸರಕಾಗಿ ಉಳಿಯದೆ ಸಹಜ ಸಂವೇದನೆಯಾಗಿ ಫಲಿಸಿದ ಪರಿಯನ್ನೂ ಕಾಣಬಹುದು.

ದೇವಕಿ ವಾತ್ಸಲ್ಯ

—ಡಾ॥ ಜಿ. ವರದರಾಜರಾವ್

೧

ತಮಿಳಿನ ಕುಲಶೇಖರ ಆಳ್ವಾರರನ್ನು ನೆನೆದ ಕೂಡಲೆ ಅವರು ರಚಿಸಿರುವ ಸಂಸ್ಕೃತದ "ಮುಕುಂದಮಾಲಾ ಸ್ತೋತ್ರ" ಎಲ್ಲ ವೈಷ್ಣವರಿಗೂ ನೆನಪಾಗುವುದು ಸಹಜ. ತಮಿಳನ್ನು ತಿಳಿದವರಿಗೆ ಅವರು ರಚಿಸಿರುವ 'ಪೆರುಮಾಳ್ ತಿರುಮೊಳಿ' ಎಂಬ ಪ್ರಬಂಧವೂ ಅಷ್ಟೇ ಪ್ರಿಯವಾದದ್ದು. ಡಾ॥ ಎನ್. ಎಸ್. ಅನಂತರಂಗಾಚಾರ್ಯರು ಈ ಪ್ರಬಂಧವನ್ನು ಪರಿಚಯ ಮಾಡಿಕೊಡುವಲ್ಲಿ "ಇದರಲ್ಲಿ 105 ಪಾಶುರಗಳಿವೆ, ಹತ್ತು 'ತಿರುಮೊಳಿ'ಗಳಿವೆ. ಒಂದೊಂದು 'ತಿರುಮೊಳಿ'ಯಲ್ಲಿ ಹತ್ತಕ್ಕಿಂತ ಕಡಿಮೆಯಾಗಿಯೋ ಅಥವಾ ಹೆಚ್ಚಾಗಿಯೋ ಪಾಶುರಗಳಿವೆ" ಎಂದು ತಿಳಿಸಿರುವರು.[1]

ಏಳನೆಯ 'ತಿರುಮೊಳಿ'ಯಲ್ಲಿ ಆಳ್ವಾರರು ತಾವು ದೇವಕಿಯೆಂದು ಭಾವಿಸಿಕೊಂಡು, ಶ್ರೀಕೃಷ್ಣನ ಬಾಲಲೀಲೆಯನ್ನು ನೋಡುವ ಭಾಗ್ಯದಿಂದ ವಂಚಿತಳಾದ ಆಕೆಯ ಮಾತೃವಾತ್ಸಲ್ಯವನ್ನು ಬಹಳ ಹೃದಯಂಗಮವಾಗಿ ನಿರೂಪಿಸಿರುತ್ತಾರೆ. ಹಸುಗೂಸಿನ ಆಟಪಾಟಗಳನ್ನು ನೆನೆದು ಪರಿತಪಿಸುವ ದೇವಕಿ, ಒಮ್ಮೆ ಹೀಗೆ ನೊಂದುಕೊಳ್ಳುತ್ತಾಳೆ,

ತಣ್ಣಂ ತಾಮರೈಕ್ಕಣ್ಣನೇ ಕಣ್ಣಾ
  ತವ಴್ನ್ದು ಎಟುನ್ದು ತಳಿರನ್ನದೋರ್ ನಡೈಯಾಲ್
ಮಣ್ಣಿಲ್ ಶೆಮ್ ಪೊಡಿಯಾಡಿವಂದು
  ಎನ್ತನ್ ಮಾರ್ಪಿಲ್ ಮನ್ನಿಡಪೆತ್ತಿಲೇನಂದೋ
ವಣ್ಣಚ್ಚೆಂಬೆರು ಕೈವಿರಲೈನ್ತ್ತುಂ ವಾರಿ
  ವಾಯ್‌ಕ್ಕೊಂಡ ಅಡಿಶಿಲ್ಲಿ ಮಿಚ್ಚಲ್
ಉಣ್ಣಪ್ಪೆತ್ತಿಲೇನೋ ಕೊಡುವಿನೈಯೇನ್!
  ಎನ್ನೈ ಎನ್‌ಶೆಯ್ಯ ಪೆತ್ತದಮ್ಮಾಯೇ'

(ಪೆರುಮಾಳ್ ತಿರು, vii-6)

ಈ ಪಾಶುರದ ಕನ್ನಡ ಅನುವಾದವನ್ನು ಡಾ॥ ಎನ್. ಎಸ್. ಅನಂತರಂಗಾಚಾರ್ಯರು ಹೀಗೆ ಮಾಡಿರುತ್ತಾರೆ—

"ತಂಪಾದವೂ ಸುಂದರವಾದವೂ ತಾವರೆಯಂತಿರುವುವೂ ಆದ ಕಣ್ಣುಗಳನ್ನುಳ್ಳ ಕೃಷ್ಣನೇ, ನೀನು ತೆವಳಿಕೊಂಡು, ಎದ್ದುನಿಂತು, ತಪ್ಪುಹೆಜ್ಜೆಗಳನ್ನಿಡುತ್ತಾ,

---

1 ಆಳ್ವಾರರುಗಳ ಕೃತಿ ಪರಿಚಯ, ಐ.ಬಿ.ಎಚ್. ಪ್ರಕಾಶನ, 1981, ಪು. 68

ಮಣ್ಣಿನಲ್ಲಿ ಆಡಿ, ಆವೇಶದಿಂದ ಬಂದು ಧೂಳಿನೊಡನೆ ನನ್ನ ಮೈಯನ್ನು ಕಟ್ಟಿಕೊಳ್ಳುವಂಥ ಭಾಗ್ಯವನ್ನು ನಾನು ಪಡೆಯಲಿಲ್ಲವಲ್ಲಾ! ಅಯ್ಯೋ, ಚೆಲುವಾದ ಕೆಂಬಣ್ಣದ ಪುಟ್ಟ ಬೆರಳುಗಳೈದರಿಂದಲೂ ನೀನು ಅನ್ನವನ್ನೆತ್ತಿಕೊಂಡು ಊಟ ಮಾಡಿದ ಆ ಶೇಷವನ್ನು ನಾನು ಊಟಮಾಡುವ ಭಾಗ್ಯ ಪಡೆಯಲಿಲ್ಲ; ಅಂಥ ಅನುಭವ ಹೊಂದದ, ಪಾಪಿಯಾದ ನನ್ನನ್ನು ನನ್ನ ತಾಯಿ ಯಾವುದಕ್ಕಾಗಿ ಹೆತ್ತಳು?”

(ಅದೇ, ಪು. 76)

ಕುಲಶೇಖರ ಆಳ್ವಾರರ ಈ ನಿರೂಪಣೆ ಚಿತ್ತಾಕರ್ಷಕವೂ ನವೀನವೂ ಆಗಿದೆ. ಯಾವ ತಾಯಿಗೆ ತಾನೆ ತನ್ನ ಹಸುಗೂಸಿನ ಹೊಳೆಹೊಳೆಯುವ ಪುಟ್ಟ ಕಣ್ಣುಗಳು. ಮೃದುವಾದ ಕೆಂಪು ಪಾದ, ಅಂಬೆಗಾಲಿಟ್ಟುಕೊಂಡು ಬರುವ ಬೆಡಗು, ಮಣ್ಣಾಟವಾಡಿ, ಧೂಳಿನ ಸಮೇತ ತಾಯಿಯನ್ನು ಅಪ್ಪಿಕೊಳ್ಳುವ ವೈಭವ, ಮಗುವಿನ ಎಂಜಲಿನ ಸವಿ ಮೊದಲಾದುವು ಮನಕರಗಿಸದೆ ಇರವು!

ಸಾಮಾನ್ಯವಾಗಿ ನಾವೆಲ್ಲರೂ ಯಶೋದೆಯ ವಾತ್ಸಲ್ಯದ ವೈಭವವನ್ನು ಕೇಳಿರುವೆವೇ ಹೊರತು, ದೇವಕಿಯ ವಾತ್ಸಲ್ಯದ ಸಂಗತಿ ಸೋಜಿಗವಾದುದೇ ಸರಿ. ಸಂಸ್ಕೃತ ಭಾಗವತದಲ್ಲಿಯೂ ಇದರ ಸೂಚನೆ ನನ್ನ ಗಮನಕ್ಕೆ ಬಂದಿಲ್ಲ.

ಈ ಅಪೂರ್ವವಾದ ನಿರೂಪಣೆಯನ್ನು ಮೆಚ್ಚಿಕೊಂಡು, ಕೆ. ಸಿ. ವರದಾಚಾರಿ ಅವರು ತಮ್ಮ ಪುಸ್ತಕವೊಂದರಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯವೂ ಗಮನಾರ್ಹವಾದುದು.

“Kulasekhara utilises mother—child motif as between Devaki and Sri Krishna, he himself assuming the role of Devaki. Thus the hymns of this decade are the cradle songs about Sri Krishna now idealised by His mother, who is said to have been shown His transcendent prowess and identify at the time of His birth. Kulasekhara introduces a pathetic sentiment, for at no time Devaki actually have this delight of singing cradle songs as Sri Krishna was taken away from her to be brought up by Yasoda as her son. It was joy denied to her but given to Yasoda.[2]

2 Alvars of South India, P. 75, Pub.: Bharatiya Vidya Bhavan, 1966.)

೨

ಈ ರಮ್ಯ ಕಲ್ಪನೆಯನ್ನು ಓದಿದ ಬಳಿಕ, ನನಗೆ ಕನ್ನಡ ಹರಿದಾಸ ಸಾಹಿತ್ಯ ವಲ್ಲಿಯೂ ಇದಕ್ಕೆ ಸಂವಾದಿಯಾದ ಸಂದರ್ಭವೇನಾದರೂ ಇರಬಹುದೆ ಎಂದು ಕುತೂಹಲವುಂಟಾಯಿತು.

ಪುರಂದರದಾಸರ ಕೀರ್ತನೆಯೊಂದರಲ್ಲಿ, ಶ್ರೀಕೃಷ್ಣನು ತನ್ನ ತಂದೆ ತಾಯಿಗಳನ್ನು ಕುರಿತಂತೆ ತನ್ನ ಒಡನಾಡಿಗಳು ಹೇಗೆ ಹಂಗಿಸುತ್ತಿದ್ದರೆಂಬ ಉಲ್ಲೇಖವಿದೆ.

ಆಡಹೋದಲ್ಲಿ ಮಕ್ಕಳು ಆಡಿಕೊಂಬುವರು ನೋಡಮ್ಮ ॥ ಪ ॥
ನೋಡಿ ನೋಡಿ ಎನ್ನ ಮುಖವ ನೋಡಿ ಕಣ್ಣು ಮಿಟುಕುವರಮ್ಮ ॥ ಅ. ಪ ॥
ದೇವಕಿ ಹೆತ್ತಳಂತೆ ವಸುದೇವನೆಂಬುವ ಪಿತನಂತೆ
ಕಾವಲಲ್ಲಿ ಹುಟ್ಟಿದೆನಂತೆ ಮಾವಗಂಜಿಲ್ಲಿ ತಂದರಂತೆ ॥ ೧ ॥

೦ ೦ ೦

ನೀನೆನ್ನ ಹಡೆದಿಲ್ಲವಂತೆ ನಾನಿನ್ನ ಮಗನಲ್ಲವಂತೆ
ಧೇನು ಕಾಯುವರಿಲ್ಲವೆಂದು ಸಾನುರಾಗದಿ ಸಲಹಿದೆಯಂತೆ ॥ ೨ ॥

ಈ ಕೀರ್ತನೆಯಲ್ಲಿ ಪ್ರಾಸಂಗಿಕವಾಗಿ ದೇವಕಿ ಮತ್ತು ವಸುದೇವರ ಹೆಸರನ್ನು ಹೇಳಲಾಗಿದೆಯೇ ಹೊರತು, ಆಳ್ವಾರರ ಪಾಶುರದಂತೆ ಇದು ನೇರವಾಗಿ ದೇವಕಿಯ ಹೃದಯವನ್ನು ಪರಿಚಯ ಮಾಡಿಕೊಡುವುದಿಲ್ಲ.

ವಿಜಯದಾಸರ ಸುಳಾದಿಗಳನ್ನು ಪರಿಶೀಲಿಸುತ್ತಿರುವಲ್ಲಿ, ಉಡುಪಿಯ ಕೃಷ್ಣನ ಮೂರ್ತಿಯನ್ನು ಕುರಿತಂತೆ ಚಿತ್ರಿಸಿರುವ ಪ್ರಸಂಗವೊಂದರಲ್ಲಿ ದೇವಕಿಯ ತಾಯ್ತನದ ಹಂಬಲದ ಹೊಳಪು ಚಿತ್ತಾಕರ್ಷಕವಾಗಿ ತೋರಿಬಂದಿತು. ಈ ಸ್ವಾರಸ್ಯವಾದ ಸುಳಾದಿಯ ಎರಡನೆಯ ನುಡಿಯ ಪ್ರಾರಂಭವೇ ಬಲು ಸೊಗಸು—

ದ್ವಾರಾವತಿಯೆತ್ತ ಪಡುವಲ ದಿಕ್ಕಿನ
ವಾರಿನಿಧಿಯೆತ್ತ ಗೋಪಿಚಂದನವೆತ್ತ
ಮಾರಾಟದ ಹಡಗು ಪೋಗಿ ಬರುವುದೆತ್ತ
ಭಾರತಿಪತಿಯಾದ ಮಧ್ವಮುನಿಯೆತ್ತ
ಈ ರೀತಿ ಸಂಗತಿಯೆತ್ತ ಆವಲ್ಲಿ ಕಲ್ಪಿಸಿ
ತೋರಿದೆಯೊ ದೇವ ಆರು ಬಲ್ಲರು ನಿನ್ನ
ಮಹಾವಿಚಿತ್ತರವು
ಸಾರಲಾಪೆನೇ ನಿತ್ಯ ಉಡುಪಿನ ಸಿರಿಕೃಷ್ಣ
ಜಾರಚೋರ ನಮ್ಮ ವಿಜಯವಿಠಲರೇಯ

ಈ ಮಾತುಗಳನ್ನು ಕೇಳಿದ ಕೂಡಲೆ, ಶ್ರೀ ಮಧ್ವಾಚಾರ್ಯರಿಗೆ ಸಮುದ್ರ ತೀರದಲ್ಲಿ ಹಾಯ್ದು ಬರುತ್ತಿದ್ದ ಹಡಗಿನ ಗೋಪಿಚಂದನದ ಗಡ್ಡೆಯೊಂದರಲ್ಲಿ ಶ್ರೀಕೃಷ್ಣನ ವಿಗ್ರಹ ದೊರೆತದ್ದು ಎಷ್ಟು ಅತಿಶಯವಾದ ಘಟನೆಯೆನ್ನುವುದು

ವ್ಯಕ್ತವಾಗುತ್ತದೆ. ಕಡೆಗೋಲು ಮತ್ತು ಹಗ್ಗವನ್ನು ಹಿಡಿದುಕೊಂಡಿರುವ ಆ ಮೂರ್ತಿಯ ನಿರ್ಮಾಣವನ್ನು ಕುರಿತಂತೆ ಮೂರನೆಯ ನುಡಿ ಇಂತಿದೆ—

ಅಂದು ದೇವಕಿ ದೇವಿ ದ್ವಾರಕಾಪುರದಲ್ಲಿ
ಒಂದು ದಿವಸ ನಿನ್ನ ಮಾಯ ಮುಸುಗೆ
ಕಂದ ನೀನಾಗಿ ಗೋಕುಲದಲ್ಲಿ ಗೋಪಿಯ
ಮುಂದೆ ಬಾಲಕನಾಗಿ ತೋರಿದಾಟ
ಒಂದಾದರು ನೋಡಿ ದಣಿಯಲಿಲ್ಲವು ಮನಸು
ಎಂದೆನೆ, ಜನನಿಯ ಮಾತು ಕೇಳಿ
ನಂದನನಾಗಿ ತೋರುವೆನೆಂದು ನೆನೆದು ಗೋ
ವಿಂದನು ಗೋಪಳ್ಳಿಯಲಿ ನಲಿದದ್ದು
ಒಂದೊಂದು ತೋರುತ್ತ ಬರಲದರೊಳಗೆ
ಚೆಂದವಾದ ರೂಪ ಮನಕೆ ಪೊಳೆಯೆ
ನಿಂದಿರ ಪೇಳಿ ಮಗನ ಮುದ್ದಾಡಿ ನೋಡಿ,
ತಂದೆ ಈ ರೂಪದಲ್ಲಿ ಭೂಮಿಯೊಳಗೆ
ಕುಂದದರ್ಚನೆಗೊಂಡು ಕೀರ್ತಿ ಮೆರೆವುದೆಂದು
ಮಂದಹಾಸದಲಿ ಪೇಳಲು ಕೈಕೊಂಡು
ಒಂದು ಕೈಯಲಿ ಕಡೆಗೋಲ ಪಿಡಿದು, ಮ
ತ್ತೊಂದು ಕೈಯಲಿ ನೇಣ ಧರಿಸಿ ಬಾಲ
ನಂದದಿ ಇರಲಿತ್ತ ಭೈಷ್ಮಿ ವಿಶ್ವಕರ್ಮ
ನಿಂದ ಅದರಂತೆ ರಚಿಸ ಹೇಳಿ ನಂದ
ದಿಂದಲಿ ತನ್ನ ಮೂಗುತ್ತಿಯನು ಇಟ್ಟು
ಸುಂದರ ವಿಗ್ರಹದೊಡನಾಡುತ್ತ
ಇಂದಿರೆ ಇರೆ, ಇತ್ತ ಕಲಿಯುಗ ಬರೆ ಗೋಪಿ–
ಚಂದನದೊಳು ನಿನ್ನ ಅಡಗಿಸಲು
ಸಿಂಧುವಿನೊಳಗೊಬ್ಬ ಹಡಗದ ವಶಕ್ಕೆ
ತಂದಿರೆ ತವಕದಿಂದಲಿ ಅಲ್ಲಿಂದ
ನಂದತೀರ್ಥರಿಗೊಲಿದ ಉಡುಪಿನ ಸಿರಿಕೃಷ್ಣ
ಕಂದರ್ಪಪಿತ ನಮ್ಮ ವಿಜಯವಿಠಲರೇಯ[3]

ಪ್ರಕೃತ ಸುಳಾದಿಯಲ್ಲಿ ವಿಜಯದಾಸರ ಮುಖ್ಯ ಉದ್ದೇಶ ಉಡುಪಿಯ ಕೃಷ್ಣನ ಮೂರ್ತಿಯ ಸ್ವರೂಪವನ್ನು ಕುರಿತು ಹೇಳುವುದಾದರೂ, ಆ ನಿಮಿತ್ತದಲ್ಲಿ

---

3 ಈ ಸುಳಾದಿಯನ್ನು ಪಾವಂಜೆ ಗುರುರಾವ್ ಅವರು ಪ್ರಕಟಿಸಿರುವ "ವಿಜಯದಾಸರ ಸುಳಾದಿಗಳು, ಭಾಗ–೨, ಪ್ರ. 1939, ಪು. ೧–೨" ರಿಂದ ಆರಿಸಿಕೊಳ್ಳಲಾಗಿದೆ. ಸದ್ಯಕ್ಕೆ ನನಗೆ ತಿಳಿದುಬಂದಿರುವ ಮಟ್ಟಿಗೆ ಈ ಸುಳಾದಿ ಐದು ಹಸ್ತಪ್ರತಿಗಳಲ್ಲಿದೆ.

ಇಲ್ಲಿ ವ್ಯಕ್ತವಾಗುವ ದೇವಕಿಯ ಮಾತೃವಾತ್ಸಲ್ಯ ಮತ್ತು ರುಕ್ಮಿಣಿಯ ವಿಸ್ಮಯ ಮಿಶ್ರಿತ ಮನೋಭಾವಗಳು ಬೆಳಕಿಗೆ ಬಂದಿವೆ. ಶ್ರೀ ಕೃಷ್ಣನ ವಿಗ್ರಹ ನಿರ್ಮಾಣ ದಲ್ಲಿ ವಿಶ್ವಕರ್ಮನ ಪಾತ್ರವೂ ಪ್ರಶಸ್ತವಾದದ್ದು. ದೇವಕಿ ಮತ್ತು ರುಕ್ಮಿಣಿಯರಿಗೆ ಅಲಭ್ಯವಾದ ಶ್ರೀಕೃಷ್ಣನ ಬಾಲ್ಯದರ್ಶನ ಹೇಗಾಯಿತೆಂದು ತಿಳಿಯ ಹೇಳುವ ಈ ಐತಿಹ್ಯಕ್ಕೆ ವಿಜಯದಾಸರಿಗೆ ಯಾವ ಆಕರ ದೊರೆಯಿತೋ ಏನೋ ?

ತಮಿಳಿನ ಪಾಶುರಗಳಲ್ಲಿ, ಕುಲಶೇಖರ ಆಳ್ವಾರರು ತಾವು ದೇವಕೀಭಾವದಿಂದ ಕೃಷ್ಣನ ಬಾಲಲೀಲೆಗಳನ್ನು ವರ್ಣಿಸಿದ್ದರೆ, ಇಲ್ಲಿ ವಿಜಯದಾಸರು ದೇವಕಿಯ ಪಾತ್ರದ ಮೂಲಕವೇ ಆತನ ಬಾಲ್ಯವನ್ನು ಪ್ರಸ್ತಾಪಿಸಿರುವುದು ಮತ್ತಷ್ಟು ಮಿಗಿಲಾಗಿ ತೋರುತ್ತದೆ. ದೇವಕಿಯ ಮಾತೃಹೃದಯದ ದರ್ಶನ ಪ್ರತ್ಯಕ್ಷವಾಗಿಯೇ ಆಗುತ್ತದೆ.

ಉಡುಪಿಯ ಶ್ರೀಕೃಷ್ಣ ವಿಗ್ರಹ ಗೋಪಿಚಂದನದಲ್ಲಿ ದೊರೆತ ಸಂಗತಿಯನ್ನು ನಮ್ಮ ಹರಿದಾಸರು ಅಂಗೀಕರಿಸಿ, ಆಗಿಂದಾಗ್ಗೆ ಅದನ್ನು ಉಲ್ಲೇಖಿಸಿದ್ದರೂ, ಈ ಬಗ್ಗೆ ನಾರಾಯಣ ಪಂಡಿತಾಚಾರ್ಯರು ತಮ್ಮ "ಸುಮಧ್ವವಿಜಯ"ದಲ್ಲಿ ಏನನ್ನೂ ಹೇಳದಿರು ವುದು ಎಷ್ಟು ಸೋಜಿಗವೆನ್ನುವುದನ್ನು ಈಗಾಗಲೇ ವಿದ್ವಾಂಸರು ಗಮನಿಸಿರುತ್ತಾರೆ. ನಾರಾಯಣ ಪಂಡಿತಾಚಾರ್ಯರು ಶ್ರೀ ಮಧ್ವಾಚಾರ್ಯರು ಶ್ರೀಕೃಷ್ಣನ ಶಿಲಾಮೂರ್ತಿ ಯನ್ನು ತಮ್ಮ ಶಿಷ್ಯರ ಕೈಯಿಂದ ಶುದ್ಧಿಮಾಡಿಸಿ ಮಧ್ವಸರೋವರದಲ್ಲಿ ಜಲಾಧಿವಾಸ ಕ್ಕಾಗಿ ಇಡಿಸಿದರೆಂದೂ, ಅನಂತರ ಅದನ್ನು ಮೇಲೆ ತರಲು ಮೂವತ್ತು ಮಂದಿ ಪ್ರಯತ್ನಿಸಿದರೂ ಆಗಲಿಲ್ಲವೆಂದೂ, ಕಡೆಗೆ ಶ್ರೀ ಮಧ್ವಾಚಾರ್ಯರೊಬ್ಬರೇ ಆವಿಗ್ರಹ ವನ್ನು ಅನಾಯಾಸವಾಗಿ ಎತ್ತಿ ತಂದು ಪ್ರತಿಷ್ಠಿಸಿದರೆಂದೂ ತಿಳಿಸಿರುತ್ತಾರೆ.[4]

ಉಡುಪಿಯ ಶ್ರೀಕೃಷ್ಣನ ಮೂರ್ತಿಯನ್ನು ಕುರಿತಂತೆ ಆಧುನಿಕ ವಿದ್ವಾಂಸರು ಇನ್ನೂ ಕೆಲವು ಹೊಸ ಅಭಿಪ್ರಾಯಗಳನ್ನು ನಮ್ಮ ಮುಂದೆ ಇಟ್ಟಿರುತ್ತಾರೆ.[5] ಪ್ರಕೃತದಲ್ಲಿ ಆ ವಿವರಗಳು ಅಗತ್ಯವಲ್ಲವಾದುದರಿಂದ ಅವುಗಳನ್ನು ಇಲ್ಲಿ ಪ್ರಸ್ತಾವಿಸಿಲ್ಲ.

---

4 ನಾರಾಯಣ ಪಂಡಿತಾಚಾರ್ಯರ ಸುಮಧ್ವವಿಜಯದ ಪದ್ಯಗಳು ಹೀಗಿವೆ :—

ಗೋಪಿಕಾಪ್ರಣಯಿನಃ ಶ್ರಿಯಃಪತೇ–
ರಾಕೃತಿಂ ದಶಮತಿಃ ಶಿಲಾಮಯೀಮ್
ಶಿಷ್ಯಕೈಸ್ತ್ರಿ ಚತುರೈರ್ಜಲಾಶಯೇ
ಶೋಧಯನ್ನಿಹ ತತೋ ವ್ಯಸಾಹಯತ್
ಸ್ಪರ್ಶನಾದ್ಭಗವತೋಽತಿ ಪಾವನಾತ್
ಸನ್ನಿಧಾನಪದತಾಂ ಗತಾಂ ಹರೇಃ
ತ್ರಿಂಶದುದ್ಧೃತನರೈಃ ಸುದುರ್ಧರಾಂ
ಲೀಲಯಾನಯದಿಮಾಮಸಿ ಮೇಶಮ್

ದಶಮತಿಜ ಶ್ರೀಮಧ್ವಾಚಾರ್ಯರು (ಸರ್ಗ ix–೯೦–೯೨)

5 ನೋಡಿ: ಕೃಷ್ಣಪ್ರತಿಷ್ಠೆ–ಪೂರ್ಣಪ್ರಜ್ಞ ಪ್ರಶಸ್ತಿ, ಪು. 75–77 ; ಲೇ॥ ಎಸ್. ಕೆ. ರಾಮಚಂದ್ರರಾವ್, ಬೆಂಗಳೂರು ; ಪ್ರ : ಗೀತಾ ಬುಕ್ ಹೌಸ್, ಮೈಸೂರು.

ಕನ್ನಡ ಹರಿದಾಸರಂತೂ ಯಶೋದೆಯ ವಾತ್ಸಲ್ಯವನ್ನು ಪರಿಪರಿಯಾಗಿ ಪ್ರತಿಪಾದಿಸಿರುತ್ತಾರೆ. ಈ ಮಧ್ಯೆ ವಿಜಯದಾಸರು ದೇವಕಿ ವಾತ್ಸಲ್ಯದತ್ತ ನಮ್ಮ ಗಮನವನ್ನು ಸೆಳೆದಿರುವುದು ತುಂಬ ಸ್ತುತ್ಯವಾದುದು. ಈ ಅಪೂರ್ವ ವಿಷಯ ಈ ಮೊದಲೇ ತಮಿಳಿನ ಆಳ್ವಾರರ ಪ್ರಬಂಧದಲ್ಲಿ ಪ್ರಕಟವಾಗಿರುವುದು ಮತ್ತಷ್ಟು ವಿಚಾರಾರ್ಹವಾದ ಸಂಗತಿ.

ಆಷಾಢಸ್ಯ ಪ್ರಶಮ/ಪ್ರಥಮ ದಿವಸೇ

—ಪ್ರೊ|| ಗರ್ಗೇಶ್ವರಿ ವೆಂಕಟಸುಬ್ಬಯ್ಯ

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನದ ಆಶ್ರಯದಲ್ಲಿ 1981ರಲ್ಲಿ ನಡೆದ ಹಸ್ತಪ್ರತಿಶಾಸ್ತ್ರ ವಿಚಾರಗೋಷ್ಠಿಯಲ್ಲಿ ವಿದ್ವಾಂಸರು ಮಂಡಿಸಿದ ಪ್ರಬಂಧಗಳು ಈಗ ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ. ಈ ಗ್ರಂಥದಲ್ಲಿನ "ಸಂಸ್ಕೃತದಲ್ಲಿ ಹಸ್ತಪ್ರತಿಶಾಸ್ತ್ರ ಮತ್ತು ಗ್ರಂಥಸಂಪಾದನೆ" ಎಂಬ ಪ್ರಬಂಧದಲ್ಲಿ ಡಾ|| ಕೆ. ಕೃಷ್ಣಮೂರ್ತಿಯವರು ಕೊಟ್ಟಿರುವ ಅನೇಕ ಪಾಠನಿರ್ಣಯದ ಉದಾಹರಣೆಗಳಲ್ಲಿ ಒಂದು ಕಾಳಿದಾಸನ ಮೇಘಸಂದೇಶದಿಂದ ಆಯ್ದ ಪದ್ಯಭಾಗ. ಈ ವಿಷಯದಲ್ಲಿ ಡಾ|| ಕೃಷ್ಣಮೂರ್ತಿಗಳ ನಿರೂಪಣೆ ಹೀಗಿದೆ[1] :

"ಯಕ್ಷನು ಮೇಘವನ್ನು ನೋಡಿದ್ದು ಎಂದು ? ಯಾವ ತಿಂಗಳಲ್ಲಿ ? ಎಂಬುದೇ ಸಮಸ್ಯೆ. ಮೇಘದೂತದ ಎರಡನೆಯ ಪದ್ಯದಲ್ಲಿ—

ಆಷಾಢಸ್ಯ ಪ್ರಥಮ ದಿವಸೇ ಮೇಘಮಾಶ್ಲಿಷ್ಟಸಾನುಂ
ವಪ್ರಕ್ರೀಡಾಪರಿಣತಗಜಪ್ರೇಕ್ಷಣೀಯಂ ದದರ್ಶ

ಎಂಬ ಪಾಠ ಮಲ್ಲಿನಾಥನಿಂದ ಆದೃತವಾಗಿದೆ. ಕಾಶ್ಮೀರದ ವ್ಯಾಖ್ಯಾನಕಾರನಾದ ವಲ್ಲಭದೇವ ಸ್ವೀಕರಿಸಿರುವ ಪಾಠ 'ಆಷಾಢಸ್ಯ ಪ್ರಶಮ ದಿವಸೇ' ಎಂಬುದು[2].

---

1 ಹಸ್ತಪ್ರತಿಶಾಸ್ತ್ರ—ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, 1983. ಪುಟಗಳು 46, 47.

2 ಈಗ ಉಪಲಬ್ಧವಿರುವ ಮೇಘದೂತದ ಟೀಕೆಗಳಲ್ಲಿ ಪ್ರಾಚೀನತಮವಾದುದು ವಲ್ಲಭದೇವನದು. ಇವನು ಮಲ್ಲಿನಾಥನಿಗಿಂತ ಸುಮಾರು 4 ಶತಮಾನಗಳಷ್ಟು ಹಿಂದಿನವನು. ವಲ್ಲಭದೇವನಿಂದ ಸ್ವೀಕೃತವಾದ ಶ್ಲೋಕಾರ್ಧದ ಪಾಠ ಮತ್ತು ಅದರ ಮೇಲಿನ ವ್ಯಾಖ್ಯಾನ ಇಂತಿವೆ :

ಆಷಾಢಸ್ಯ **ಪ್ರಶಮ ದಿವಸೇ** ಮೇಘಮಾಶ್ಲಿಷ್ಟಸಾನುಂ
ವಪ್ರಕ್ರೀಡಾಪರಿಣತಗಜಪ್ರೇಕ್ಷಣೀಯಂ ದದರ್ಶ || (2ನೆಯ ಪದ್ಯದ ಉತ್ತರಾರ್ಧ)
ಆಷಾಢಸ್ಯ ಪ್ರಶಮ ದಿವಸೇ ಸಮಾಪ್ತಿದಿನೇ ಗ್ರೀಷ್ಮಾವಸಾನೇ । ಕೇಚಿತ್ತು
ಶಕಾರ ಥಕಾರಯೋರ್ಲಿಪಿ ಸಾರೂಪ್ಯ ಮೋಹಾತ್ ಪ್ರಥಮ ಇತ್ಯೂಚುಃ
ಕಥಂಕಥಮಪಿಚೈತಮೇವಾರ್ಥಂ ಪ್ರತಿಪನ್ನಾಃ । ವರ್ಷಾಕಾಲಸ್ಯ
ಪ್ರಸ್ತುತತ್ವಾದಾದಿ ದಿನ ಮಿತ್ಯೇತತ್ತ್ವತೀವ ವಿರುದ್ಧಂ ।

—Kalidasa's Meghaduta, Ed. E. Hultzsch,
Royal Asiatic Society, London 1911.

'ಚೈತ್ರ–ವೈಶಾಖ' ವಸಂತಋತು, 'ಜ್ಯೇಷ್ಠ–ಆಷಾಢ' ಗ್ರೀಷ್ಮಋತು ಎಂಬ ನಮ್ಮ ಆರು ಋತುಗಳ ಕಲ್ಪನೆಯಲ್ಲಿ ಆಷಾಢ ಬೇಸಗೆಯಲ್ಲಿ ಬರುವುದೇ ಹೊರತು ಮಳೆಗಾಲದಲ್ಲಿ ಅಲ್ಲವಾದ್ದರಿಂದ ಇದನ್ನು ಪ್ರಶಮ ದಿವಸವೆಂದು ಮಾರ್ಪಡಿಸುವ ಯತ್ನ ನಡೆದಂತೆ ಕಾಣುತ್ತದೆ. ಇದನ್ನು ಒಪ್ಪಿದರೆ

ಶೇಷಾನ್ ಮಾಸಾನ್ ಗಣಯ ಚತುರೋ ಲೋಚನೇ ಮೀಲಯಿತ್ವಾ

ಎಂದು[3] ಮುಂದೆ ಕಾಲಿದಾಸ ಹೇಳುವ ದಿನಗಣನೆಯ ಲೆಕ್ಕ ತಪ್ಪುತ್ತದೆ. ಆಷಾಢದ ಆದಿಯಿಂದ ಎಂದರೆ ಏಕಾದಶಿಯಿಂದ ಉತ್ಥಾನದ್ವಾದಶಿಯ ವೇಳೆಗೆ ನಾಲ್ಕು ತಿಂಗಳ ಅವಧಿಯಾಗುತ್ತದೆಯೇ ಹೊರತು ಆಷಾಢದ ಅಂತ್ಯದಿಂದ ಅಲ್ಲ. ಘಟಖರ್ಪರ ಕಾವ್ಯದಲ್ಲೂ ವರ್ಷಋತುವನ್ನು 'ಆಷಾಢಾದಿ'ಯೆಂದೇ ಹೇಳಿದೆ. ಇದಕ್ಕೆ ಕಾರಣ ಕಾಲಿದಾಸನ ಕಾಲದಲ್ಲಿ ವರ್ಷದಲ್ಲಿ ಚಾತುರ್ಮಾಸಗಳ ಮೂರೇ ಋತುಗಳನ್ನು ಗಣನೆ ಮಾಡುತ್ತಿದ್ದರು ; ವರ್ಷಋತು ಆಷಾಢದಿಂದಲೇ ಆರಂಭವಾಗುತ್ತಿತ್ತು, ಜಾಯಸೀಕವಿಯ 'ಪದಮಾವತ್' ಎಂಬ ಹಿಂದೀಕಾವ್ಯದಲ್ಲೂ 'ಚರ್ಹ ಆಸಾಢ ಗಂಗನ್ ಘನ ಸಾಜಾ' ಮುಂತಾಗಿ ಈ ಕವಿಸಮಯ ಉತ್ತರಕಾಲದಲ್ಲೂ ಪ್ರಚಲಿತವಿದ್ದುದು ಕಾಣುತ್ತದೆ. ಆದ್ದರಿಂದ 'ಪ್ರಥಮ ದಿವಸೇ' ಎಂದೇ ಇಲ್ಲಿ ಪಾಠನಿರ್ಣಯ ಸರಿ. ಇದಕ್ಕೆ ಮಲ್ಲಿನಾಥನ ವ್ಯಾಖ್ಯಾನದಿಂದಲೂ ಪುಷ್ಟಿ ದೊರೆಯುತ್ತದೆ."

ಮೇಲಿನ ವಾದಸರಣಿಯನ್ನು ವಿಮರ್ಶಿಸಿ ಮೂಲಪಾಠವನ್ನು ನಿರ್ಣಯಿಸುವುದೇ ಈ ಲೇಖನದ ಉದ್ದೇಶ.

ಋತುಸಂಖ್ಯಾ ವಿಷಯ : ವೇದಸಂಹಿತೆಗಳಲ್ಲಿ ವರ್ಷವನ್ನು ಮೂರು ಭಾಗಗಳಾಗಿ ವಿಭಜಿಸುವ (ಎಂದರೆ ಮೂರು ಋತುಗಳ) ಕಲ್ಪನೆ ಕಂಡುಬಂದರೂ ಬ್ರಾಹ್ಮಣಗಳ ಕಾಲಕ್ಕೇ ಐದು ಅಥವಾ ಆರು ಋತುಗಳನ್ನಾಗಿ ಭಾಗಮಾಡುವ ರೂಢಿ ಬಂದಿತ್ತು. ತೈತ್ತಿರೀಯ ಬ್ರಾಹ್ಮಣದಲ್ಲಿ ವರ್ಷಕ್ಕೆ ಐದು ಋತುಗಳೆಂದು ಹೇಳಿದ್ದರೆ, ಐತರೇಯ ಬ್ರಾಹ್ಮಣದಲ್ಲಿ ಹೇಮಂತ ಶಿಶಿರಗಳನ್ನು ಒಂದಾಗಿ ಎಣಿಸಿ

---

3 ಅದೇ ಗ್ರಂಥದಲ್ಲಿ ಕೊಟ್ಟಿರುವಂತೆ ವಲ್ಲಭದೇವನಿಂದ ಸ್ವೀಕೃತವಾದ ಈ ಶ್ಲೋಕಾರ್ಧದ ಪಾಠ ಮತ್ತು ಅದರ ವ್ಯಾಖ್ಯಾನ ಇಂತಿವೆ :

ಶಾಪಾಂತೋಮೇ ಭುಜಗಶಯನಾದುತ್ಥಿತೇ ಶಾರ್ಙ್ಗಪಾಣೌ
ಮಾಸಾನನ್ಯಾನ್ಗಮಯ ಚತುರೋ ಲೋಚನೇ ಮೀಲಯಿತ್ವಾ ।

(107ನೆಯ ಪದ್ಯದ ಪೂರ್ವಾರ್ಧ)

ಕಾರ್ತಿಕ ಶುಕ್ಲ ದ್ವಾದಶ್ಯಾಂ ಭುಜಗಶಯನಾತ್ಕ್ಷೀರಪಂಲ್ವಾದುತ್ಥಿತೇ ಶಾರ್ಙ್ಗಪಾಣೌ ಪರೌ ಮಮ ಶಾಪಾಂತೋ ಭವಿಷ್ಯತಿ । ತದೈವ ವರ್ಷಸ್ಯ ಪರಿಪೂರ್ಣತ್ವಾತ್ । ಅತಶ್ಚಾದ್ಯಾರಭ್ಯ ಮಾಸ ಚತುಷ್ಟಯಂ ಲೋಚನೇ ಮೀಲಯಿತ್ವಾ ಯಥಾಕಥಂಚಿತ್ ಗಮಯಾತಿವಾಹಯ ।

ಐದು ಋತುಗಳೆಂದು ಹೇಳಿದೆ. ಶತಪಥ ಬ್ರಾಹ್ಮಣದಲ್ಲಿ ವಸಂತ ಗ್ರೀಷ್ಮ ವರ್ಷ ಋತುಗಳನ್ನು ದೇವಋತುಗಳೆಂದೂ ಶರತ್ ಹೇಮನ್ತ ಶಿಶಿರಗಳನ್ನು ಪಿತೃಋತು ಗಳೆಂದೂ ಕರೆದಿದೆ.[4]

ಯಾಜುಷ ವೇದಾಂಗ ಜ್ಯೌತಿಷದಲ್ಲಿ ಸೂರ್ಯನ 4½ ನಕ್ಷತ್ರ ಭೋಗಕಾಲವು (ಎಂದರೆ ಸೂರ್ಯನು 2 ರಾಶಿಗಳಲ್ಲಿ ಸಂಚರಿಸುವ ಕಾಲ) ಒಂದು ಋತುವೆಂದೂ, ವರ್ಷಕ್ಕೆ 6 ಋತುಗಳು ಅಥವಾ 2 ಅಯನಗಳೆಂದೂ ಹೇಳಿದೆ.[5] ಕೌಟಿಲೀಯ ಅರ್ಥಶಾಸ್ತ್ರದಂತೆ ಎರಡು ತಿಂಗಳುಗಳಿಗೆ ಒಂದು ಋತು, ಶ್ರಾವಣ ಭಾದ್ರಪದಗಳು ಸೇರಿ ವರ್ಷಋತು ಮತ್ತು ವರ್ಷಋತುವಿನಿಂದ ದಕ್ಷಿಣಾಯನ ಪ್ರಾರಂಭ.[6] ವಾಲ್ಮೀಕಿ ರಾಮಾಯಣದಲ್ಲಿ ಆರು ಋತುಗಳ ಉಲ್ಲೇಖವಿದೆ.[7] ಕಾಲಿದಾಸನ ಋತು ಸಂಹಾರದಲ್ಲಿ ಆರು ಋತುಗಳ ವರ್ಣನೆಯಿದೆ.

---

4 ಪಂಚ ವಾ ಋತವಃ ಸಂವತ್ಸರಃ (ತೈತ್ತಿರೀಯ ಬ್ರಾಹ್ಮಣಂ 2, 7, 10, 2)
—ಆನಂದಾಶ್ರಮ ಮುದ್ರಣಾಲಯ, ಪುಣೆ, 1938

ದ್ವಾದಶ ಮಾಸಾಃ ಪಂಚರ್ತವೋ ಹೇಮಂತಶಿಶಿರಯೋಃ ಸಮಾಸೇನ
(ಐತರೇಯ ಬ್ರಾಹ್ಮಣಂ 1, 1)—ಆನಂದಾಶ್ರಮ ಮುದ್ರಣಾಲಯ, ಪುಣೆ 1930

ವಸನ್ತೋ ಗ್ರೀಷ್ಮೋ ವರ್ಷಾಃ। ತೇ ದೇವಾ ಋತವಃ ಶರದ್ಧೇಮನ್ತಃ ಶಿಶಿರಸ್ತೇ
ಪಿತರೋ...(ಶತಪಥ ಬ್ರಾಹ್ಮಣಂ 2, 1, 3, 1)
Ed. A. Weber, Chaukhamba Sanskrit Series Office, Varanasi, 1964.

5 ಅರ್ಧಪಂಚಮ ಭಸ್ತ್ವೃತುಃ (ಯಾ. ಜ್ಯೌ. 10)
ತ್ರಿಶತ್ಯಹ್ನಾಂ ಸ ಷಟ್‌ಷಷ್ಟಿರಬ್ದಃ ಷಟ್ಚರ್ತವೋ*ऽಯನೇ (ಯಾ. ಜ್ಯೌ. 28)
—Vedanga Jyauthisha, Ed. Dr. R. Shamasastry, Mysore 1936 (ಸಂಸ್ಕೃತ ಭಾಗದ 8ನೇ ಪುಟ ಮತ್ತು 49ನೇ ಪುಟ)

* (ಷಟ್ಚರ್ತವೋ ಎನ್ನುವುದಕ್ಕೆ ಪಂಚರ್ತವೋ ಎಂಬ ಪಾಠಾಂತರವಿದೆ. ಆದರೆ ಇದು 10ನೆಯ ಶ್ಲೋಕದಲ್ಲಿ ಹೇಳಿರುವ ಋತುಪ್ರಮಾಣಕ್ಕೆ ಹೊಂದುವುದಿಲ್ಲವಾದುದರಿಂದ ಗ್ರಾಹ್ಯವಲ್ಲ.)

6 ದ್ವೌ ಮಾಸಾವೃತುಃ। ಶ್ರಾವಣಃ ಪ್ರೋಷ್ಠಪದಶ್ಚ ವರ್ಷಾಃ। × × × ವರ್ಷಾದಿ ದಕ್ಷಿಣಾಯನಂ।
—ಕೌಟಲೀಯಾರ್ಥಶಾಸ್ತ್ರಂ, Oriental Research Institute, Mysore, 4th edition, 1960. (ಅಷ್ಟತ್ರಿಂಶಂ ಪ್ರಕರಣಂ, ದೇಶಕಾಲಮಾನಂ, ತ್ರಿಂಶೋऽಧ್ಯಾಯಃ (P. 116)

7 ತತೋ ಯಜ್ಞೇ ಸಮಾಪ್ತೇ ತು ಋತೂನಾಂ ಷಟ್ ಸಮತ್ಯಯುಃ।
ತತಶ್ಚ ದ್ವಾದಶೇ ಮಾಸೇ ಚೈತ್ರೇ ನಾವಮಿಕೇ ತಿಥೌ॥
(ಬಾಲಕಾಂಡ, ಸರ್ಗ 18, ಶ್ಲೋಕ 8)
—ವಾಲ್ಮೀಕಿ ರಾಮಾಯಣಂ, ಗುಜರಾತೀ ಪ್ರಿಂಟಿಂಗ್ ಪ್ರೆಸ್, ಮುಂಬಯೀ, 1912.

ಈ ಎಲ್ಲ ಆಧಾರಗಳೂ ಕಾಲಿದಾಸನ ಕಾಲದಲ್ಲಿ ವರ್ಷದಲ್ಲಿ ಆರು ಋತುಗಳ ಗಣನೆಯಿತ್ತೆಂಬುದನ್ನು ಸಮರ್ಥಿಸುತ್ತವೆ. ಡಾ॥ ಕೃಷ್ಣಮೂರ್ತಿಯವರು ಯಾವ ಆಧಾರದ ಮೇಲೆ "ಕಾಲಿದಾಸನ ಕಾಲದಲ್ಲಿ ವರ್ಷದಲ್ಲಿ ಚಾತುರ್ಮಾಸಗಳ ಮೂರೇ ಋತುಗಳನ್ನು ಗಣನೆ ಮಾಡುತ್ತಿದ್ದರು" ಎಂದು ಬರೆದಿರುತ್ತಾರೋ ತಿಳಿಯದು.

ಘಟಕರ್ಪರ ಕಾವ್ಯವನ್ನು ನೋಡಲು ನನಗೆ ಸಾಧ್ಯವಾಗಲಿಲ್ಲ. ಅರ್ಥಶಾಸ್ತ್ರದಲ್ಲಿ ಶ್ರಾವಣಭಾದ್ರಪದಗಳು ಸೇರಿ ವರ್ಷಋತುವೆಂಬ ಉಲ್ಲೇಖವಿದ್ದು ಅದೇ ಈಗಲೂ ರೂಢಿಯಲ್ಲಿರುವಾಗ, ಅನಿಶ್ಚಿತಕಾಲದ ಮತ್ತು ಅಜ್ಞಾತನಾಮ ಕವಿಯ ಘಟಕರ್ಪರ ಕಾವ್ಯ ಮತ್ತು ಈಚಿನ ಹಿಂದೀ ಕವಿಯ ಪ್ರಯೋಗಗಳ ಆಧಾರದ ಮೇಲೆ ಕಾಲಿದಾಸನ ಕಾಲದಲ್ಲಿ "ವರ್ಷಋತು ಆಷಾಢದಿಂದಲೇ ಆರಂಭವಾಗುತ್ತಿತ್ತು" ಎಂದು ಹೇಳುವುದು ಸಮಂಜಸವಾಗಿ ಕಾಣುವುದಿಲ್ಲ.

ಋತುಧರ್ಮ : ಸೂರ್ಯನ ಸುತ್ತಲೂ ಭೂಮಿಯ ಚಲನೆಯೇ ಋತುಧರ್ಮಗಳಿಗೆ ಕಾರಣವಾದುದರಿಂದ ಸೌರಮಾಸಗಳನ್ನವಲಂಬಿಸಿ ಋತುಗಣನೆ ಮಾಡುವುದೇ ಸರಿಯಾದ ಮಾರ್ಗ. ಪ್ರಾಚೀನ ಭಾರತೀಯ ಖಗೋಳ ವಿಜ್ಞಾನಿಗಳು (astronomers) ಇದನ್ನು ಅರಿತಿದ್ದರು. ಪಂಚಸಿದ್ಧಾಂತಿಕಾ ಎಂಬ ಗ್ರಂಥದಲ್ಲಿ ವರಾಹಮಿಹಿರಾಚಾರ್ಯನೂ ಬ್ರಾಹ್ಮಸ್ಫುಟ ಸಿದ್ಧಾಂತದಲ್ಲಿ ಬ್ರಹ್ಮಗುಪ್ತನೂ, ಮಕರಮಾಸದಿಂದ ಆರಂಭಿಸಿ ಎರಡೆರಡು ಸೌರಮಾಸಗಳಿಗೊಂದೊಂದರಂತೆ ಶಿಶಿರಾದಿ ಆರು ಋತುಗಳೆಂದು ಹೇಳಿದ್ದಾರೆ.[8] ಸೌರಮಾನ ಚಾಂದ್ರಮಾನಗಳ ಸಮನ್ವಯಕ್ಕಾಗಿ

---

8 (i) ಉದಗಯನಂ ಮಕರಾದಾವೃತವಃ ಶಿಶಿರಾದಯಶ್ಚ ಸೂರ್ಯವಶಾತ್ ।
ದ್ವಿಭವನಕಾಲಸಮಾನಾ ದಕ್ಷಿಣಮಯನಂ ಚ ಕರ್ಕಟಕಾತ್ ॥
(ಪೌಲಿಶ ಸಿದ್ಧಾನ್ತದ 25ನೆಯ ಶ್ಲೋಕ)

(The Panchasiddhantika of Varahamihira, Ed. G. Thibant & Sudhakara Dwivedi, Lazarus & Co., Benares, 1889) (ಸಂಸ್ಕೃತ ಭಾಗದ 9ನೆಯ ಪುಟ)

ದ್ವೌದ್ವೌ ರಾಶೀ ಮಕರಾದ್ಯೃತವಃ ಷಟ್ ಸೂರ್ಯಗತಿವಶಾದ್ಯೋಜ್ಯಾಃ ।
ಶಿಶಿರವಸಂತಗ್ರೀಷ್ಮವರ್ಷಾ ಶರದಃ ಸಹೇಮನ್ತಾಃ ॥ (ಬ್ರಾಹ್ಮಸ್ಫುಟಸಿದ್ಧಾನ್ತ)

ಈ ಎರಡು ಪದ್ಯಗಳೂ ಭಟ್ಟೋತ್ಪಲನಿಂದ ಬೃಹತ್ಸಂಹಿತಾ ಟೀಕೆಯಲ್ಲಿ ಉದಾಹೃತವಾಗಿವೆ.
—ಶ್ರೀವರಾಹ ಮಿಹಿರಾಚಾರ್ಯವಿರಚಿತಾ ಭಟ್ಟೋತ್ಪಲ ವಿವೃತಿಸಹಿತಾ ಬೃಹತ್ಸಂಹಿತಾ (ವಾರಣಸೇಯ ಸಂಸ್ಕೃತ ವಿಶ್ವವಿದ್ಯಾಲಯ. ವಾರಾಣಸೀ, 1968) ಪುಟ 23.

ii) ಸೂರ್ಯನು 12 ರಾಶಿಗಳನ್ನು ಕ್ರಮಿಸುವ ಕಾಲ (ಎಂದರೆ ಭೂಮಿ ಸೂರ್ಯನನ್ನು ಒಂದು ಸಲ ಸುತ್ತುವ ಕಾಲ) ಸೌರವರ್ಷ (Sidereal year). ಆದರೆ ಅಯನ ಚಲನೆ (Precession of the Eqinoxes)ಯ ಕಾರಣದಿಂದ ಎರಡು ಅಯನಗಳು ಸೇರಿ ಆಗುವ ಕಾಲ ಸೌರವರ್ಷಕ್ಕಿಂತ ಸ್ವಲ್ಪ ಕಡಿಮೆ. ಇದನ್ನು ಸಾಯನವರ್ಷ (Tropical year) ಎನ್ನುತ್ತಾರೆ. ಋತುಗಳು ಈ ಸಾಯನವರ್ಷವನ್ನವಲಂಬಿಸಿವೆ. ಈಗ ಸಾಯನವರ್ಷ ಸೌರವರ್ಷಕ್ಕಿಂತ ಸುಮಾರು 24 ದಿನ ಮುಂಚಿತವಾಗಿ ಪ್ರಾರಂಭವಾಗುತ್ತದೆ. ಈ ವ್ಯತ್ಯಾಸ ಮುಂದಕ್ಕೆ ಹೆಚ್ಚುತ್ತಾ ಹೋಗುತ್ತದೆ. ವರಾಹ ಮಿಹಿರಾಚಾರ್ಯನ ಕಾಲದಲ್ಲಿ ಸೌರವರ್ಷ ಮತ್ತು ಸಾಯನವರ್ಷ ಪ್ರಾರಂಭ ಕಾಲಗಳ ವ್ಯತ್ಯಾಸ ಅತ್ಯಲ್ಪವಾಗಿತ್ತು.

ಅಧಿಕಮಾಸ ಕ್ಷಯಮಾಸಗಳನ್ನು ಕಲ್ಪಿಸಿರುವುದರಿಂದ ಚಾಂದ್ರಮಾಸಗಳ ಆರಂಭಕಾಲ ಅನಿಯತ. ಉದಾಹರಣೆಗೆ, ಆಷಾಢ ಶುದ್ಧ ಪಾಡ್ಯವು ಮಿಥುನ ಮಾಸದಲ್ಲಿ ಯಾವಾಗಲಾದರೂ ಬರಬಹುದು. ಆದುದರಿಂದ ಚೈತ್ರ–ವೈಶಾಖ ವಸಂತಋತು ಇತ್ಯಾದಿ ಋತುಗಣನೆ ಬಹಳ ಸ್ಥೂಲವಾದುದು. ಈ ಕಾರಣದಿಂದ ಚಾಂದ್ರಮಾಸವನ್ನನುಸರಿಸಿ ವರ್ಷಾಋತುವಿನ ಆರಂಭದ ಆಧಾರದ ಮೇಲೆ ಪಾಠನಿರ್ಣಯ ಮಾಡುವುದು ಸಮರ್ಪಕವಲ್ಲ.

ಕವಿಯು ಉಳಿದ ನಾಲ್ಕು ತಿಂಗಳುಗಳು (ಶೇಷಾನ್ ಮಾಸಾನ್ ಚತುರಃ) ಎಂದು ಮಾತ್ರ ಹೇಳಿದ್ದಾನೆಯೇ ಹೊರತು ಅವು ಮಳೆಗಾಲದ ತಿಂಗಳುಗಳೆಂದು ಹೇಳಿಲ್ಲವಾದ ಕಾರಣ, ಶ್ರಾವಣ ಭಾದ್ರಪದಗಳು ವರ್ಷಾಋತುವೇ ಹೊರತು ಆಷಾಢಾದಿ ನಾಲ್ಕು ತಿಂಗಳು ಹೇಗೆ ವರ್ಷಾಋತುವಾದೀತೆಂಬ ಪ್ರಶ್ನೆಯಾಗಲೀ ಮೂರು ಋತುಗಳನ್ನವಲಂಬಿಸಿದ ಉತ್ತರವಾಗಲೀ ಅಸಂಗತ ಎಂದು ಮಲ್ಲಿನಾಥ ಅಭಿಪ್ರಾಯಪಟ್ಟಿದ್ದಾನೆ.[9]

ನಾಲ್ಕು ತಿಂಗಳುಗಳು : ಶಾಪಾಂತಕಾಲವು ಉತ್ಥಾನ ದ್ವಾದಶೀ (ಕಾರ್ತಿಕ ಶುಕ್ಲ ದ್ವಾದಶೀ) ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಆಷಾಢ ಪ್ರಥಮ ದಿವಸದಿಂದ ಶಾಪಾಂತಕಾಲಕ್ಕೆ ಹೇಗೆ ನಾಲ್ಕು ತಿಂಗಳು ಎಂದು ವಿವರಿಸಲು ವ್ಯಾಖ್ಯಾನಕಾರರು ಬಹಳ ಶ್ರಮಪಟ್ಟಿದ್ದಾರೆ.

ಆಷಾಢ ಶುಕ್ಲ ಪಾಡ್ಯಕ್ಕೂ ಶಾಪಾಂತಕ್ಕೂ ಇರುವ ಅಂತರ ನಾಲ್ಕು ತಿಂಗಳುಗಳಿಗಿಂತ ಹತ್ತು ದಿನ ಹೆಚ್ಚಾದರೆ, ಆಷಾಢದ ಕೊನೆಯ ದಿನಕ್ಕೂ ಶಾಪಾಂತಕ್ಕೂ ಇರುವ ಅಂತರ 4 ತಿಂಗಳುಗಳಿಗೆ 20 ದಿನ ಕಡಿಮೆಯಾಗುವುದರಿಂದ, (ಹತ್ತು ದಿನಗಳ) ಸ್ವಲ್ಪ ವ್ಯತ್ಯಾಸ ಲೆಕ್ಕಕ್ಕಿಲ್ಲವೆಂದು ಮಲ್ಲಿನಾಥನ ವಿವರಣೆ.[10]

---

9 ಅತ್ರ ಕೈಶ್ಚಿತ್ 'ನಭೋ ನಭಸ್ಯಯೋರೇವ ವಾರ್ಷಿಕತ್ವಾತ್ಕಥಮಾಷಾಢಾದಿ ಚತುಷ್ಟಯಸ್ಯ ವಾರ್ಷಿಕತ್ವಮುಕ್ತಮಿತಿ ಚೋದಯಿತ್ವಾ 'ಋತುತ್ರಯ ಪಕ್ಷಾಶ್ರಯಣಾದವಿರೋಧಃ' ಇತಿ ಪರ್ಯಹಾರಿ ತತ್ಸರ್ವಮಸಂಗತಂ । ಅತ್ರಗತ ಶೇಷಾಶ್ಚತ್ವಾರೋ ಮಾಸಾ ಇತ್ಯುಕ್ತಂ ಕವಿನಾ ನತು ತೇ ವಾರ್ಷಿಕಾ ಇತಿ । ತಸ್ಮಾದನುಕ್ತೋಪಾಲಂಭ ಏವ । (ಸಂಜೀವಿನೀ ಟೀಕಾ)

—ಮಹಾಕವಿ ಕಾಲಿದಾಸ ವಿರಚಿತಂ ಮೇಘದೂತಂ, ಸಂಜೀವಿನೀ ಚಾರಿತ್ರವರ್ಧಿನೀ ಭಾವಬೋಧಿನೀ ಸೌದಾಮಿನೀ ವ್ಯಾಖ್ಯಾ ಚತುಷ್ಟಯೋಪೇತಂ (ಚೌಖಂಬಾ ಸಂಸ್ಕೃತ ಸೀರೀಸ್ ಆಫೀಸ್, ವಾರಾಣಸೀ—1962), ಪುಟ 122

10 ಕಥಂ ತರ್ಹಿ 'ಶಾಪಾನ್ತೋ ಮೇ ಭುಜಗಶಯನಾದುತ್ಥಿತೇ ಶಾರ್ಙ್ಗಪಾಣೌ' ಇತ್ಯಾದಿನಾ ಭಗವತ್ಪ್ರಬೋಧಾವಧಿಕಸ್ಯ ಶಾಪಸ್ಯ ಮಾಸಚತುಷ್ಟಯಾವಶಿಷ್ಟಸ್ಯೋಕ್ತಿಃ, ದಶದಿವಸಾಧಿಕ್ಯಾದಿತಿ ಚೇತ್—ಸ್ವಪಕ್ಷೇऽಪಿ ಕಥಂ ಸಾ, ವಿಶಂತಿ ದಿವಸೈರ್ನ್ಯೂನತ್ವಾದಿತಿ ಸಂತೋಷ್ಟವ್ಯಂ । ತಸ್ಮಾದೀಷದ್ವೈಷಮ್ಯಮವಿವಕ್ಷಿತಮಿತಿ ಸುಷ್ಠೂಕ್ತಂ ಪ್ರಥಮ ದಿವಸೇ ಇತಿ ॥ (ಸಂಜೀವಿನೀ ಟೀಕಾ)

—ಅದೇ ಗ್ರಂಥ ಪುಟ 4

ಈ ವಿಷಯದಲ್ಲಿ ಚಾರಿತ್ರವರ್ಧನನ ವ್ಯಾಖ್ಯಾನವಂತೂ ವಿಚಿತ್ರವಾಗಿದೆ. ಮೊದಲು 'ಪ್ರಥಮ' ಶಬ್ದಕ್ಕೆ 'ಪ್ರವರ' ಎಂದರೆ ಪ್ರಧಾನ ಎಂಬ ಅರ್ಥವನ್ನು ತೆಗೆದುಕೊಂಡು ಪ್ರಥಮ ದಿವಸವೆಂದರೆ ಅಮಾವಾಸ್ಯೆಯೆಂದು ವಿವರಿಸಿದ್ದಾನೆ. ಅಮಾವಾಸ್ಯೆಯ ದಿನ ಕೃತ್ಯಾ (ಮಾಂತ್ರಿಕ ಕ್ರಿಯೆ) ಮೊದಲಾದುವುಗಳನ್ನು ಆರಂಭಿಸುವುದೇ ಅದರ ಪ್ರಾಧಾನ್ಯಕ್ಕೆ ಅವನು ಕೊಡುವ ಕಾರಣ! ಹೀಗೆ ಪ್ರಥಮ ದಿವಸ ಪ್ರಶಮ ದಿವಸಗಳೆರಡಕ್ಕೂ ಅಮಾವಾಸ್ಯೆಯೆಂಬ ಒಂದೇ ಅರ್ಥವನ್ನು ಹೇಳಿದ ಮೇಲೆ ಅದನ್ನು ಅಲ್ಲಿಗೇ ಕೈಬಿಟ್ಟು, ಪ್ರಥಮ ದಿವಸವೆಂದರೆ ಪ್ರಸಿದ್ಧ ವಿಷ್ಣುದಿನವಾದ ಪ್ರಥಮೈಕಾದಶೀ ಎಂದು ಅರ್ಥ ಹೇಳಿದ್ದಾನೆ. ಅಲ್ಲಿಂದ ಉತ್ಥಾನ ದ್ವಾದಶಿಗೆ 4 ತಿಂಗಳಾಗುವುದರಿಂದ ಸಮಸ್ಯೆ ಪರಿಹಾರವಾದಂತಾಯಿತು.[11]

ಡಾ॥ ಕೃಷ್ಣಮೂರ್ತಿಯವರೂ ಸಹ "ಆಷಾಢದ ಆದಿಯಿಂದ ಎಂದರೆ ಏಕಾದಶಿಯಿಂದ ಉತ್ಥಾನ ದ್ವಾದಶಿಯ ವೇಳೆಗೆ ನಾಲ್ಕು ತಿಂಗಳ ಅವಧಿಯಾಗುತ್ತದೆ" ಎಂದು ಬರೆದಿರುತ್ತಾರೆ. 30 ದಿನ ಪ್ರಮಾಣದ ತಿಂಗಳಿನಲ್ಲಿ 11ನೆಯ ದಿನವನ್ನು ಆದಿಯೆನ್ನುವುದು ಉಚಿತವಲ್ಲ.

ಆಷಾಢಮಾಸ : ಈಗ ತಮಿಳುನಾಡು ಕೇರಳಗಳನ್ನು ಬಿಟ್ಟು ಉಳಿದ ದಕ್ಷಿಣ ಭಾರತದಲ್ಲಿ ಶುಕ್ಲಾದಿ (ಅಮಾಂತ) ಚಾಂದ್ರಮಾಸವೂ. ಬಂಗಾಳ ಅಸ್ಸಾಂ ಹೊರತಾದ ಉತ್ತರ ಭಾರತದಲ್ಲಿ ಕೃಷ್ಣಾದಿ (ಪೂರ್ಣಿಮಾಂತ) ಚಾಂದ್ರಮಾಸವೂ ಪ್ರಚಾರದಲ್ಲಿವೆ. ಕೃಷ್ಣಾದಿ ಮಾಸವು ಅದೇ ಹೆಸರಿನ ಶುಕ್ಲಾದಿಮಾಸದ ಶುಕ್ಲಪಕ್ಷ ಮತ್ತು ಅದರ ಹಿಂದಿನ ತಿಂಗಳಿನ ಕೃಷ್ಣಪಕ್ಷ ಸೇರಿ ಆಗುತ್ತದೆ. ಆದುದರಿಂದ ಎರಡು ವಿಧದ ಮಾಸಗಳಿಗೂ ಶುಕ್ಲಪಕ್ಷ ಸಮಾನ. ಬಂಗಾಳದಲ್ಲಿ ಮೇಷಾದಿ ಸೌರಮಾಸಗಳಿಗೇ ವೈಶಾಖಾದಿ ಹೆಸರುಗಳನ್ನು ಹೇಳುತ್ತಾರೆ.[12]

---

11 ಆಷಾಢಸ್ಯ ಪ್ರಥಮಃ ಪ್ರವರಶ್ಚಾಸೌ ದಿವಸಶ್ಚ । ಯಸ್ಮಿನ್ ವಾಸರೇ ಸ ಮಾಸಃ ಪೂರ್ತಿಮಿಯರ್ತಿ ಸಾ ಆಷಾಢ್ಯಮಾವಾಸ್ಯೇತಿ ಭಾವಃ । ತಸ್ಯ ಪ್ರವರತ್ವಂ ಚ ಕೃತ್ಯಾದಿ ಕಾರ್ಯಾಣಾಂ ತಸ್ಮಿನ್ ಪ್ರಾರಭ್ಯಮಾಣತ್ವಾತ್ । × × × ಆದಿಪ್ರವರೌ ಪ್ರಥಮೌ ಪ್ರಧಾನೇ ಪರಿಕೀರ್ತಿತೌ । × × × ಪ್ರಶಮ ದಿವಸ ಇತಿ ಪಾಠೇ ಮಾಸಸ್ಯಾವಸಾನೋ ದಿವಸಃ ಸಏವ ಪ್ರಶಮ ದಿವಸಃ × × × ಪ್ರಥಮಃ ಪ್ರಖ್ಯಾತೋ ವಿಷ್ಣುದಿವಸಃ ಪ್ರಥಮೈಕಾದಶೀತ್ಯರ್ಥಃ । ತತ್ರಾತ ಏವ 'ಶಾಪಾನ್ತೋ ಮೇ ಭುಜಗಶಯನಾದುತ್ಥಿತೇ ಶಾರ್ಙ್ಗಪಾಣೌ' 'ಮಾಸಾನೇತಾನ್ಗಮಯ ಚತುರ' ಇತಿ ವಾಕ್ಯಂ ॥ (ಚಾರಿತ್ರವರ್ಧಿನೀ ಟೀಕಾ)

—ಅದೇ ಗ್ರಂಥ, ಪುಟ 5

12 (i) In the ಪೂರ್ಣಿಮಾಂತ system, each month beginning with a full moon is named after the next

ಶುಕ್ಲಾದಿ ಕೃಷ್ಣಾದಿ ಮಾಸಗಳೆರಡೂ ಬಹಳ ಪ್ರಾಚೀನ ಕಾಲದಿಂದಲೂ

ಅಮಾಂತ month, but takes in the dark fortnight preceding each new moon.

—[Indian Chronology ; L. D. Swamikannupillai, (Reprint) Asian Educational Services, New Delhi, 1982] Page (41), Section 109

A dark fortnight in n^{th} ಅಮಾಂತ month is in $(n+1)^{th}$ ಪೂರ್ಣಿಮಾಂತ month. —Same book, Page (41, Section 110

(ii) The solar months like ವೈಶಾಖ, ಜ್ಯೇಷ್ಠ, etc., actually begin from the moment of ಸಂಕ್ರಾಂತಿ or solar transit into ನಿರಯಣರಾಶಿ's like ಮೇಷ, ವೃಷ, etc. The lunar months which have also got the same names begin from the moment of new moon (ಅಮಾವಾಸ್ಯಾ) occurring after the above transit time and before the next transit. The day next to ಅಮಾವಾಸ್ಯಾ is the first day of the month. This is according to the new-moon-ending or ಶುಕ್ಲಾದಿ system or the ಮುಖ್ಯಮಾನ. as prevalent in Maharashtra, Gujarat, Andhra pradesh and Mysore.

—Advance Ephemeris of planets' position for 100 years from 1951 to 2050 A.D. (N.C.Lahiri, Third edition, 1982): page ix of Introduction.

In North India also (in all states except Bengal and Assam) the lunar calendar is used ; but there the months are full-moon-ending, i.e. ಕೃಷ್ಣಾದಿ or ಗೌಣ beginning from the day after full moon (ಪೂರ್ಣಿಮಾ) about 15 days before the beginning of the months of the same name of the above-mentioned ಶುಕ್ಲಾದಿ system. ……The ಕೃಷ್ಣಪಕ್ಷ of the ಮುಖ್ಯಮಾನ and the ವದಿ half of ಗೌಣಮಾನ are related in the following way—ಚೈತ್ರ ಕೃಷ್ಣ is equivalent to ವೈಶಾಖ ವದಿ, then comes ವೈಶಾಖ ಶುಕ್ಲ corresponding to ವೈಶಾಖ ಸುದಿ, followed by ವೈಶಾಖ ಕೃಷ್ಣ corresponding to ಜ್ಯೇಷ್ಠ ವದಿ, and so on. The ವಿಕ್ರಮ ಸಂವತ್ is used with this calendar and the year begins in the middle of the month of ಗೌಣ ಚೈತ್ರ, i.e. from ಚೈತ್ರ ಶುಕ್ಲ ಪ್ರತಿಪದ್.

—Same book, page x of Introduction.

(ಮೂಲದಲ್ಲಿ ರೋಮನ್ ಲಿಪಿಯಲ್ಲಿದ್ದ ಕೆಲವು ಪದಗಳನ್ನು ಓದುಗರ ಸೌಕರ್ಯಕ್ಕಾಗಿ ಇಲ್ಲಿ ಕನ್ನಡ ಲಿಪಿಯಲ್ಲಿ ಕೊಟ್ಟಿದೆ.)

ಪ್ರಚಾರದಲ್ಲಿದ್ದುವೆಂದು ತೈತ್ತಿರೀಯ ಸಂಹಿತೆಯಿಂದ ತಿಳಿದುಬರುತ್ತದೆ.[13] ಈಗ ಉಪಲಬ್ಧವಿರುವ ಆರ್ಯಭಟೀಯ ವ್ಯಾಖ್ಯಾನಗಳಲ್ಲೆಲ್ಲ ಅತಿಪ್ರಾಚೀನವಾದುದು ಭಾಸ್ಕರನದು. (ಈ ಭಾಸ್ಕರನೂ ಸಿದ್ಧಾಂತ ಶಿರೋಮಣಿಯ ಕರ್ತೃ ಭಾಸ್ಕರಾಚಾರ್ಯನೂ ಭಿನ್ನರು.) ಇದರ ರಚನಾಕಾಲ ಕ್ರಿ. ಶ. 629. ಈ ವ್ಯಾಖ್ಯಾನದಲ್ಲಿ ಭಾಸ್ಕರನು, ಸೌರಾಷ್ಟ್ರದಲ್ಲಿ ವರ್ಷವು ಕಾರ್ತಿಕ ಶುಕ್ಲ ಪ್ರತಿಪದೆಯಿಂದ ಆರಂಭವಾಗಿ ಆಶ್ವಯುಜ ಬಹುಳ ಅಮಾವಾಸ್ಯೆಯಂದು ಮುಗಿಯುವುದೆಂದೂ ಮಗಧದಲ್ಲಿ ಆಷಾಢ ಕೃಷ್ಣ ಪ್ರತಿಪದೆಯಿಂದ ಆರಂಭವಾಗಿ ಆಷಾಢ ಶುಕ್ಲಪೂರ್ಣಿಮೆಯಂದು ಮುಗಿಯುವುದೆಂದೂ ಹೇಳಿ, ಆಷಾಢಪೂರ್ಣಿಮೆಯಂದು ವರ್ಷಾನ್ತವೆನ್ನುವುದಕ್ಕೆ ಅರ್ಥಶಾಸ್ತ್ರದ ವಾಕ್ಯವೊಂದನ್ನು ಉದಾಹರಿಸಿದ್ದಾನೆ.[14]

---

13 ಅಮಾವಾಸ್ಯಯಾ ಮಾಸಾನ್ ಸಂಪಾದ್ಯಾಹರುತ್ಸೃಜಂತ್ಯಮಾವಾಸ್ಯಯಾ ಹಿ ಮಾಸಾನ್ ಸಂಪಶ್ಯನ್ತಿ ಪೌರ್ಣಮಾಸ್ಯಾ ಮಾಸಾನ್ ಸಂಪಾದ್ಯಾಹರುತ್ಸೃಜನ್ತಿ ಪೌರ್ಣಮಾಸ್ಯಾ ಹಿ ಮಾಸಾನ್ ಸಂಪಶ್ಯನ್ತಿ ।

—ತೈತ್ತಿರೀಯ ಸಂಹಿತಾ 7.5. 6. 1
(ಆನಂದಾಶ್ರಮ ಮುದ್ರಣಾಲಯ, ಪುಣೆ 1905)

ಅತ್ರ ಸ್ಪಷ್ಟಮಿದಂ ಕಥಿತ ಮವಲೋಕ್ಯತೇ ಯತ್ಕೇಚಿದಮಾವಾಸ್ಯಯಾ ಮಾಸಪೂರ್ತಿಂ ಸಂಪಶ್ಯನ್ತಿ ಕೇಚಿಚ್ಚ ಪೌರ್ಣಮಾಸ್ಯಾ ತತ್ಪೂರ್ತಿಂ ಸಮಾಮನನ್ತೀತಿ । ಸಂಪ್ರತಿ ದಕ್ಷಿಣಭಾರತೇ ಪೂರ್ವನಿಯಮಃ ಉತ್ತರಭಾರತೇ ಚೋತ್ತರ ನಿಯಮೋ ಮನ್ಯತೇ ।

—ಜ್ಯೌತಿಷ ಶಾಸ್ತ್ರೀಯ ಭಗಣ ಸಮೀಕ್ಷಾ (ಡಾ॥ ದಾಮೋದರ ಝಾ, ಕೋ ಅರೀಮದನ. ಸೀತಾಮಢೀ ಡಿಸ್ಟ್ರಿಕ್ಟ್, ಬಿಹಾರ. 1975), ಪುಟ 14

ಈ ಸಂಸ್ಕೃತ ಗ್ರಂಥದಲ್ಲಿ ಮೇಲಿನ ಮತ್ತು 4, 5ನೇ ಅಡಿಟಿಪ್ಪಣಿಗಳಲ್ಲಿ ಕೊಟ್ಟಿರುವ ವೇದ ಸಂಹಿತಾ ಬ್ರಾಹ್ಮಣಭಾಗಗಳೂ ಇನ್ನೂ ಅನೇಕ ಪ್ರಾಚೀನ ಗ್ರಂಥಗಳಿಂದ ಉದ್ಧೃತವಾದ ವಾಕ್ಯಗಳೂ ಉದಾಹೃತವಾಗಿವೆ. ಪ್ರಾಚೀನ ಭಾರತೀಯ ಖಗೋಳಶಾಸ್ತ್ರ ವಿಚಾರವಾಗಿ ಹೆಚ್ಚು ತಿಳಿಯಲಪೇಕ್ಷಿಸುವವರು ಅವಶ್ಯವಾಗಿ ನೋಡಬೇಕಾದ ಗ್ರಂಥವಿದು.

14 ಸುರಾಷ್ಟ್ರಾಸು ಕಾರ್ತಿಕಶುಕ್ಲಪ್ರತಿಪದಃ ಪ್ರವೃತ್ತಿರ್ವರ್ಷಮಾಸ ದಿವಸಾನಾಂ । ಅಶ್ವಯುಜಃ [ಕೃಷ್ಣ] ಪಂಚದಶ್ಯಾಃ ನಿವೃತ್ತಿಃ । ತಥಾ ಚ ಮಗಧಾಸು ಆಷಾಢೇ ಕೃಷ್ಣಪ್ರತಿಪದಃ ಸಮಾಮಾಸದಿವಸಾನಾಂ ಪ್ರವೃತ್ತಿಃ, ಆಷಾಢ ಸಿತ ಪಂಚದಶ್ಯಾಂ ನಿವೃತ್ತಿಃ । ತಥಾ ಚ ಅರ್ಥಶಾಸ್ತ್ರೇಽಪ್ಯಭಿಹಿತಂ– "ತ್ರಿಶತಂ ಸಚತುಷ್ಪಂಚಾಶತಮಹೋರಾತ್ರಾಣಾಂ ಕರ್ಮಸಂವತ್ಸರಃ ತಮಾಷಾಢೀ ಪರ್ಯವಸಾನಮೂನಂ ಪೂರ್ಣಂ ವಾ ದದ್ಯಾದಿತಿ ।

—Aryabhatiya of Aryabhata, with the Commentary of Bhaskara and Someswara. (Indian National Science Academy, New Delhi, 1976).

ಕಾಲಕ್ರಿಯಾಪಾದದ 11ನೆಯ ಪದ್ಯವ್ಯಾಖ್ಯಾನ ಭಾಗ, ಪುಟ 206.

ಅರ್ಥಶಾಸ್ತ್ರದಿಂದ ಉದ್ಧೃತವಾಗಿರುವ ಭಾಗವು ಮೈಸೂರಿನಲ್ಲಿ ಪ್ರಕಟಿತವಾದ (ನೋಡಿ. ಟಿಪ್ಪಣಿ 6) ಕೌಟಲೀಯಾರ್ಥಶಾಸ್ತ್ರದ ಪಂಚವಿಂಶ ಪ್ರಕರಣ, ಸಪ್ತಮಾಧ್ಯಾಯದಲ್ಲಿದೆ. (ಪುಟ 72)

ಈ ಎಲ್ಲ ಆಧಾರಗಳನ್ನನುಸರಿಸಿ, ಔತ್ತರೇಯನಾದ ಕಾಳಿದಾಸನು ಹೇಳಿರುವ ಆಷಾಢಮಾಸವು ಕೃಷ್ಣಾದಿ ಎಂದರೆ ಪೂರ್ಣಿಮಾಂತ್ಯಮಾಸವೆಂದು ನಿಸ್ಸಂದೇಹವಾಗಿ ಹೇಳಬಹುದು.

ಮೂಲಪಾಠ ನಿರ್ಣಯ : ಕೃಷ್ಣಾದಿ ಆಷಾಢದ ಪ್ರಥಮ ದಿವಸ ದಕ್ಷಿಣದ ಅಮಾಂತ ಚಾಂದ್ರಮಾಸ ಜ್ಯೇಷ್ಠದ ಬಹುಳ ಪ್ರತಿಪದೆ. ಇಲ್ಲಿಂದ ಉತ್ಥಾನ ದ್ವಾದಶಿಗೆ ಸುಮಾರು 4 ತಿಂಗಳು ಮತ್ತು 26 ದಿನಗಳಾಗುತ್ತವೆ. ಆಷಾಢ ಪ್ರಶಮ ದಿವಸ ಎಂದರೆ ಕೊನೆಯ ದಿನವಾದ ಪೂರ್ಣಿಮೆಯಿಂದ 4 ತಿಂಗಳಿಗೆ 3 ದಿನ ಮಾತ್ರ ಕಡಿಮೆ. ಆದುದರಿಂದ **ಮೂಲಪಾಠ "ಆಷಾಢಸ್ಯ ಪ್ರಶಮದಿವಸೇ"** ಎಂದೇ ಇರಬೇಕು.

ಔತ್ತರೇಯನಾದ ವಲ್ಲಭದೇವನು ಸಹಜವಾಗಿಯೇ ಆಷಾಢ ಪೂರ್ಣಿಮಾಂತ್ಯ ಮಾಸವೆಂದು ಗ್ರಹಿಸಿರುವುದರಿಂದ, ಆಷಾಢ ಪ್ರಶಮದಿವಸಕ್ಕೂ ಉತ್ಥಾನದ್ವಾದಶಿಗೂ ಅಂತರ ಹೇಗೆ ನಾಲ್ಕು ತಿಂಗಳು ಎಂಬ ಸಮಸ್ಯೆ ಅವನಿಗೆ ಉದ್ಭವಿಸಲಿಲ್ಲ.

ಯಕ್ಷನು ಮೋಡವನ್ನು ನೋಡಿದ ದಿನ ಆಷಾಢ ಶುಕ್ಲಪಾಡ್ಯವಲ್ಲವೆನ್ನುವುದಕ್ಕೆ ಆಂತರಿಕ ಪ್ರಮಾಣವೂ ಇದೆ. "ಶಾಪಾಂತೋ ಮೇ ಭುಜಗ ಶಯನಾದುತ್ಥಿತೇ ಶಾರ್ಙ್ಗಪಾಣೌ" (ಶಾರ್ಙ್ಗಪಾಣಿಯು ಭುಜಗಶಯನದಿಂದ ಎದ್ದಾಗ ನನ್ನ ಶಾಪದ ಕೊನೆ) ಎನ್ನಬೇಕಾದರೆ, ಹಾಗೆ ಹೇಳಿದಾಗ ಶಾರ್ಙ್ಗಪಾಣಿಯು ಭುಜಗ ಶಯನ ದಲ್ಲಿಯೇ ಇರಬೇಕು. ಆದುದರಿಂದ ಶಯನೈಕಾದಶಿ(ಆಷಾಢಶುದ್ಧ ಏಕಾದಶಿ)ಯ ಅನಂತರವೇ ಈ ಮಾತನ್ನಾಡಿರಬೇಕು.

ವಲ್ಲಭದೇವನು ಹೇಳಿರುವಂತೆ (ನೋಡಿ, ಅಡಿಟಿಪ್ಪಣಿ 2) ಶಕಾರ ಥಕಾರಗಳ ಲಿಪಿಸಾದೃಶ್ಯದಿಂದ[15] 'ಪ್ರಥಮದಿವಸೇ' ಎಂಬ ಅಪಪಾಠ ಹುಟ್ಟಿರಬೇಕು ಮತ್ತು ದಕ್ಷಿಣ ದೇಶದಲ್ಲಿ ಅಮಾಂತ ಚಾಂದ್ರಮಾಸ ರೂಢಿಯಲ್ಲಿದ್ದುದರಿಂದ ಮಲ್ಲಿನಾಥ, ಚಾರಿತ್ರವರ್ಧನ ಮೊದಲಾದ ಟೀಕಾಕಾರರಿಂದ ಈ ಪಾಠ ಆದೃತವಾಗಿರಬೇಕು.

---

15. ಈಗಿನ ದೇವನಾಗರೀ ಲಿಪಿಯಲ್ಲೂ ಶಕಾರ ಥಕಾರಗಳಿಗೆ ಸಾದೃಶ್ಯವಿದೆ. ಕೈಬರಹ ದಲ್ಲಿರುವ ಒಂದನ್ನು ಮತ್ತೊಂದೆಂದು ತಪ್ಪಾಗಿ ಓದುವುದು ಸಾಧ್ಯ.

ಶ → श
ಥ → थ

'ಸಂಗೀತ-ಸಾಹಿತ್ಯ' ಲೇಖನಕ್ಕೆ ಪ್ರತಿಕ್ರಿಯೆ

—ಟಿ. ಕೇಶವ ಭಟ್ಟ

'ಲೋಚನ' ಸಂಪುಟ ೧–೧ರಲ್ಲಿ ಪ್ರೊ॥ ಎಂ.ವಿ.ಸೀ. ಅವರು 'ಸಂಗೀತ–ಸಾಹಿತ್ಯ' ಎಂಬ ತಮ್ಮ ಲೇಖನದಲ್ಲಿ ಈ ಎರಡು ಕಲೆಗಳಿಗೂ ಮೂಲವಸ್ತು (ಧ್ವನಿ ಮೌಲ್ಯ) ಒಂದೇ–ಎಂದು ಪ್ರತಿಪಾದಿಸಿರುವುದು ಅಭಿನಂದನೀಯ. ಧಾತು–ಮಾತುಗಳ ಸ್ವರಸಪ್ತಕವನ್ನು ಸಮೀಕರಿಸಿರುವುದು ಅವರ ಸಂಶೋಧನೆಯ ಮತಿಪ್ರಕಾಶ ದ್ಯೋತಕ. ಈ ಸಂದರ್ಭದಲ್ಲಿ ಅವರು ಹೀಗೆ ಬರೆದಿದ್ದಾರೆ—"ಎರಡಕ್ಕೂ ಒಂದೇ ಧ್ವನಿಮೌಲ್ಯ (Phonetic value) ಎಂದ ಮೇಲೆ ಸಾಹಿತ್ಯ ಸಂಗೀತ ಶರೀರಗಳ ನಾಡಿಮಿಡಿತ, ಹೃದಯ ಒಂದೇ ಎಂದು ಸ್ಪಷ್ಟವಾಗುವುದಲ್ಲವೇ ? ಈ ಅಂಶವನ್ನು ಪ್ರಾಚೀನ ಅರ್ವಾಚೀನ ಶಾಸ್ತ್ರಕಾರರು ಯಾರಾದರೂ ಗಮನಿಸಿರುವುದು ನನ್ನ ತಿಳಿವಳಿಕೆಗೆ ಬಂದಿಲ್ಲ. ಈ ಅಂಶ ಪರಿಶೀಲನಾರ್ಹ ; ಪ್ರಯೋಗಮುಖೇನ ಸಂಶೋಧನಾರ್ಹ."

ಹೀಗೆಂದಿರುವ ಅಂಶವನ್ನು ಶಾರ್ಙ್ಗದೇವನು ತನ್ನ 'ಸಂಗೀತರತ್ನಾಕರ'ದ ಸ್ವರಾಧ್ಯಾಯದ ಎರಡನೇ ಶ್ಲೋಕದಲ್ಲಿ ಹೇಳಿರುವುದು ನನ್ನ ಪರಿಶೀಲನೆಗೆ ಕಂಡು ಬಂದಿದೆ. ಧ್ವನಿಮೌಲ್ಯವನ್ನು ಅದರಲ್ಲಿ 'ನಾದ' ಎನ್ನಲಾಗಿದೆ. ಧಾತು–ಮಾತುಗಳೆರಡಕ್ಕೂ ಮೂಲದ್ರವ್ಯ 'ನಾದ' ಎನ್ನಲಾಗಿದೆ—

ನಾದೇನ ವ್ಯಜ್ಯತೇ ವರ್ಣಃ ಪದಂ ವರ್ಣಾತ್ ಪದಾದ್ವಚಃ
ವಚಸಾ ವ್ಯವಹಾರೋಽಯಂ ನಾದಾಧೀನಮತೋ ಜಗತ್ ॥

ಅಂದರೆ, ನಾದದಿಂದ ವರ್ಣ (ಅಕ್ಷರ) ವ್ಯಂಜಿತವಾಗುತ್ತದೆ. ವರ್ಣದಿಂದ ಪದ, ಪದದಿಂದ ಮಾತು, ಮಾತಿನಿಂದಲೇ ಮಾನವನ ವ್ಯವಹಾರ. ಆದುದರಿಂದ ಲೋಕವೇ ನಾದಾಧೀನವಾದುದು.

ಕವಿ ನೇಮಿಚಂದ್ರನು (1170) 'ಲೀಲಾವತೀ ಪ್ರಬಂಧ'ದಲ್ಲಿ (1–73) ತನ್ನ ಕಾವ್ಯವನ್ನು ಮಾತು–ಧಾತುಗಳೆರಡೂ ಉಳ್ಳ ರಸಗೇಯಕ್ಕೆ ಶ್ಲೇಷೆಯಿಂದ ಹೋಲಿಸಿರುವ ಪದ್ಯ ಲಕ್ಷ್ಯಾರ್ಹ—

ಜತಿಗಳವಟ್ಟ ಬಣ್ಣದಿನಮರ್ಚಿ ತೊಡರ್ಚಿದ ಚಂದದಿಂದಳಂ
ಕೃತಿಗಳವಟ್ಟ ಮಾರ್ಗದಿನಿದಿರ್ಚಿದ ರೀತಿಯನಾಳ್ದ **ಧಾತುವಿಂ**
ಸ್ತುತಿಗೊಳಗಾದ **ಮಾತಿನ** ತೆರಳ್ಕೆಗಳಿಂ ರಸಗೇಯದಂತಿರೀ
ಕೃತಿ ಪೊಸ ದೇಸೆಯಿಂದೆಸೆದು ಸೋಲಿಪುದಚ್ಚರಿಯೇ ರಸಜ್ಞರಂ ॥

ಇಲ್ಲಿಯ ಪಾರಿಭಾಷಿಕ ಶಬ್ದಗಳು ಧಾತು – ಮಾತುಗಳೆರಡಕ್ಕೂ ಅನ್ವಯವಾಗತಕ್ಕ ವಾಗಿವೆ—**ಜತಿ**–ಸ್ವರಜತಿ, ಯತಿ. **ವರ್ಣ**–ರಾಗತಾಳಬದ್ಧಸಂಗೀತಸ್ವರ, ಅಕ್ಷರ. **ಚಂದ**–ಸೊಗಸು, ಛಂದಸ್ಸು. **ಅಳಂಕೃತಿ**–(ಅಲಂಕಾರ)–ತಾಳಗತಿಯ ಸರಳೆವರಸೆ, ಶಬ್ದಾರ್ಥಾಲಂಕಾರ. **ಮಾರ್ಗ** – ಸಂಗೀತ ಸಾಹಿತ್ಯ ಎಂಬೆರಡರಲ್ಲಿಯೂ ಇರುವ ಪರಿಶುದ್ಧ ಪರಿಷ್ಕೃತರೂಪ. **ರೀತಿ** – ಕ್ರಮ ; ಕಾವ್ಯಗುಣವುಳ್ಳ ಪದಸಂಘಟನೆ. **ಧಾತು**–ಸರಿಗಮ ಸ್ವರರಚನೆ. ಕ್ರಿಯಾರ್ಥಕ ಶಬ್ದ. **ಮಾತು**–ಸಾಹಿತ್ಯಾಂಶ, ವಾಕ್ಯ. **ಪೊಸ ದೇಸೆ**–ಸಂಗೀತ ಸಾಹಿತ್ಯಗಳೆರಡರಲ್ಲಿಯೂ ಇರುವ ದೇಶಿ.

ಉದಾಹರಣೆಗೆ ಅರ್ಹವಾದ ಹೇಳಿಕೆಗಳ ಸಂದರ್ಭಗಳು ಬೇರೆ ಕಡೆ ಇನ್ನೂ ಇರಬಹುದು. ಒಟ್ಟಿನಲ್ಲಿ ಪೂರ್ವಲಾಕ್ಷಣಿಕರು ಹಾಗೂ ಕವಿಗಳು ಸಂಗೀತ–ಸಾಹಿತ್ಯ ಗಳೆರಡರ ಮೂಲವಸ್ತು (ಧ್ವನಿಮೌಲ್ಯ) ಒಂದೇ ಎಂಬುದನ್ನು ಕಂಡಿದ್ದಾರೆ, ಇವೆರಡರ ಸಮನ್ವಯವನ್ನು ಪ್ರತಿಪಾದಿಸಿದ್ದಾರೆ–ಎನ್ನಲು ಅಡ್ಡಿಯಿಲ್ಲ.

ಪ್ರತಿಕ್ರಿಯೆ : ಆಶಯವನ್ನು ಗ್ರಹಿಸಿಲ್ಲ

ಸಂಗೀತ–ಸಾಹಿತ್ಯಗಳ ಸಮಾನ ಮೂಲದ್ರವ್ಯ 'ನಾದ' ಎಂಬ ಬಗೆಗೆ 'ಸಂಗೀತ ರತ್ನಾಕರ'ದ ಶಾರ್ಙ್ಗದೇವನು ಮಾತ್ರವಲ್ಲ, ಅವನಿಗಿಂತ ಹಿಂದಿನವನಾದ 'ಬೃಹದ್ದೇಶಿ'ಯ ಮತಂಗನೂ ಸವಿವರವಾಗಿ ಹೇಳಿರುವುದನ್ನು ನಾನು ಗಮನಿಸಿದ್ದೇನೆ. ಮಾನವ ಶರೀರದಲ್ಲಿ ಅವ್ಯಕ್ತವಾಗಿ ಉತ್ಪತ್ತಿಯಾಗುವ ನಾದವು ವ್ಯಕ್ತಪಟ್ಟಾಗ ಸಂಗೀತದ ಷಡ್ಜಾದಿ ಸಪ್ತಸ್ವರಗಳಿಗೂ ವ್ಯಾಕರಣದಲ್ಲಿ ಹೇಳಿರುವ ಸಮಾನಾಕ್ಷರಗಳು ಅಥವಾ ಸವರ್ಣಗಳು (ಅ–ಆ, ಇ–ಈ, ಇತ್ಯಾದಿ) ಇವುಗಳಿಗೂ ಇರುವ ಏಕಾತ್ಮಕತೆ ಅಥವಾ ಸಮಾನ ಗುಣಧರ್ಮ, ಇವುಗಳ ಬಗೆಗೆ ಈ ಎರಡು ಶಾಸ್ತ್ರಗ್ರಂಥಗಳಲ್ಲಿ ಏನಾದರೂ ಹೇಳಿರುವುದು ನನ್ನ ಗಮನಕ್ಕೆ ಬಂದಿಲ್ಲ ಎಂದು ನನ್ನ ಎಣಿಕೆ. ಈ ಬಗೆಗೆ ಶ್ರೀ ಕೇಶವ ಭಟ್ಟರೇ ಆಗಲಿ ಇತರರು ಯಾರೇ ಆಗಲಿ ಗ್ರಂಥಾಧಾರವನ್ನು ಉಲ್ಲೇಖಿಸಿ ಬೆಳಕು ಚೆಲ್ಲಿದರೆ ಉಪಕಾರವಾಗುವುದು.

—ಎಂ. ಏ. ಸೀ.

ಶಾಸನದಲ್ಲೊಂದು ಷಟ್ಪದಿ—ಪ್ರತಿಕ್ರಿಯೆ*

ನಾ. ಗೀತಾಚಾರ್ಯ

ಹನುಮಾಕ್ಷಿ ಗೋಗಿ ಅವರ 'ಶಾಸನದಲ್ಲೊಂದು ಷಟ್ಪದಿ' (ಸಾಧನೆ 9–3, ಪು: 150) ಪುನರಾವರ್ತನೆಯಾಗಿರುವ ಲೇಖನ ಎಂಬುದನ್ನು ತಿಳಿಸುವ ಅಗತ್ಯ ಇಲ್ಲಿದೆ. ಇವರು ಹೇಳಿರುವ ಶಾಸನ ಬೆಂಗಳೂರು ವಿಶ್ವವಿದ್ಯಾನಿಲಯದ ಪ್ರಕಟಣೆಯೇ ಆದ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪ್ರಕಟವಾಗಿದೆ.[1] ಈ ಷಟ್ಪದಿಯ ಬಗೆಗೆ ಲೇಖನವೊಂದಿದ್ದರೂ ಅದನ್ನು ಉಲ್ಲೇಖಿಸದೆ ಓದುಗರಿಗೆ ಸಮಗ್ರ ತಿಳಿವಳಿಕೆ ಕೊಡುವಲ್ಲಿ ಪ್ರಬಂಧ ಸೋತಿರುವುದು ಅದರ ಒಂದು ಕೊರತೆಯಾದರೆ: ಮತ್ತೊಂದು ಕೊರತೆ ಮೊದಲು ಸಂಪಾದಿಸಿರುವ ಪಾಠವನ್ನು ಬಹಳ ಲಘುವಾಗಿ ತೆಗೆದುಕೊಂಡಿರುವುದು. 'ಇಂಗ್ಲೀಷ್ ಪಠ್ಯದಲ್ಲಿ ಮೇಲಿನ ಪದ್ಯವನ್ನು ಪ್ರಾಸಾಕ್ಷರಗಳ ಬಲದಿಂದ ಆರು ಸಾಲುಗಳಾಗಿ ಮುರಿದಿಡಲಾಗಿದೆ' ಎಂಬ ಅವರ ಮಾತಿನಲ್ಲಿ ಹಿಂದಿನ ಸಂಪಾದಕರು ತಪ್ಪುಮಾಡಿದ್ದಾರೆ ಎಂಬ ಧ್ವನಿಯಿದೆ. ಹಾಗೆ ನೋಡಿದರೆ ಸಂಪಾದಕರಿಗಿಂತ ಪ್ರಬಂಧಕಾರರೇ ಪದ್ಯವನ್ನು ತಪ್ಪಾಗಿ ವಿಭಾಗಿಸಿದ್ದಾರೆ ಎಂದು ಹೇಳಬೇಕಾಗುತ್ತದೆ.

ಶಾಸನ ಪಾಠ :

2 ...॥ಪರಮನೆ ಪರತಂ ಕ್ರಿತ್ಯನೆ..ಪರನೆಪರಮೇಶನೆ
3 ...ನೆಗಾಧಾರನೆ ಪರಲೋಕ ಹಿತಾರ್ಥನೆ ಪಾಪದಾವನೆ
ಪಾಲಿಪನೆ ಪರಾ..ನೆ ಪರಸುರರ ಹಿತನೆ ಪವಿತ್ರನೆ ಕ
4 ರುಣಿಸೈ ವರಂದಾನಿ ಪ್ರಸಿದ್ಧ ಲಿಂಗವೇ ॥[2]

---

* ಈ ಲೇಖನ ರಚಿಸುವಲ್ಲಿ ಸೂಕ್ತ ಸಲಹೆ ಸೂಚನೆಗಳನ್ನು ನೀಡಿ ಮಾರ್ಗದರ್ಶನವಿತ್ತ ಪೂಜ್ಯ ಗುರುಗಳಾದ ಪ್ರೊ॥ ಎಂ. ವಿ. ಸೀತಾರಾಮಯ್ಯನವರು ಮತ್ತು ಡಾ॥ ಎಂ. ಚಿದಾನಂದ ಮೂರ್ತಿಯವರಿಗೆ ಋಣಿ.

1. ಡಾ॥ ಜಿ. ವರದರಾಜರಾವ್, ಷಟ್ಪದಿಯ ಉಗಮ ಮತ್ತು ಪ್ರಾರಂಭ, ಸ. ಕ. ಸಾ. ಚ. ಸಂ III, ಪುಟ 368.

2. ಎ.ಕ, ಸಂ : xi, ಚಿತ್ರದುರ್ಗ ಸಂಖ್ಯೆ–3. 1356 ಕ್ರಿ.ಶ.

ಸಾಮಾನ್ಯವಾಗಿ ಶಾಸನ ಸಂಪಾದನೆಯಲ್ಲಿ ಶಾಸನ ಪಾಠ ಕೊಡುವಾಗ ಅಸ್ಪಷ್ಟವಾದ/ಲೋಪವಾಗಿರುವ ಅಕ್ಷರಗಳನ್ನು ಸೂಚಿಸಲು ಆ ಸ್ಥಳದಲ್ಲಿ ಚುಕ್ಕೆ(.)ಯನ್ನು ಇಡಲಾಗುತ್ತದೆ. ಒಂದೊಂದು ಚುಕ್ಕೆಯೂ ಒಂದೊಂದು ಅಕ್ಷರವನ್ನು ಸೂಚಿಸುತ್ತದೆ. ಪ್ರಸ್ತುತ ಶಾಸನದಲ್ಲಿ ಮೂರು ಕಡೆ ೨, ೩ ಮತ್ತು ೨ ಚುಕ್ಕೆಗಳನ್ನಿಟ್ಟು ಅಷ್ಟು ಅಕ್ಷರಗಳ ಲೋಪವನ್ನು ಸೂಚಿಸಿದೆ. ಆದರೆ ಇದರ ಇಂಗ್ಲೀಷ್ ಪಾಠ ಈ ನಿಯಮಾನುವರ್ತಿಯಾಗಿಲ್ಲ. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಪ್ರತಿಸಂಪುಟದಲ್ಲೂ

ಸಂಪಾದಕರ (ರೈಸ್‌ರ) ಪಾಠ :

paramane paratara-krityane.. |
parane paramesane naga-dharane |
para-loka-hitarthane papa-davane palipane |
para..ne |
para-surara pitane pavitrane |
karunisai varam dani p[a]ra-sidha lingave ||

ಪ್ರಬಂಧಕಾರರ ಪಾಠ :

ಪರಮನೆ ಪರತರ ಕ್ರಿತ್ಯನೆ ।
ಪರಮೇಶ ಪನ್ನಗಧರನೆ ।
ಪರಲೋಕ ಹಿತಾರ್ತ್ಥನೆ ಪಾಪದಾವನೆ ಪಾಲಿಪನೆ ।
ಪರ..................ನೆ ।
ಪರಸುರರ ಪಿತನೆ ಪವಿತ್ರನೆ
ಕರುಣಿಸು ; ವರವಂ ದಾನಿಪ್ರಸಿದ್ಧಲಿಂಗವೇ ॥

ಈ ಷಟ್ಪದಿಯ ಬಗೆಗೆ ಅವರು ತಳೆದಿರುವ ನಿರ್ಣಯ : "ಇದುವರೆಗೆ ನಮ್ಮ ಗಮನಕ್ಕೆ ಬಂದಿರುವಂತೆ ಭೋಗ ಷಟ್ಪದಿಯು ತ್ರಿಮಾತ್ರೆಯ ಗಣಗಳಿಂದ ನಡೆಯುತ್ತದೆ. ಆದರೆ ಪ್ರಸ್ತುತ ಷಟ್ಪದಿಯನ್ನು 3 ಮಾತ್ರೆಯ ಗಣಗಳಂತೆ ಒಡೆದರೆ ಲಯಕ್ಕೆ ಹಾಗೂ ಅರ್ಥಕ್ಕೆ ವ್ಯತ್ಯಾಸವುಂಟಾಗುತ್ತದೆ. ಈ ಕಾರಣ 4 ಮಾತ್ರೆಗೊಂದು ಗಣದಂತೆ ವಿಂಗಡಿಸುವುದು ಉಚಿತ. ಈ ನಿರ್ಣಯ ಖಚಿತವಾದರೆ ಮಾತ್ರಾ ಗಣಾನ್ವಿತ ಷಟ್ಪದಿಯು ಬಳಕೆಗೊಂಡ ಶಾಸನಗಳಲ್ಲಿ ಇದೇ ಮೊದಲಿನದಾಗುತ್ತದೆ."[3]

ಇವರ ಈ ನಿರ್ಣಯ ಖಚಿತವಾಗುವ ಸಂಭವ ಬಹಳ ಕಡಿಮೆ. ಈ ಷಟ್ಪದಿ ಮಾತ್ರಾ ಛಂದಸ್ಸಿನ ಲಯಕ್ಕೆ ಮತ್ತು ಗಣವಿಭಜನೆಗೆ ಎಷ್ಟು ಪ್ರಯತ್ನಿಸಿದರೂ ಹೊಂದುವುದಿಲ್ಲ. ಇವರಿಗಿಂತ ಮೊದಲೇ ಈ ಷಟ್ಪದಿಯನ್ನು ಉಲ್ಲೇಖಿಸಿರುವ ಲೇಖಕರ ಅಭಿಪ್ರಾಯವನ್ನು ಇಲ್ಲಿ ಗಮನಿಸುವುದು ಸೂಕ್ತವೆನಿಸುತ್ತದೆ. ಅವರ ಪ್ರಕಾರ ಈ ಷಟ್ಪದಿ ಅಂಶ ಲಯದಲ್ಲಿರುವ ಬ್ರಹ್ಮಗಣದ ಷಟ್ಪದಿ.

ಪ್ರತಿಶಾಸನಕ್ಕೂ ಕನ್ನಡ ಪಾಠವನ್ನೇ ರೈಸ್ ಅವರು ಯಥಾವತ್ತಾಗಿ ತೆಗೆದುಕೊಂಡಿರುವುದಿಲ್ಲ. ತಾವೂ ಶಾಸನ ಓದಿ ಅದರಂತೆ ಬರೆದಿರುತ್ತಾರೆ. (ಕನ್ನಡ ಪಾಠವನ್ನು ಪಂಡಿತರಿಂದ ಪಡೆದಿರುತ್ತಾರೆ). ಇಲ್ಲಿ ಎರಡೂ ಪಾಠಗಳು ದೊರೆತು ಯಾವುದು ಸರಿ ಮತ್ತು ಎಷ್ಟು ಅಕ್ಷರಗಳು ಲೋಪವಾಗಿವೆ ಎಂಬುದರ ಬಗೆಗೆ ಗೊಂದಲವೇಳುತ್ತದೆ.

೩. ಹನುಮಾಕ್ಷಿ ಗೋಗಿ, ಶಾಸನದಲ್ಲೊಂದು ಷಟ್ಪದಿ, ಸಾಧನೆ 9–3, ಪು. 150

ಬ್ರ ಬ್ರ ಬ್ರ ಬ್ರ (?)
ಪರ.ಮಾ।ನೆ ಪ.ರಾ।ತರ.ಕ್ರಿ।ತ್ಯನೆ. = ।
ಬ್ರ ಬ್ರ ವಿ ಬ್ರ
ಪರ.ನೆ । ಪರ.ಮೇ।ಶನೆ.ನ.ಗಾ।ಧರ.ನೆ ।
ಬ್ರ ಬ್ರ ಬ್ರ ಬ್ರ ಬ್ರ ಬ್ರ
ಪರ.ಲೋ।ಕ ಹಿ.ತಾ।ರ್ಥನೆ. ಪಾ।[ಪಾ]ದಾ।ವನೆ. ಪಾ।ಲಿಪ.ನೆಲೆ ।
ಪರ......................ನೆ ।
ಬ್ರ ಬ್ರ ಬ್ರ ವಿ
ಪರ.ಸು।ರರ. ಪಿ।ತನೆ. ಪಾ।ವಿ.ತ್ರ.ನೆ ।
ಬ್ರ ವಿ ಬ್ರ ವಿ ಬ್ರ ಬ್ರ
ಕರು.ಣಾ।ಸ್ಯೆ. ಪ.ರಾ।ಮಂ. ದಾ।ನಿ ಪ.ರಾ।ಸಿ.ದ್ವಾ।ಲಿಂಗ।ವೇ ॥

ಡಾ॥ ಜಿ. ವರದರಾಜರಾವ್ ಅವರು ಇದಕ್ಕೆ ಕೊಟ್ಟಿರುವ ಆಕರದಲ್ಲಿ E. K. vol : IV ಎಂದು ಅಚ್ಚಾಗಿದೆ. ಪ್ರಾಯಶಃ ಇದು ಮುದ್ರಣ ದೋಷವಿರಬಹುದು. ಇಲ್ಲಿ ಅಡಿಟಿಪ್ಪಣಿಯಲ್ಲಿ 'ಕನ್ನಡ ಪಾಠದಲ್ಲಿ ಒಂದೆರಡು ಸಣ್ಣ ವ್ಯತ್ಯಾಸಗಳಿವೆ. ಸಂಪಾದಕರ ಸ್ವೀಕೃತ ಪಾಠವನ್ನು ಗ್ರಹಿಸಿದೆ' ಎಂದಿದ್ದಾರೆ. ಈ ಷಟ್ಪದಿಯ ಬಗೆಗೆ ಅವರ ಅಭಿಪ್ರಾಯ ಈ ರೀತಿ ಇದೆ: 'ನಿಯತವಾಗಿ ತೋರಿಬರುವ ದ್ವಿತೀಯಾಕ್ಷರ ಪ್ರಾಸ ಮೂಲಕ ಇದು ಷಟ್ಪದಿ ಎನ್ನುವುದು ವಿದಿತವಾಗುತ್ತದೆ. ಒಂದೊಂದು ಪಾದದಲ್ಲಿಯೂ ಬೇರೆ ಬೇರೆ ಸಂಖ್ಯೆಯ ಮಾತ್ರೆಗಳು ಬರುವುದರಿಂದ ಇದನ್ನು ಮಾತ್ರಾಗಣದಲ್ಲಿ ಅಳವಡಿಸಲಾಗುವುದಿಲ್ಲ. ಅಂಶಗಣಾನುಸಾರವಾಗಿ ಪರಿಶೀಲಿಸಿದಲ್ಲಿ ಇದು ಮೂಲಷಟ್ಪದಿಯ ರಚನೆಗೆ ತಕ್ಕಂತೆ ಕಿರಿಯ ಚರಣಗಳಲ್ಲಿ ಎರಡು ಚರಣಗಳು ಮಾತ್ರವೇ ಆಗಲಿ ದೊಡ್ಡ ಚರಣಗಳಲ್ಲಿ ಮೂರು ಚರಣಗಳು ಮಾತ್ರವೇ ಆಗಲಿ ಬಾರದೆ ಇನ್ನೂ ಹೆಚ್ಚಾಗಿರುವುದು ಕಂಡುಬರುತ್ತದೆ. ಮೂಲ ಷಟ್ಪದಿಯಿಂದ ಜನ್ಯವಾದ ವಾರ್ಧಕ ಮತ್ತು ಪರಿವರ್ಧಿನಿಗಳಲ್ಲಿರುವಂತೆ ಇಲ್ಲಿ ಎರಡು ದ್ವಿಗುಣ ಸೂತ್ರವನ್ನು ಅನ್ವಯಿಸಿ ಪ್ರಸ್ತಾರ ಹಾಕಿದರೆ ಇದು ಬ್ರಹ್ಮಗಣಕ್ಕೆ ಅಳವಡುವುದನ್ನು ಗಮನಿಸಬಹುದು. ಕಿರಿಯ ಚರಣಗಳಲ್ಲಿ ನಾಲ್ಕು ಬ್ರಹ್ಮಗಣಗಳೂ ಹಿರಿಯ ಚರಣಗಳಲ್ಲಿ ಆರು ಬ್ರಹ್ಮಗಣಗಳೂ ಒಂದು ಅಂಶವೂ ತೋರಿಬರುತ್ತದೆ. ಬ್ರಹ್ಮಕ್ಕೆ ಪರ್ಯಾಯವಾಗಿ ವಿಷ್ಣು ಬಂದಿರುವುದು ಪಾದದೋಷವಿರಬಹುದು. ಇಲ್ಲವೆ ಅಂಶಗಣದ ಲಕ್ಷಣಾನುಸಾರವಾಗಿ ಲಯ ಸೌಲಭ್ಯಕ್ಕಾಗಿಯೂ ಬಂದಿರಬಹುದು. ಪೂರ್ಣವಾಗಿ ಬ್ರಹ್ಮಗಣ ಘಟಿತವಾದ ಮೂಲಷಟ್ಪದಿ ಈವರೆಗೆ ತೋರಿಬಾರದಿದ್ದರೂ ಅದರಿಂದ ಜನ್ಯವಾದ ಈ ನಿದರ್ಶನದಲ್ಲಿ ಪೂರ್ಣವಾಗಿ ಬ್ರಹ್ಮಗಣದ ಮೇಲುಗೈಯಾಗಿರುವುದು ತುಂಬ ಪ್ರಶಸ್ತವೆನಿಸುತ್ತದೆ."[4]

---

4. ಡಾ॥ ಜಿ. ವರದರಾಜರಾವ್. ಷಟ್ಪದಿಯ ಉಗಮ ಮತ್ತು ಪ್ರಾರಂಭ. ಸ.ಕ.ಸಾ.ಚ. ಸಂ. III. ಪುಟ 368.

ಈ ಷಟ್ಪದಿ ಅಂಶಗಣಘಟಿತವೆಂದು ಸ್ಪಷ್ಟವಾಗಿ ಹೇಳಬಹುದಾದರೂ ಈ ಅಂಶಗಣವನ್ನು ಬ್ರಹ್ಮಗಣದ ಲಯದಲ್ಲಿ ವಿಭಜಿಸುವುದು ಅಷ್ಟಾಗಿ ಸರಿಹೊಂದದೇನೋ ಎನಿಸುತ್ತದೆ.

ತಿರು.ಕ । ನೊ.ರ್ವ । ನೊ.ರ । ಮುಂ.ದೆ ।
ಮುರು.ಕು । ಧ.ರ್ಮ । ಶಾ.ಲೆ । ಯು.ಲ್ಲಿ ।
ಯೊರ.ಗಿ । ರು.ತ್ತ । ಲೊಂ.ದು ।ಕನ.ಸ । ಕಂ.ಡ । ನೆಂ.ತೆ।ನೆ ॥

ಇಲ್ಲಿಯು ಬ್ರಹ್ಮಗಣದ ಓಟ, ಲಯಕ್ಕೂ ಪ್ರಸ್ತುತ ಷಟ್ಪದಿಯ ಲಯಛಂದಕ್ಕೂ ಅಜಗಜಾಂತರವೆಂದೇ ಹೇಳಬಹುದು. ಲೇಖಕರು ನಿಯಮಾನುಸಾರವಾಗಿ ಗಣ ವಿಭಜಿಸಿದ್ದರೂ ಕೆಲವು ವೇಳೆ ಅಂಶ ಛಂದಸ್ಸಿನ ಮಟ್ಟಿಗೆ ನಿಯಮವನ್ನು ಮೀರಬೇಕಾಗುತ್ತದೆಂಬುದು ಗಮನಾರ್ಹ. ಹನುಮಾಕ್ಷಿ ಗೋಗಿಯವರ ಅಭಿಪ್ರಾಯಕ್ಕೂ ಒಳಪಡದೆ ಡಾ॥ ಜಿ. ವರದರಾಜರಾವ್ ಅವರ ನಿಯಮಕ್ಕೂ ಬದ್ಧವಾಗದೆ ಈ ಷಟ್ಪದಿ ಪ್ರತ್ಯೇಕವಾಗಿಯೇ ಉಳಿಯುತ್ತಿರುವುದನ್ನು ಗಮನಿಸಿದರೆ ಇದಕ್ಕೆ ಬೇರಾವುದೋ ಇನ್ನೊಂದು ವ್ಯವಸ್ಥೆ ಇದೆ ಎನಿಸುತ್ತದೆ. ಮಾತ್ರಾ ಅಥವ ಅಂಶ ಷಟ್ಪದಿಗಳಲ್ಲಿರುವ ಇದುವರೆಗಿನ ಯಾವ ನಿಯಮಕ್ಕೂ ಇದು ಒಳಪಡದಂತಿದೆ. ಇಲ್ಲಿಯ ಪ್ರತಿಪಾದಗಳ ಅಕ್ಷರ ಸಂಖ್ಯೆ ಮತ್ತು ಮಾತ್ರಾ ಸಂಖ್ಯೆಯ ಜೊತೆಗೆ ಪಾಠದಲ್ಲಿ ಕೆಲವಾರು ಅಕ್ಷರಗಳ ಲೋಪವೂ ಸೇರಿಕೊಂಡು ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸುತ್ತಿವೆ. ಹೀಗಿದ್ದೂ ಇದೇ ವ್ಯವಸ್ಥೆಯನ್ನೇ ವಿರೋಧಿಸುವ ಅಥವ ಅದಕ್ಕೆ ಪೂರಕವಾಗುವ ಹೊಸರೀತಿಯ ರೂಪವೊಂದನ್ನು ಈ ಷಟ್ಪದಿಗೆ ತೊಡಿಸುವ ಪ್ರಯತ್ನವನ್ನು ಮಾಡಬಹುದು ಎನ್ನಿಸುತ್ತದೆ.

ಪರ.ಮ.ನೆ । ಪರ.ತ.ರ । ಕ್ರಿ.ತ್ಯ.ನೆ ।
ಪರ.ನೆ. ಪರ।ಮೇ.ಶ.ನೆ । [5]ಪ.ನ್ನ.ಗ ।
ಧರ.ನೆ.[5] ಪರ।ಲೋ.ಕ. ಹಿ।ತಾ.ರ್ಥ.ನೆ । ಪಾ.ಪ.ದಾ।ವನೆ. ಪಾ.ಲಿ।ಪನೆ।
ಪರ.............................ನೆ
ಪರ.ಸು.ರಾ।ರ ಪಿ.ತ.ನೆ । ಪವಿ.ತ್ರ.ನೆ ।
ಕರು.ಣೆ.ಸ್ಯೆ । ವರ.[ಂ]ದಾ.ನಿ । [6]ಪರ.ಸಿ.ದ್ಧ[6] । ಲಿಂ.ಗ.ವೇ ।

ಅಂಶಗಣದಲ್ಲಿ ಮುಖ್ಯವಾಗಿ ಲಯಾನುವರ್ತಿ ಗಣಗಳಿಗೇ ಹೆಚ್ಚಿನ ಪ್ರಾಶಸ್ತ್ಯ. ಏಕೆಂದರೆ ಇದು ಲೆಕ್ಕಾಚಾರದ ಛಂದಸ್ಸಲ್ಲ. ಗೇಯತೆ ಕೂಡಿದ ಹಾಡಿನ ಮಟ್ಟು. ಹಾಡುವಾಗ ಹಾಡುವವನ ಮತ್ತು ಹಾಡುವ ಸಂದರ್ಭಕ್ಕೆ ತಕ್ಕಂತೆ ಹಲವು ತಾಳಗತಿ

5. ನೆಗಾಧಾರನೆ (ಕನ್ನಡ ಪಾಠ), ನಗಧರನೆ (ಇಂಗ್ಲಿಷ್ ಪಾಠ)

6. ಪ್(ಅ)ರಸಿದ್ಧ (ಇಂಗ್ಲಿಷ್ ಪಾಠ), ಪ್ರಸಿದ್ಧ (ಕನ್ನಡ ಪಾಠ)

ಯಲ್ಲಿ ಹಲವು ಲಯಗಳಲ್ಲಿ ಹಾಡುವ ಸೌಲಭ್ಯ ಇದಕ್ಕಿರುವುದೇ ಇದರ ವೈಶಿಷ್ಟ್ಯ. ಇಲ್ಲಿ ಒಂದೊಂದು ಪಾದಕ್ಕೆ ಮೂರು ಮೂರು ವಿಷ್ಣುಗಣಗಳು (3 ಮತ್ತು 6ನೇ ಪಾದದಲ್ಲಿ ಐದೈದು) ಬರುವಂತೆ ಪ್ರಸ್ತಾರ ಹಾಕಿದೆ. ಈ ಪ್ರಸ್ತಾರ ಕ್ರಮಕ್ಕೆ ಒಂದು ವಿಶೇಷ ಸೌಲಭ್ಯವನ್ನು ಬಳಸಿಕೊಳ್ಳಲಾಗಿದೆ. ನಾಗವರ್ಮ ನಿಯಮಿತ ಪ್ರತಿಗಣದ ಮೊದಲ ಅಂಶ ಮಾತ್ರ ದ್ವಿಲಘುವಿನಿಂದ ಕೂಡಿರಬೇಕೆಂಬುದನ್ನು ಸಡಿಲಿಸಿಕೊಂಡು ಉಳಿದ ಅಂಶಗಳಿಗೂ ಅದರ ಸಾಧ್ಯತೆಯನ್ನು ಒದಗಿಸಲಾಗಿದೆ. ಈ ಒದಲಾವಣೆಗೆ ಪ್ರೊ॥ ಎಂ. ವಿ. ಸೀತಾರಾಮಯ್ಯನವರ ಮತ್ತು ಕನ್ನಡ ಕೈಪಿಡಿಕಾರರ ಅಭಿಪ್ರಾಯಗಳು ಪುಷ್ಟಿ ನೀಡುತ್ತವೆ. "ನಾಗವರ್ಮನು ಆವರೆಗೆ ರಚಿಸಲಾಗಿದ್ದ ಈ ಛಂದಸ್ಸಿನ ಪದ್ಯಗಳ ಆಧಾರದ ಮೇಲೆ ಇವುಗಳ ನಿಯಮವನ್ನು ನಿರ್ಣಯಿಸಿದನು. ಆದರೆ ಇದು ಮುಖ್ಯವಾಗಿ ಲಯಾನುವರ್ತಿಯಾದ್ದರಿಂದ ಜನಪದ ಹಾಡುಗಳಾದ್ದರಿಂದ ಹಾಡಿನ ಲಯ, ಗೇಯತೆಯನ್ನನುಸರಿಸಿಯೇ ಇವರ ಲಕ್ಷಣವನ್ನು ಹೇಳಬೇಕಾಗುತ್ತದೆ. ಆದ್ದರಿಂದ ಉಳಿದ ಅಂಶಲಯಗಳಲ್ಲೂ ಸಹ ಈ ಸಾಧ್ಯತೆಯನ್ನು (ಒಂದು ದೀರ್ಘ ಅಥವ ಎರಡು ಹ್ರಸ್ವ) ಮಾಡಿಕೊಳ್ಳಬಹುದು."[7]

ಲಲಿ.ತ.ತರ । ಭ.ಕ್ತಿ.ಯಿಂ ।
ನಲಿ.ನಲಿ.ದು । ಪಸ.ರಿಸು.ತಿ ।
ರಲು. ಸೀ.ತೆ । ಮೆ.ಲ್ಲ.ಮೆ।ಲ್ಲನೆ. ನಡೆ.ದ।ಳು

ಒಳಗೆ ಕುಳಿತಿರುವ ಅಂಶವನ್ನು ಲಕ್ಷಿಸದೆಹೋದರೆ ಹಾಡಿನ ಸೊಗಸು ಕೆಟ್ಟು ಛಂದಸ್ಸು ಕಿವಿಗೆ ಇಂಪಾಗಲಾರದು......ಈ ಅಂಶ, ಪದ, ಒತ್ತು–ಈ ಸೂಕ್ಷ್ಮಗಳ ರಹಸ್ಯವನ್ನು ಹಿಡಿದರೆ ಷಟ್ಪದಿಗಳ ಪಾದಗಳನ್ನು, ಪದವಿನ್ಯಾಸವನ್ನು, ಅರ್ಥ ಸ್ಫೂರ್ತಿಯನ್ನು ಕವಿ ಕೌಶಲದಿಂದ ಛಂದಸ್ಸಿನ ನಾಟ್ಯದಲ್ಲಿ ಕುಣಿಸಬಲ್ಲನು. ಬೆರಳು ಮಡಿಸಿ ಬರಿಯ ಗಣದ ಲೆಕ್ಕಾಚಾರ ಮಾಡಿದರೆ ಕವಿತೆಯ ಕುದುರೆ ಕುಂಟುತ್ತದೆ.[8]

ಇನ್ನು 3 ಮತ್ತು 6ನೇ ಪಾದಗಳಲ್ಲಿ 1, 2ನೇ ಪಾದಗಳ $1\frac{1}{2}$ಯಷ್ಟು ಗಣಗಳು ಬರಬೇಕೆಂಬ ನಿಯಮವೇನೋ ಇದೆ. ಇಲ್ಲಿಯ 3ನೇ ಪಾದದಲ್ಲಿ ಈ ನಿಯಮ ಬಹುಮಟ್ಟಿಗೆ ಕಂಡುಬಂದರೂ 6ನೇ ಪಾದದಲ್ಲಿ ಕಾಣದೊರೆಯುವುದಿಲ್ಲ. ಆದ್ದರಿಂದ ಆ ಪಾದದ ಅಂತ್ಯಗಣವನ್ನು ಊಹಾಪಾಠದಿಂದ ತುಂಬಬೇಕಾಗುತ್ತದೆ. ಪಾದಾಂತ್ಯದಲ್ಲೇ ಗಣ ಲೋಪವಾಗಿದೆ ಎಂಬುದಕ್ಕೆ 3ನೇ ಪಾದದಂತೆ ಅಂತ್ಯ ಗುರ್ವಂತವಾಗಿಲ್ಲದೆ ಒಂದು ಗಣಕ್ಕೆ ಸರಿಯಾಗಿ ನಿಂತಿರುವುದು: ಮತ್ತು 3ನೇ ಪಾದದ ಧಾಟಿಯಲ್ಲಿ 6ನೇ ಪಾದವನ್ನು ಹಾಡಿದಾಗ ಪಾದಾಂತ್ಯವೇ ಪದಲೋಪದಿಂದ ಕೂಡಿದೆ ಎಂಬ ಧ್ವನಿ ಹೊರಡುತ್ತದೆ ಎಂದೂ ಊಹಿಸಲವಕಾಶವಿದೆ.

---

7. ಪ್ರೊ॥ ಎಂ. ವಿ. ಸೀತಾರಾಮಯ್ಯನವರಿಂದ ಪಡೆದ ಟಿಪ್ಪಣಿ.

8. ಕನ್ನಡ ಕೈಪಿಡಿ ಭಾಗ–1, ಪುಟ 154–155, ಮೈ.ವಿ.ವಿ. 1975.

ಈಗ ಈ ಷಟ್ಪದಿಯನ್ನು ಯಾವ ವರ್ಗಕ್ಕೆ ಸೇರಿಸುವುದು ? ನಮಗೆ ದೊರೆತಿರುವ ಅಂಶಗಣಘಟಿತ ಮೂಲಷಟ್ಪದಿ ಎರಡು ವಿಷ್ಣುಗಣ ನಿಯಮಕ್ಕೊಳಪಟ್ಟಿದ್ದರೆ ಇದು ಮೂರು ವಿಷ್ಣುಗಣ ನಿಯಮಕ್ಕೊಳಪಟ್ಟಿದೆ ಮತ್ತು ಈ ಶಾಸನದ ಕಾಲ ಕ್ರಿ. ಶ. 1356 ಎಂದಿರುವುದು ಈ ಷಟ್ಪದಿ ಅಂಶ ಛಂದಸ್ಸಿಗೆ ಸೇರುವುದರ ಬಗೆಗೇ ಪ್ರಶ್ನೆಯನ್ನು ಹುಟ್ಟಿಸುತ್ತದೆ. ಅಂಶಷಟ್ಪದಿ ಕಣ್ಮರೆಯಾಗಿ ರಾಘವಾಂಕಾದಿಯಾಗಿ ಮಾತ್ರಾಷಟ್ಪದಿ ವಿಜೃಂಭಿಸಿದ್ದ 13ನೇ ಶತಮಾನ, ಅನೇಕ ಕವಿಗಳು ಅನೇಕ ಷಟ್ಪದಿ ಕಾವ್ಯಗಳ ರಚನೆ ಮಾಡಿ ಷಟ್ಪದಿ ಯುಗವೆಂದೇ ಜನಪ್ರಿಯವಾಗಿದ್ದ ಕಾಲದಲ್ಲಿ ಮಾತ್ರಾಷಟ್ಪದಿಗಳ ಮಧ್ಯೆ ಈ ಅಂಶಷಟ್ಪದಿ ಹೇಗೆ ಬಂತು ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆದರೆ ಪ್ರಸ್ತುತ ಷಟ್ಪದಿ ಉತ್ತರಿಸಲು ಅಸಮರ್ಥವಾಗಿದ್ದರೂ ಅಂಶಷಟ್ಪದಿ ಎಂಬುದನ್ನು ಖಚಿತಪಡಿಸುತ್ತದೆ. ಮುಖ್ಯವಾಗಿ ಇದು ಶಾಸನದಲ್ಲಿರುವುದರಿಂದ, ಶಾಸನ ಕವಿಗೆ ಯಾವುದೇ ನಿರ್ಬಂಧವಿಲ್ಲದಿರುವುದರಿಂದ ತನ್ನ ಪ್ರತಿಭೆಯನ್ನು ತೋರಿಕೊಳ್ಳುವ ಇಂಥ ಸದವಕಾಶವನ್ನು ಬಿಟ್ಟುಕೊಡಲಾರ ಎಂದುಕೊಂಡಾಗ ಒಬ್ಬ ಶಾಸನ ಕವಿಯ ಒಂದು ಹೊಸ ಪ್ರಯೋಗ ಎನ್ನಬಹುದು ಮತ್ತು ಜೊತೆಗೆ ಮಾತ್ರಾಷಟ್ಪದಿಯಿಂದ ತುಂಬಿಹೋಗಿದ್ದ ಕಾಲದಲ್ಲಿ ಅಂಶಷಟ್ಪದಿಯನ್ನು ಮರೆಯುತ್ತಿರುವುದು ಈ ಶಾಸನ ಕವಿಗೆ ಇಷ್ಟವಾಗಿಲ್ಲದಿರಬಹುದು. ಪ್ರತಿಯೊಂದು ಬದಲಾವಣೆಗಳ ಹಂತದಲ್ಲಿಯೂ ಬದಲಾವಣೆಯನ್ನು ಬಯಸುವ ಮತ್ತು ವಿರೋಧಿಸುವ ಎರಡು ಗುಂಪುಗಳು ಇದ್ದೇ ಇರುತ್ತವೆ. ಈ ಶಾಸನಕವಿ ಕನ್ನಡದ ದೇಸೀ ಛಂದಸ್ಸಿನ ಬಗೆಗೆ ಅಪಾರ ಒಲವುಳ್ಳವನಾಗಿದ್ದು ಕನ್ನಡದಲ್ಲೂ ಅಂಥ ಪ್ರಯೋಗಗಳಿಗೆ ಅವಕಾಶವಿದೆ ಎಂಬುದನ್ನು ತೋರಿಸಲು ಈ ಅಂಶಷಟ್ಪದಿಯ ಹೊಸ ಪ್ರಯೋಗವೊಂದನ್ನು ಮಾಡಿರಬಹುದೆಂದು ಹೇಳಲು ಅಡ್ಡಿಯಿಲ್ಲ. ಈ ಕವಿ ಶಾಸನಕವಿಯಾದ್ದರಿಂದ ಇಂಥ ವಿಶಿಷ್ಟ ಪ್ರಯೋಗ ಸಾಹಿತ್ಯ ಲೋಕಕ್ಕೆ ಕಾಣದೆಹೋದರೂ ಕನ್ನಡ ಸಾಹಿತ್ಯದಲ್ಲಿ ಇದೊಂದು ವಿಶೇಷ ಮಾನ್ಯತೆ ಪಡೆಯುವಂಥ ಷಟ್ಪದಿ ರೂಪವಾಗುತ್ತದೆ ಎಂದು ಹೇಳಬಹುದಲ್ಲವೇ ?

ಶಬ್ದಗಳ ವಿದೇಶ ಪ್ರಯಾಣ

(ಒಂದು ಟಿಪ್ಪಣಿ)

—ಪ್ರೊ॥ ಎಂ. ವಿ. ಸೀತಾರಾಮಯ್ಯ

ಕನ್ನಡದಿಂದ (ಅಥವಾ ದ್ರಾವಿಡ ಭಾಷಾ ವರ್ಗದಿಂದ) ಇಂಗ್ಲಿಷಿಗೆ ಶಬ್ದಗಳು :

ಈ ವಿಷಯವನ್ನು ಕುರಿತು ಪ್ರೊ॥ ಆರ್. ಜಿ. ಕುಲಕರ್ಣಿಯವರು 'ಪ್ರಜಾವಾಣಿ'ಯ (7–4–1984, ಶನಿವಾರ) 'ವಾಚಕವಾಣಿ' ಅಂಕಣದಲ್ಲಿ ಹೀಗೆ ಬರೆಯುತ್ತಾರೆ :

> ತುಳು ಹಾಗೂ ಇಂಗ್ಲಿಷ್ ಭಾಷೆಗಳ ಸಂಬಂಧದಲ್ಲಿ ರೈ ಅವರ ವಿಚಾರಗಳನ್ನು ಭಾಷಾ ಸಂಶೋಧಕರು ತುಂಬಾ ಗಂಭೀರವಾಗಿ ಪರಿಗಣಿಸಲೇಬೇಕಾಗಿದೆ. ಇದು ಕೇವಲ ತುಳು–ಇಂಗ್ಲೀಷ್ ಭಾಷೆಗೆ ಸಂಬಂಧಿಸಿದ ಸಮಸ್ಯೆ ಅಲ್ಲ. ಇಂಗ್ಲೀಷನ್ನು ಇಂಡೋ ಆರ್ಯನ್ ಭಾಷೆಯ ಅಂಗವೆಂದು ದೃಢವಾಗಿ ನಂಬಿರುವ ಹಿನ್ನೆಲೆಯಲ್ಲಿ ಇಂಗ್ಲಿಷಿಗೂ ದ್ರಾವಿಡವೆಂಬ ಭಾಷಾ ಕುಟುಂಬಕ್ಕೂ ಇರುವ ಸಂಬಂಧವನ್ನು ಕುರಿತು ವಿದ್ವಾಂಸರು ವಿಚಾರವನ್ನೂ ಮಾಡದಷ್ಟು ಉದಾಸ ಮನೋಭಾವ ತೋರಿಸುತ್ತಿದ್ದಾರೆ.
>
> ಉದಾಹರಣಾರ್ಥವಾಗಿ ಕನ್ನಡದ 'ಒಂದು' ಇಂಗ್ಲಿಷಿನ ಒನ್—ಈ ಸಂಖ್ಯಾನಾಮದ ಸಾಮ್ಯ ಹೇಗೆ ಬಂದಿತು. ಅದೇ ರೀತಿ ಮಾರ್ಕಟ್ಟೆ ಎಂಬ ಶಬ್ದ ಶಬ್ದಮಣಿದರ್ಪಣದಲ್ಲಿಯೇ ಕಂಡುಬರುತ್ತದೆ. ಇದು ಮಾರ್ಕೆಟ್ ಎಂಬ ಇಂಗ್ಲಿಷ್ ಪದಕ್ಕೆ ಹತ್ತಿರ ಮಾತ್ರವಲ್ಲ, ಒಂದೇ ಪದದ ಎರಡು ರೂಪಗಳೆಂದು ತೀರ ಸ್ಪಷ್ಟವಾಗಿದೆ.
>
> ತೀರ ದ್ರಾವಿಡ ಭಾಷಾ ಪದಗಳೆಂದು ಕಾಲ್ಡವೆಲ್ ಮೊದಲಾದವರು ಹೇಳುವ ಪದಗಳೂ ಇಂಗ್ಲೀಷಿನಲ್ಲಿ ಹಿಂದಿಯಲ್ಲಿ ಕಂಡುಬರುತ್ತವೆ. ಭಾರತದಲ್ಲಿಯ ಭಾಷೆಗಳವರು ದ್ರಾವಿಡ ಭಾಷೆಗಳಿಂದ ಪದಗಳನ್ನು ಸ್ವೀಕರಿಸಿದರೆಂದು ಹೇಳಬಹುದಾದರೂ ದೂರದ ಇಂಗ್ಲೆಂಡಿಗೆ ಈ ಪದಗಳು ಹೋದದು ಹೇಗೆ ? ಮಂಗವು ಇಂಗ್ಲಿಷ್‌ನಲ್ಲಿ ಮಂಕಿ (Monkey), ಹಿಂದಿಯಲ್ಲಿ ಮಾಕಡ, ಸಂಸ್ಕೃತ ಮರ್ಕಟ—ಎಲ್ಲವೂ ಹತ್ತಿರದವು ಎನ್ನಿಸುತ್ತವೆ.
>
> ಭಾಷಾ ವಿದ್ವಾಂಸರು ಈಗ ಕೇವಲ ದ್ರಾವಿಡ ಪದಗಳೆಂದು ಪಟ್ಟಿ ಮಾಡಿರುವ ಪದಗಳಿಗೂ ಇಂಗ್ಲೀಷಿಗೂ ಏನಾದರೂ ಹತ್ತಿರದ ಸಂಬಂಧ ಉಂಟೆ ವಿಚಾರಿಸಬೇಕಾಗಿದೆ.

ಒಂದು :

ಶ್ರೀಯುತರು ಉದಾಹರಣೆಯಾಗಿ ಕೊಟ್ಟಿರುವ ಶಬ್ದಗಳ ವಿಚಾರವನ್ನು ತುಸು ಪರಿಶೀಲಿಸೋಣ. ೧. **ಒಂದು :** "ಒಂದು ಇಂಗ್ಲಿಷಿನ ಒನ್ (One) ಇವುಗಳ ಸಾಮ್ಯ ಹೇಗೆ ಬಂದಿತು" ಎಂದು ಅವರ ಪ್ರಶ್ನೆ. ಮೊದಲನೆಯದಾಗಿ, ಕನ್ನಡ 'ಒಂದು' ಶಬ್ದದ ಪ್ರಾತಿಪದಿಕ ರೂಪ 'ಒರ್' ಎಂಬುದನ್ನು ಗಮನಿಸಬೇಕು.

[ಕನ್ನಡ-ಕನ್ನಡ ನಿಘಂಟುವಿನಲ್ಲಿ 'ಒಂದು' ಸಂಖ್ಯಾವಾಚಕದ ಕಡೆಯಲ್ಲಿ ದ್ರಾವಿಡ ಭಾಷಾವರ್ಗದ ಜ್ಞಾತಿಶಬ್ದಗಳನ್ನು ಕೊಟ್ಟಿದ್ದಾರೆ (I-೧೧೮೪). ಅವು ಹೀಗಿವೆ: ತಮಿ. ಒನ್ಱು, ಒನ್ಡು ; ಮಲ. ಒನ್ನು, **ಒಱ್ಱ** ; ತುಳು. ಒಂಜಿ, **ಒರ್** ; ಕೊಡ. ಒಂದೀ : ತೆಲು. ಒಂದು, ಒಕ : ಕೋಲಾ, ನಾಯ್ಕಿ. ಒಕ್ಕೊದ್ ; ಪರ್ಜಿ. ಒಕ್; ಗಡಬ. ಒಕುಟ್; ಗೊಂಡೀ. ಒಂಡ್ ; ಕುಇ. **ರೊ** ; ಕುವಿ. **ರೊಂದಿ, ರೋ** ; ಕುರುಖ್. ಒಂಟಾ ; ಮಲ್ತೊ. ಓನ್ದ್, **ಒರ್ತ್**]. ಶಬ್ದಮಣಿದರ್ಪಣವನ್ನು ಅನುಸರಿಸಿ ಕ.ಕ.ನಿ. ಒಂದು>ಒರ್ ಎಂದು ನಿರ್ವಚಿಸಿದ್ದಾರೆ. ಮಲಯಾಳ (ಒಱ್ಱ<ಒಱ್+ಅ), ತುಳು, ಕುಇ (ಒರ್>ರೊ), ಕುವಿ (ರೊಂದಿ<ಒರುಂದಿ, ಓರ್>ರೋ) (ಹೋಲಿಸಿ: ಎರಂಕೆ>ರೆಂಕೆ>ರೆಕ್ಕೆ; ತಮಿಳು-ಇರಂಡು>ತೆಲುಗು -ರೆಂಡು), ಮಲ್ತೊ (ಒರ್ತ್)—ಈ ರೂಪಗಳನ್ನು ಗಮನಿಸಿದರೆ ಒರ್(ಱ್)+ ಉ>ಒಂದು (ಒನ್ದು<ಒಱ-ರ-ನ್ದ+ಉ>ಒಱಿಂದು), 'ಒರ್' ಇಂದ 'ಒಂದು' ರೂಪಗೊಂಡಿದೆಯೆ ಹೊರತು, ಕ. ಕ. ನಿ. ತಿಳಿಸಿರುವಂತೆ ಅಲ್ಲ ಎನ್ನುವುದು ಸ್ಪಷ್ಟ ಪಡುತ್ತದೆ.*

ಮಾರ್ಕಟ್ಟೆ—ಮಾರುಕಟ್ಟೆ—ಮಾರ್ಕೆಟ್ (ಮಾರ್ಕೆಟ್—Market) :

ಮಾರ್(ಱ್)ಕಟ್ಟೆಗೂ ಮಾರ್ಕೆಟ್ಟಿಗೂ ಶಬ್ದರೂಪದಲ್ಲೂ ಅರ್ಥದಲ್ಲೂ ಸಾಮ್ಯವಿರುವುದು ದಿಟ. ಈ ಅರ್ಥದಲ್ಲಿ ಶಬ್ದಮಣಿದರ್ಪಣದಲ್ಲಿ ಉಲ್ಲೇಖವಿರುವುದೂ ಸರಿಯೇ. ಆದರೆ ಇಂಗ್ಲಿಷ್ ನಿಘಂಟುವಿನಲ್ಲಿ (C.O.D.) market ಪದದ ರೂಪನಿಷ್ಪತ್ತಿಯನ್ನು ಪರಿಶೀಲಿಸಿದರೆ ಈ ಶಬ್ದ ಹಳೇ ಉತ್ತರ ಫ್ರೆಂಚ್ ಶಬ್ದವೆಂದೂ (ONF) ಅದು ಲ್ಯಾಟಿನ್ ಭಾಷೆಯ mercatus, mercari (trade ಎಂಬ ಅರ್ಥದಲ್ಲಿ) (ಹೋಲಿಸಿ : mercantile, merchant, merchandise) ಶಬ್ದದಿಂದ ಬಂದುದೆಂದೂ ತಿಳಿದುಬರುತ್ತದೆ. ಕನ್ನಡದಿಂದ ಇಲ್ಲವೆ ಯಾವುದೇ ದ್ರಾವಿಡ ಭಾಷೆಯಿಂದ ಹೋಗಿರುವ ಸಾಧ್ಯತೆ ಕಡಮೆ. ಗ್ರೀಕರು ಮತ್ತು ರೋಮಕರೊಂದಿಗೆ ಕಡಲುಮಾರಾಟವೇನೋ ನಡೆಯುತ್ತಿತ್ತು ಎಂದು ಇತಿಹಾಸದಿಂದ ತಿಳಿದುಬರುತ್ತದೆ. ಇಂಗ್ಲಿಷ್ ಪದ ನೇರವಾಗಿ ONF ನಿಂದ

---

* ಕ. ಕ. ನಿ. ಈ ಪದವನ್ನು ದೇಶ್ಯ ಎಂದು ಮಾತ್ರ ನಿರ್ದೇಶಿಸಿದೆ. ಸಂ. ಹೀಗಲ್ಲ.

ಹೋಗಿರುವುದರಿಂದ, ಪ್ರೊ॥ ಕುಲಕರ್ಣಿ ಅವರು ತೀರ್ಮಾನಿಸಿರುವಂತೆ, "ಮಾರ್ಕೆಟ್ ಎಂಬ ಇಂಗ್ಲಿಷ್ ಪದಕ್ಕೆ ಹತ್ತಿರ ಮಾತ್ರವಲ್ಲ ಒಂದೇ ಪದದ ಎರಡು ರೂಪಗಳೆಂದು ತೀರ ಸ್ಪಷ್ಟವಾಗಿದೆ" ಎಂದು ಖಚಿತವಾಗಿ ಹೇಳುವುದು ಸಾಹಸ ಎಂದು ತೋರುತ್ತದೆ. ಆದರೆ, ಲ್ಯಾಟಿನ್ ಶಬ್ದರೂಪಕ್ಕೆ ದ್ರಾವಿಡದ 'ಮಾಱ್' ಸಂಬಂಧ ಇರಬಹುದೇ ಎಂಬ ಪ್ರಶ್ನೆ ಪರಿಶೀಲನಾರ್ಹ.

ಮಂಗ—ಮಂಕಿ—(monkey)—ಮಾಕಡ—ಮರ್ಕಟ :

ಮಂಗ, ಮಂಕಡ, ಮಾಕಡ (ಹಿಂದಿ), ಮರ್ಕ, ಮಕ್ಕಡ–ಈ ಎಲ್ಲ ರೂಪಗಳೂ 'ಮರ್ಕಟ'ದ ತದ್ಭವಗಳೆಂದು ಕಿಟೆಲ್ ನಿಘಂಟು ತಿಳಿಸುತ್ತದೆ. ಕೇಶಿರಾಜನೂ ಅಪಭ್ರಂಶ ಪ್ರಕರಣದಲ್ಲಿ 'ಮಕ್ಕಡ', 'ಮಂಕಡ'ಗಳು ಮರ್ಕಟದ ತದ್ಭವಗಳೆಂದೇ ಹೇಳಿದ್ದಾನೆ. C.O.D. ಇಂಗ್ಲಿಷ್ ನಿಘಂಟುವಿನಲ್ಲಿ monkey ಶಬ್ದದ ಮುಂದೆ ಪ್ರಶ್ನಾರ್ಥಕ ಚಿಹ್ನೆ ಕೊಟ್ಟಿದ್ದಾನೆ. ದಕ್ಷಿಣದ ದ್ರಾವಿಡ ಭಾಷೆಗಳಲ್ಲಿ ಕೋತಿ, ಕೋಡಗ ಎಂಬ ಮಾತುಗಳೂ ಇದ್ದು, 'ಮಂಗ' 'ಮಂಕ(ಡ)'ದ ಇನ್ನೊಂದು ರೂಪ ಎನ್ನಬಹುದು. ಇಂಗ್ಲಿಷಿನ 'ಮಂಕಿ'ಯ ಮೂಲವನ್ನು 'ಮಂಕ'(ಡ)ದಲ್ಲಿ ಗುರುತಿಸಬಹುದಾದರೂ 'ಮಂಕಡ'ವು ಅಪೂರೂಪದ ಪ್ರಯೋಗವಾಗಿರುವುದರಿಂದ ಅದರಿಂದ 'ಮಂಕಿ' ರೂಪಗೊಂಡಿದೆ ಎಂದು ಊಹಿಸುವುದು ಕಷ್ಟ. 'ಮಂಗ', 'ಮಂಕ'ಡ, 'ಮಂಕಿ' ಇವುಗಳಲ್ಲಿ ಕಂಡುಬರುವ ರೂಪಸಾಮ್ಯವೇನೋ ಕುತೂಹಲ ಕಾರಿಯಾಗಿದೆ. ಸದ್ಯದ ಮಟ್ಟಿಗೆ ಮಂಗ–ಮಂಕಿ ಸಾಮ್ಯದ ಪ್ರಸಕ್ತಿಯನ್ನು 'ತೆರೆದ ಪ್ರಶ್ನೆ'ಯಾಗಿ ಇಟ್ಟುಕೊಳ್ಳಬಹುದು. ಹೆಚ್ಚಿನ ವಿಚಾರ ವಿಮರ್ಶೆ 'ಮಂಗಚೇಷ್ಟೆ' ಎನಿಸಬಹುದು !

ಇಂಗ್ಲಿಷು ಅನೇಕ ಪದಗಳನ್ನು ನೇರವಾಗಿ ಜರ್ಮನ್, ಲ್ಯಾಟಿನ್, ಗ್ರೀಕ್, ಮುಂತಾದ ಭಾಷೆಗಳಿಂದ ಸ್ವೀಕರಿಸಿದ್ದು, ಆ ಭಾಷೆಗಳೂ ಸಂಸ್ಕೃತವೂ ಇಂಡೋ–ಯೂರೋಪಿಯನ್ ಭಾಷಾವರ್ಗಕ್ಕೆ ಸೇರಿರುವುದರಿಂದಲೂ ಅನೇಕಾನೇಕ ಕನ್ನಡ ಶಬ್ದಗಳು ಸಂಸ್ಕೃತದ ತದ್ಭವಗಳಾಗಿರುವುದರಿಂದಲೂ ಹಲಕೆಲವು ಸಂದರ್ಭಗಳಲ್ಲಿ ಇಂಗ್ಲಿಷ್-ಸಂಸ್ಕೃತ-ಕನ್ನಡ ಶಬ್ದಗಳಲ್ಲಿ ರೂಪಸಾಮ್ಯ ಕಂಡುಬಂದರೆ ಆಶ್ಚರ್ಯವಿಲ್ಲ. ಕೆಲವು ಸಂದರ್ಭಗಳಲ್ಲಿ ದ್ರಾವಿಡ ಭಾಷಾವರ್ಗವೂ ಸೇರಿದಂತೆ ಭಾರತೀಯ ಭಾಷೆ ಗಳಿಂದ ಪದಗಳನ್ನು ನೇರವಾಗಿ ಇಂಗ್ಲಿಷು ಸ್ವೀಕರಿಸಿರುವುದಕ್ಕೆ ಉದಾಹರಣೆಗಳನ್ನು ಕೊಡಬಹುದು :

ರಾಗಿ (ragi) :

ಈ ಪದ ಅನೇಕ ಭಾರತೀಯ ಭಾಷೆಗಳಲ್ಲಿದ್ದರೂ ಇದು ಮೂಲತಃ ಕನ್ನಡದ್ದೇ ಎಂದು ನನಗೆ ತೋರುತ್ತದೆ. ಇದು ಹಿಂದಿಯಿಂದ ಬಂದದ್ದು ಎಂದು C.O.D. ;

ನಿಘಂಟಿನಲ್ಲಿ ಐವಳ ಈಚಿನ ಸೇರ್ಪಡೆ ; ಇತರ ಕೆಲವು ದ್ರಾವಿಡ ಭಾಷೆಗಳಲ್ಲಿದ್ದರೂ, ಕನ್ನಡದಿಂದಲೇ ಹೋಗಿರಬೇಕು. ತಮಿಳಿನಲ್ಲಿ 'ರ' ಕಾರಾದಿಯಾದ ಪದಗಳಿಗೆ ಆದಿಯಲ್ಲಿ ಸ್ವರವನ್ನು ಹಚ್ಚಿ ಉಚ್ಚರಿಸುವ ಸಂದರ್ಭಗಳು ಗೋಚರವಾಗುವುದು ಪ್ರಾಯಿಕವಾಗಿ ಅನ್ಯಭಾಷೆಗಳಿಂದ ಮಾತಿನ ಎರವಲು ನಡೆದಾಗಲೇ. ಉದಾ: ರಾಜನ್ > ಅ + ರಾಜನ್ > (ಅರಜನ್) ಅರಸನ್ (ಕನ್ನಡ). 'ಅರಜ' ತಮಿಳು ಮಲಯಾಳಗಳಲ್ಲೂ 'ಅರಸ' ಕನ್ನಡದಲ್ಲೂ ಪ್ರಚಲಿತವಿರುವ ರೂಪಾಂತರಗಳು. ತಮಿಳಿನ ಮೂಲಕವೇ ಸಂಸ್ಕೃತದ 'ರಾಜ' ಕನ್ನಡದಲ್ಲಿ 'ಅರಸ' ಆಗಿರಬಹುದು.

ರೈಸ್ (rice) :

ಇದರ ಮೂಲ ಪೌರಾತ್ಯ (oriental) ಎಂದು ಹೇಳಿ ಗ್ರೀಕ್, ಲ್ಯಾಟಿನ್ (oruza) > ಇಟಾಲಿಯನ್ > ಫ್ರೆಂಚ್ (ris) ಮೂಲಗಳನ್ನು ಕ್ರಮವಾಗಿ ಹೇಳಿದೆ. ಯೂರೋಪಿನ ಭಾಷೆಗಳಿಗೆ ದ್ರಾವಿಡ ಪದ ಗ್ರೀಕಿನ ಮೂಲಕ ಹೋಗಿರುವುದು ಸ್ಪಷ್ಟ. ಅತ್ಯಂತ ಪ್ರಾಚೀನರೂಪ ಕನ್ನಡದ್ದು ಎಂದೇ ತೋರುತ್ತದೆ; ಅಬ್ಕಿ > ಅರ್ಕಿ > ಅಕ್ಕಿ. 'ಅರ್ಕಿ' ತಮಿಳಿನಲ್ಲಿ ಅರಿಚಿ (ಅರ್ಕಿ > ಅರ್ಚಿ > ಅರಿಚಿ), ಅರಿಜಿ, ಅರಿಶಿ ಆಗಿದೆ. ತಮಿಳಿನಿಂದ ಗ್ರೀಕ್ ಮಾರ್ಗವಾಗಿ ಇತರ ಯೂರೋಪಿನ ಭಾಷೆಗಳಿಗೆ ಪ್ರಯಾಣ. (ಕ. ಕ. ನಿ.ನಲ್ಲಿ ಅಬ್ಕಿ ಉಲ್ಲೇಖಗೊಂಡಿಲ್ಲ. ಇದು ನನ್ನ ಊಹೆ ಮಾತ್ರ).

ಮ್ಯಾಂಗೊ (mango) :

ಇದು ನೇರವಾಗಿ ದ್ರಾವಿಡ ಮೂಲದಿಂದ ಇಂಗ್ಲಿಷಿಗೆ ಹೋಗಿರುವ ಪದ. ಕನ್ನಡದಲ್ಲಿ 'ಮಾಂಗಾಯ್' (ಮಾ, ಮಾನ್+ಕಾಯ್) ತಮಿಳಿನಲ್ಲೂ ಉಂಟು. C.O.D. ಪೋರ್ತುಗೀಸಿನ ಮೂಲಕ ತಮಿಳು ಮೂಲವನ್ನು ಹೇಳುತ್ತದೆ.

ಹೀಗೆಯೇ, ಹುಡುಕಿ ತಡಕಿ ಹೆಕ್ಕಿ ಬೆದಕಿ ವಿದ್ವಾಂಸರು ಒಂದು ಸಣ್ಣಪ್ರಮಾಣದ ಪಟ್ಟಿಯನ್ನೇ ತಯಾರಿಸಬಹುದು. ದ್ರಾವಿಡ ಶಬ್ದಗಳು ಸ್ವದೇಶದಲ್ಲಿ (ಸಂಸ್ಕೃತಕ್ಕೆ, ಈಚಿನ ದಿನಗಳಲ್ಲಿ ಮರಾಠಿ, ಬಂಗಾಳಿ ಮತ್ತು ಇತರ ಭಾಷೆಗಳಿಗೆ) ಮಾತ್ರವಲ್ಲದೆ, ವಿದೇಶಗಳಿಗೂ ಪಯಣ ಬೆಳಸಿವೆ. ಪಡುಗಡೆಗೆ ಮಾತ್ರವಲ್ಲದೆ ಮೂಡಗಡೆಗೂ (ಮ್ಯಲೇಸಿಯಾ, ಜಪಾನ್, ಮುಂತಾದ ಕಡೆಗಳಿಗೆ) ವಲಸೆ ಹೋಗಿವೆ, ಸರಕು ಸಾಮಾನುಗಳೊಂದಿಗೆ, ಜನದ ಜೊತೆ.

ಶ್ರೀವಿಜಯನ 'ಧ್ವನಿ'-ಕಂದ

—ಯ. ಕೃಷ್ಣಶರ್ಮಾ

ಕವಿರಾಜಮಾರ್ಗದ ಮೂರನೆಯ ಪರಿಚ್ಛೇದದಲ್ಲಿ ಶ್ರೀವಿಜಯನು ಅಂದು ಪ್ರಸಿದ್ಧವಿದ್ದ (ಭಾಮಹ, ದಂಡಿ ಅವರನ್ನನುಸರಿಸಿ) ೩೪ ಅರ್ಥಾಲಂಕಾರಗಳನ್ನು ನಿರೂಪಿಸಿದ್ದಾನೆಂಬುದು ಸರಿಯಷ್ಟೆ. ಅಲಂಕಾರ ನಿರೂಪಣೆಗೆ ತೊಡಗುವ ಮುನ್ನ ಪ್ರತಿಜ್ಞಾವಾಕ್ಯದಲ್ಲೂ ೩೪ ಅರ್ಥಾಲಂಕಾರಗಳನ್ನು ಮಾತ್ರ ಹೆಸರಿಸಿರುವದರಿಂದ ಕವಿರಾಜಮಾರ್ಗದಲ್ಲಿ ಹೆಚ್ಚಿನ ಅರ್ಥಾಲಂಕಾರಗಳ ಶಂಕೆಗೆ ಅವಕಾಶವಿಲ್ಲ. ಯದ್ಯಪಿ ದಂಡಿಯು 'ಭಾವಿಕ'ವನ್ನು 'ಗುಣ'ವೆಂದು ಕರೆದೂ ಅರ್ಥಾಲಂಕಾರಗಳ ಪ್ರತಿಜ್ಞಾ ವಾಕ್ಯದ ಕೊನೆಯಲ್ಲಿ 'ಭಾವಿಕ'ವನ್ನೂ ಹೆಸರಿಸಿದ್ದಾನೆ. ಅದು ಅರ್ಥಾಲಂಕಾರ ಮಾಲಿಕೆಯಲ್ಲಿ ಸೇರುವದಿಲ್ಲೆಂಬ ಕಾರಣದಿಂದಲೇ ಪ್ರತಿಜ್ಞಾವಾಕ್ಯದಲ್ಲಿ 'ಭಾವಿಕ'ವನ್ನು ಹೆಸರಿಸದಿರುವದು ಮಾರ್ಗಕಾರನ ಔಚಿತ್ಯಪ್ರಜ್ಞೆಗೊಂದು ನಿದರ್ಶನ. ಹೀಗೆ ಪ್ರತಿಜ್ಞಾವಾಕ್ಯದಲ್ಲಿ ಶ್ರೀವಿಜಯನು 'ಭಾವಿಕ'ವನ್ನು ಉಲ್ಲೇಖಿಸದೆ ಕೈಬಿಟ್ಟುದು ಉದ್ದೇಶಪೂರ್ವಕವೇ ಹೊರತು ಆಕಸ್ಮಿಕವಲ್ಲ.

ಭಾಮಹ, ದಂಡಿ ಹಾಗೂ ಮಾರ್ಗಕಾರನ ಪ್ರಕಾರ (ಮುಂದೆ ಉದಯಾದಿತ್ಯ, ಇಮ್ಮಡಿ ನಾಗವರ್ಮರ ಪ್ರಕಾರವೂ ಕೂಡಾ) ಭಾವಿಕವು ಗುಣವೇ ಹೊರತು ಅರ್ಥಾ ಲಂಕಾರವಲ್ಲ. ಇವರೆಲ್ಲರೂ ಅರ್ಥಾಲಂಕಾರ ನಿರೂಪಣೆಯ ಕೊನೆಯಲ್ಲಿ ಪ್ರಾಸಂಗಿಕ ವಾಗಿ ಭಾವಿಕದ ಲಕ್ಷಣವನ್ನು ಸಂಗ್ರಹಿಸಿದ್ದಾರೆ. ಲಕ್ಷ್ಯವನ್ನು ಉದಾಹರಿಸಿಲ್ಲ. ಮಾರ್ಗಕಾರನು ಭಾವಿಕದ ವಿಷಯದಲ್ಲಿ ಉದಾಸೀನನೆಂದು ಹೇಳಬೇಕು. ಭಾಮಹ ದಂಡಿ ಅವರು ಹೇಳಿದ್ದಾರೆಂಬ ಗೌರವದಿಂದ ಪ್ರಾಸಂಗಿಕವಾಗಿ ಭಾವಿಕವೆಂಬುದು 'ಕೇವಲಮಲಂಕೃತಿ' ಎಂದು ಒಂದು ಮಾತು ಹೇಳಿದ ಅಷ್ಟೇ. ಭಾವಿಕವು ಪ್ರಬಂಧದ ಉದ್ದಕ್ಕೂ ಹಾಸುಹೊಕ್ಕಾಗಿರಬೇಕಾದ ಗುಣ. 'ಕಾವ್ಯಶೋಭಾಕರ ಧರ್ಮ'ವೆಂಬರ್ಥ ದಲ್ಲಿ ಅದು ಅಲಂಕಾರ. ಭಾಮಹ, ದಂಡಿ ಅವರಿಗಿಂತ ಹಿಂದೊಮ್ಮೆ ಅದೊಂದು ಪ್ರಮುಖ ಕಾವ್ಯತತ್ತ್ವವೆಂದು ಸ್ವೀಕೃತವಾಗಿತ್ತೇನೋ ! ಮಾರ್ಗಕಾರನು ಭಾವಿಕವನ್ನು ಅರ್ಥಾಲಂಕಾರವೆಂದು ಪರಿಗಣಿಸಿಲ್ಲ. ಅರ್ಥಾಲಂಕಾರಗಳ ನಿರೂಪಣೆಯ ಸಂದರ್ಭ ದಲ್ಲಿ ಅದು ವಿಷಯಾಂತರ. ಅಂತೆಯೇ ಭಾವಿಕನಿರೂಪಣೆಯಲ್ಲಿ ಮಾರ್ಗಕಾರನು ಕಂದವನ್ನುಳಿದು ಗೀತಿಕೆಗೆ ಇಳಿದುದನ್ನು ನೆನೆಯಬಹುದು. 'ಆಕ್ಷೇಪ'ದ ನಿಗಮನ ವೊಂದನ್ನುಳಿದು (III-೧೦೭) ಅರ್ಥಾಲಂಕಾರ ನಿರೂಪಣೆಯ ಉದ್ದಕ್ಕೂ ಕಂದವನ್ನೇ ಬಳಸಿದ ಗ್ರಂಥಕಾರನು ಭಾವಿಕ ನಿರೂಪಣೆಯಲ್ಲಿ ವೃತ್ತವನ್ನು ಬದಲಾಯಿಸುತ್ತಿರು ವದು ವಿಷಯಾಂತರವೆಂಬ ಉದ್ದೇಶದಿಂದಲೇ ಇರಬೇಕು. ಯದ್ಯಪಿ, ವೃತ್ತ ಪರಿವರ್ತನೆಯಾದಲ್ಲೆಲ್ಲಾ ವಿಷಯಾಂತರವೆಂದಾಗಲಿ, ವಿಷಯಾಂತರ ಇದ್ದಲ್ಲೆಲ್ಲಾ ವೃತ್ತ

ಪರಿವರ್ತನೆಯಾಗಬೇಕೆಂದಾಗಲಿ ಶಾಸನವೇನೂ ಇಲ್ಲ. ಮಹಾಕಾವ್ಯಗಳ ಸರ್ಗಗಳ ಕೊನೆಯಲ್ಲಿ ವೃತ್ತಗಳನ್ನು ಬದಲಾಯಿಸಬೇಕೆಂಬ ನಿಯಮವಿದೆಯಾದರೂ ಕವಿರಾಜ ಮಾರ್ಗದಂತಹ ಲಕ್ಷಣ ಗ್ರಂಥಗಳಿಗೆ ಈ ನಿಯಮ ಅನ್ವಯಿಸುವದಿಲ್ಲ. ಪ್ರಕೃತ, ಅದೊಂದು ಪ್ರಮಾಣವೆಂದರ್ಥವಲ್ಲ; ಗಮಕವೆಂದು ಮಾತ್ರ ಪರಿಗಣಿಸಬಹುದು. ಭಾವಿಕವನ್ನು ಸೀಮಿತ ವ್ಯಾಪ್ತಿಯ ಅರ್ಥಾಲಂಕಾರವೆಂದು ಬಗೆದಾಗ ಮಾರ್ಗಕಾರನು ಅದಕ್ಕೊಂದು ಲಕ್ಷ್ಯವನ್ನು ಉದಾಹರಿಸಬೇಕಿತ್ತು. ಅದು ಕಾವ್ಯದ ಆಂತರ ಧರ್ಮ ವೆಂದವನು ಬಗೆದುದರಿಂದಲೇ–ದಂಡಿ ಭಾಮಹರಂತೆಯೇ–ಲಕ್ಷ್ಯವನ್ನುದಾಹರಿಸಿಲ್ಲ. ಔಚಿತ್ಯಪರ್ಯವಸಾಯಿಯೆನಿಸುವ ಭಾವಿಕವು ಪ್ರಾಚೀನರ ಪ್ರಕಾರ ಅರ್ಥಾಲಂಕಾರ ಕ್ಕಿಂತ ವಿಶಾಲವ್ಯಾಪ್ತಿಯುಳ್ಳದ್ದು.

'ಧ್ವನಿ'ಯ ವಿಚಾರವೂ ಕೂಡ ಕವಿರಾಜಮಾರ್ಗದಲ್ಲಿ ಪ್ರಾಸಂಗಿಕವಾಗಿಯೇ ಬಂದಿದೆ. 'ಧ್ವನಿ'ಯ ಪ್ರಾಥಮಿಕ ಸ್ವರೂಪವನ್ನು ಕೇಳಿ ತಿಳಿದಿದ್ದ ಮಾರ್ಗಕಾರನು ಅದು ಅಲಂಕಾರಗಳಿಗಿಂತ ಭಿನ್ನವಾದ ಕಾವ್ಯತತ್ವವಲ್ಲೆಂದು ತನ್ನ ನಿಲುವನ್ನು ಸ್ಪಷ್ಟ ಪಡಿಸಿದ್ದಾನೆ. 'ಕಾವ್ಯದ ಆತ್ಮ'ವೆಂಬ ಮಾತು 'ಧ್ವನಿ'ಯ ಮೂಲಭೂತ ಲಕ್ಷಣವಲ್ಲ. ಅದು 'ಸಹೃದಯ–ವಿದ್ವದುನ್ಮುಖೀಕರಣ'ಕ್ಕಾಗಿ ಹೇಳಿದ ಪುರೋಚನೆ ಅಷ್ಟೇ. ಆ ಮಾತು ಮಾರ್ಗಕಾರನಿಗೆ ಅಪ್ರಕೃತ. ಅವನಿಲ್ಲಿ 'ಧ್ವನಿ'ಯ ಸ್ವರೂಪದ ವಿಷಯ ದಲ್ಲೇ ಶಂಕಿಸುತ್ತಿದ್ದಾನೆ. 'ಕಾವ್ಯದ ಆತ್ಮ'ವೆಂಬ ಮಾತು ಮತ್ತಿನದಾಯಿತು. ಅರ್ಥಾಲಂಕಾರಗಳಿಗಿಂತ ಭಿನ್ನವಾದ ಕಾವ್ಯತತ್ವವೆಂಬ ಮಾತೇ 'ಧ್ವನಿ'ಗೆ ಸಿದ್ಧಿಸುವ ದಿಲ್ಲೆಂದು ಮಾರ್ಗಕಾರನ ವಾದ. ಕೆಲವರು ಹೇಳುತ್ತಿರುವ 'ಧ್ವನಿ'ಯು ನಾವು ಈ ಹಿಂದೆ ನಿರೂಪಿಸಿದ ಅತಿಶಯೋಕ್ತಿಯೇ ಮೊದಲಾದ ಕೆಲವು ಅಲಂಕಾರಗಳಲ್ಲೇ ಅಡಕವಾಗಿದೆ. ಅಭಿಧಾ, ಲಕ್ಷಣಾ, ಗೌಣೀ ಎಂಬಿವಿಷ್ಟು ಅರ್ಥಬೋಧಕವಾದ ಶಕ್ತಿ ಗಳನ್ನು ಶಬ್ದಗತವೆಂದು ಮಾತ್ರ ಶಾಸ್ತ್ರಕಾರರು ಒಪ್ಪಿದ್ದಾರೆಯೇ ಹೊರತು ಅರ್ಥ ಗತವೂ ಹೌದೆಂದು ಇದುವರೆಗೂ ಯಾರೂ ಒಪ್ಪಿದ್ದು ಕಂಡುಬಂದಿಲ್ಲ. 'ಧ್ವನಿವಾದಿ' ಗಳು ಹೇಳುವಂತೆ ವ್ಯಂಜನೆಯೆಂಬ ಶಕ್ತಿಯು ಅರ್ಥಗತವೂ ಹೌದೆಂದು ಒಪ್ಪಿದರೆ ಲೋಕಶಾಸ್ತ್ರ ವಿರುದ್ಧವೆನಿಸುವದರಿಂದ 'ಧ್ವನಿವಾದಿ'ಗಳ ಮಾತು ದೂಷ್ಯ. ಧ್ವನಿ ವಾದಿಗಳು ಹೇಳುವ ಧ್ವನಿಯು ನಾವು ಹಿಂದೆ ಹೇಳಿದ ಅಲಂಕಾರಗಳಲ್ಲೇ ಅಂತರ್ಗತವೇ ಹೊರತು ಬೇರೆಯಲ್ಲವೆಂಬುದಕ್ಕೆ ಇಕೋ ಇದೊಂದು ಉದಾಹರಣೆ. 'ಕಮಲದೊಳ್- ನಿಮಿಷಯುಗಂ' ಎಂಬಲ್ಲಿ ಅತಿಶಯೋಕ್ತಿಯೇ ಅಲಂಕಾರವೆಂಬುದನ್ನು ನೆನಪುಮಾಡಿ ಕೊಂಡರಾಯಿತು ಎಂಬುದಿಲ್ಲಿ ಮಾರ್ಗಕಾರನ ವಿವಕ್ಷೆ. ಹೀಗೆ, ಧ್ವನಿ ನಿರಾಕರಣೆಯೇ ಮಾರ್ಗಕಾರನಿಗಿಲ್ಲಿ ವಿವಕ್ಷಿತವೇ ಹೊರತು ಧ್ವನ್ಯಲಂಕಾರವಲ್ಲ. ಧ್ವನ್ಯಲಂಕಾರವು ನಮ್ಮ ಪ್ರಮಾದದಿಂದ ರೂಪುತಾಳಿದ್ದೇ ಹೊರತು ಮಾರ್ಗಕಾರನು ಹೇಳಿದ್ದಲ್ಲ. 'ಆಲಂಕಾರಿಕ ಜಗತ್ತಿನಲ್ಲಿ ಇತ್ತೀಚೆ ಕೇಳಿಬರುತ್ತಿರುವ ಧ್ವನಿಯು ಅಲಂಕಾರ ಗಳಿಗಿಂತ ಭಿನ್ನವಲ್ಲವೆಂಬುದನ್ನು ಹೀಗೆ ಕಂಡುಕೊಳ್ಳಿ' ಎಂದು ಹೇಳಿ, ಲಕ್ಷ್ಯವೊಂದನ್ನು

ಉದಾಹರಿಸಿದ್ದರಿಂದ ನಾವು ಇಲ್ಲಿ ಎಡವಲು ಕಾರಣವಾಯಿತು. ಅರ್ಥಾಲಂಕಾರ ಪ್ರಕರಣದಲ್ಲಿ ಈ ಮಾತು ಬಂದುದು ನಮ್ಮ ಭ್ರಮೆಗೆ ಇನ್ನೊಂದು ಕಾರಣ. ಕವಿರಾಜ ಮಾರ್ಗದ ಎರಡನೆಯ ಆವೃತ್ತಿಯಲ್ಲಿನ ಅರ್ಥಾಲಂಕಾರಗಳ ಕ್ರಮಸಂಖ್ಯೆಗಳು ನಾವಿಲ್ಲಿ ದಾರಿತಪ್ಪಲು ಮತ್ತೊಂದು ಕಾರಣ. ಮಾರ್ಗಕಾರನು ನಿರೂಪಿಸಿದ್ದು ತನ್ನ ಪ್ರತಿಜ್ಞೆಗನುಸಾರವಾಗಿ ೩೫ ಅರ್ಥಾಲಂಕಾರಗಳನ್ನು ಮಾತ್ರ, ಭಾವಿಕವೂ ಒಂದು ಅರ್ಥಾಲಂಕಾರವೆಂದುಕೊಂಡು ಅದನ್ನು ೩೫ನೆಯದೆಂದೂ. 'ಧ್ವನಿನಿರಾಕರಣೆ' ಯನ್ನು 'ಧ್ವನ್ಯಲಂಕಾರ'ವೆಂದುಕೊಂಡು ಅದನ್ನು ೩೬ನೆಯದೆಂದೂ ಕೂಡ ಲೆಕ್ಕ ಹಾಕಿದ್ದು ಆಕಸ್ಮಿಕವೇ ಹೊರತು ಪ್ರಾಮಾಣಿಕವಲ್ಲ. ಅನೌಚಿತ್ಯಭೂಯಿಷ್ಠವಾದ ಈ ಧ್ವನ್ಯಲಂಕಾರವು ಮಾರ್ಗಕಾರನು ಹೇಳಿದ್ದೆಂದರೆ ಅದು ಆರೋಪವೇ ಹೊರತು ವಸ್ತುಸ್ಥಿತಿಯಲ್ಲ. 'ಧ್ವನಿ'ಯ ಪ್ರಾಥಮಿಕ ಲಕ್ಷಣವನ್ನೂ, ಮಾರ್ಗಕಾರನ 'ಧ್ವನಿ ಯೆಂಬುದಳಂಕಾರಂ' ಎಂಬ ಪದ್ಯವನ್ನೂ ಒಟ್ಟೊಟ್ಟಿಗಿಟ್ಟುಕೊಂಡು ಪರಿಶೀಲಿಸಿದಾಗ ಮಾರ್ಗಕಾರನ ಆಶಯವು ವ್ಯಕ್ತವಾಗದಿರದು. ಧ್ವನ್ಯಾಲೋಕಕ್ಕೆ ಮುಂಚೆ ಆಲಂಕಾರಿಕ ಜಗತ್ತಿನಲ್ಲಿ 'ಧ್ವನಿ'ಯ ವ್ಯವಹಾರವು ಮೌಖಿಕಪರಂಪರೆಯ ರೂಪದಲ್ಲಿ ಆರಂಭವಾಗಿ ದೀರ್ಘಕಾಲ ಸಂದುಹೋಗಿತ್ತೆಂಬುದಕ್ಕೆ ಮಾರ್ಗಕಾರನ ಈ ಧ್ವನಿ ನಿರಾಕರಣೆಯು ಪ್ರಮಾಣವೆನ್ನಲಡ್ಡಿಯಿಲ್ಲ. 'ಧ್ವನಿಯೆಂಬುದಳಂಕಾರಂ' ಎಂಬ ಪದ್ಯವು ಮಾರ್ಗಕಾರ-ನದಿರಲಿ ಅಥವಾ ಪ್ರಕ್ಷಿಪ್ತವಿರಲಿ, ಅದರ ಅರ್ಥ ಮಾತ್ರ ಧ್ವನಿನಿರಾಕರಣೆಯೇ ಹೊರತು ಧ್ವನ್ಯಲಂಕಾರವಲ್ಲ. ಭಾಮಹನ ಸ್ಫೋಟ ನಿರಾಕರಣೆಯನ್ನು ಗಮನಿಸಿದಾಗ ಅದೊಂದು ಧ್ವನಿನಿರಾಕರಣೆಯ ಪೀಠಿಕೆಯೇನೋ ಎನಿಸುತ್ತದೆ. ಯದ್ಯಪಿ ಸ್ಫೋಟ ನಿರಾಕರಣೆಯು ಭಾಮಹನಿಗಿಂತ ಹಿಂದಿನಿಂದಲೂ ಇದ್ದುದಾದರೂ ಅಲಂಕಾರಶಾಸ್ತ್ರ ಗ್ರಂಥದಲ್ಲಿನ ಈ ನಿರಾಕರಣೆಯು ಪರ್ಯಾಯವಾಗಿ ಧ್ವನಿಯನ್ನು ಕುರಿತುದು ಇರ ಬಹುದು. ಭಾಮಹನ ಕಾಲದಲ್ಲಿನ್ನೂ ಧ್ವನಿಯ ದನಿ ಕೇಳಿಬರಲಾರಂಭವಾಗಿರ ಲಿಲ್ಲೆಂಬುದಕ್ಕೆ ಪ್ರಮಾಣವೇನಾದರೂ ಇದೆಯೇ ? ಭಾಮಹ ದಂಡಿಗಳು ಧ್ವನಿಯನ್ನು ಹೆಸರಿಸದಿದ್ದ ಮಾತ್ರಕ್ಕೆ ಅದನ್ನವರು ಕೇಳಿಯೇ ಇರಲಿಲ್ಲೆನ್ನಲಾಗದು. 'ಬೇರೆಯವರು ಏನು ಬೇಕಾದರೂ ಹೇಳಿಕೊಳ್ಳಲಿ, ನಮ್ಮ ಅಲಂಕಾರ ಪ್ರಸ್ಥಾನಕ್ಕೆ ಇಷ್ಟು ಸಾಕು' ಎಂಬ ಅಲಂಭಾವದಿಂದ ಅವರು ಧ್ವನಿಯನ್ನು ಹೆಸರಿಸದಿರುವ ಸಂಭವವಿದೆ. 'ಮಾತಿನ ಮೋಡಿಯ ಪರಿ'ಗಳೆಲ್ಲವೂ ನಮ್ಮ ಅಲಂಕಾರಗಳ ಪೈಕಿ ಯಾವುದೋ ಒಂದಾಗಿರುವದರಿಂದ ಅದಕ್ಕೆ 'ಧ್ವನಿ' ಎಂಬ ಇನ್ನೊಂದು ಹೆಸರೊಂದೇಕೆ ? ಲಕ್ಷಣ, ಇಲ್ಲವೇ ಗೌಣೀ ಎಂಬ 'ಶಬ್ದವೃತ್ತಿ'ಯಿಂದಲೇ ಕಾವ್ಯದ ವ್ಯವಹಾರಗಳೆಲ್ಲವೂ ನಿರ್ವಾಹ ವಾಗುತ್ತಿರುವಾಗ ಶಾಸ್ತ್ರಕಾರರು ಅನುಮೋದಿಸದೇ ಇರುವ ಹೊಸದಾದ 'ವ್ಯಂಜನಾ ವೃತ್ತಿ'ಯಿಂದ ಸಾಧಿಸುವದೇನಿದೆ ? ಎಂಬುದು ಅಲಂಕಾರ ಪ್ರಸ್ಥಾನದವರ ವಾದ. ಮಾರ್ಗಕಾರನ ಈ ಧ್ವನಿ ನಿರಾಕರಣೆಯಲ್ಲಿ ಧ್ವನಿಲಕ್ಷಣಕಾರಿಕೆಯಲ್ಲಿನ 'ಶಬ್ದ' 'ಅರ್ಥ' ಪದಗಳನ್ನು ಗುರಿಯಾಗಿಟ್ಟುಕೊಂಡೇ 'ಶಬ್ದದಿಂದಂ ಧ್ವನಿಯಿಸುಗುಂ ಅರ್ಥದೆ

ದೂಷ್ಯಂ' ಎಂಬ ಮಾತು ಬಂದಿದೆ. 'ಕಮಲದೊಳನಿಮಿಷಯುಗಂ' ಎಂಬ ಲಕ್ಷ್ಯವು ಧ್ವನಿ ನಿರಾಕರಣೆಗೆ, ಅಲಂಕಾರಾಂತರ್ಭಾವಕ್ಕೆ ಉದಾಹೃತವಾದುದೇ ಹೊರತು ಧ್ವನ್ಯಲಂಕಾರಕ್ಕೆ ಉದಾಹರಣೆಯಲ್ಲ. 'ಧ್ವನಿ'ಯ ಪ್ರಾಥಮಿಕಲಕ್ಷಣವು (ಯತ್ರಾರ್ಥಃ ಶಬ್ದೋ ವಾ...) 'ಕಮಲದೊಳನಿಮಿಷಯುಗಂ' ಎಂಬ ಲಕ್ಷ್ಯದಲ್ಲಿ ಮೇಲುನೋಟಕ್ಕೆ ಸಮನ್ವಯವಾಗುವದರಿಂದ, ವಾಚ್ಯಾತಿರಿಕ್ತವಾದ ಅರ್ಥವು ತೋರುವ ಸ್ಥಳದಲ್ಲಿ ಧ್ವನಿವಾದಿಗಳು 'ಧ್ವನಿ'ಯನ್ನು ಒಪ್ಪುತ್ತಾರಾದೀತೆಂಬುದು ಮಾರ್ಗಕಾರನ ಆಶಯ ವಿತ್ತೆಂದು ಅವನ ಈ 'ಧ್ವನಿಕಂದ'ದಿಂದ ನಾವು ಊಹಿಸಬಹುದು. 'ಕಮಲ' ಮತ್ತು 'ಅನಿಮಿಷ' ಪದಗಳಲ್ಲಿ ತಮ್ಮ 'ತಾವರೆ' 'ಮೀನು' ಎಂಬ ವಾಚ್ಯಾರ್ಥ ಗಳನ್ನು ಅಪ್ರಧಾನವಾಗಿರಿಸಿಕೊಂಡು 'ಮುಖ' ಹಾಗೂ 'ಕಣ್ಣುಗಳು' ಎಂಬ ಅರ್ಥ ಗಳನ್ನು ಪ್ರಧಾನವಾಗಿ ಬೋಧಿಸುತ್ತವೆ. ಇಲ್ಲಿನ 'ಕಮಲ' ಹಾಗೂ 'ಅನಿಮಿಷ' ಶಬ್ದಗಳು ಸಾಧ್ಯವಸಾನಲಕ್ಷಣೆಯಿಂದಲೇ 'ಮುಖ' ಹಾಗೂ 'ಕಣ್ಣುಗಳು' ಎಂಬವನ್ನು ಹೊಳೆಯಿಸುತ್ತವೆಯೇ ಹೊರತು ಅವುಗಳ ವಾಚ್ಯಾರ್ಥಗಳು 'ತಾವರೆ' 'ಮೀನು' ಗಳಲ್ಲಿ 'ವ್ಯಂಜನೆ'ಯೆಂಬ ವ್ಯಾಪಾರವೊಂದನ್ನು ಒಪ್ಪಿ, ಆ ವ್ಯಾಪಾರದಿಂದ 'ಮುಖ' 'ಕಣ್ಣುಗಳು' ಎಂಬೀ ಅರ್ಥಗಳು ಹೊಳೆಯುತ್ತವೆನ್ನುವದು ಸರಿಯಲ್ಲ. "ಈ ಲಕ್ಷ್ಯ ದಲ್ಲಿ ಅತಿಶಯೋಕ್ತ್ಯಲಂಕಾರವನ್ನು ನೆನಪು ಮಾಡಿಕೊಳ್ಳಬಹುದು" ಎಂಬುದಿಲ್ಲಿ ಮಾರ್ಗಕಾರನ ವಿವಕ್ಷೆ. '...ಕಾವ್ಯವಿಶೇಷಃ ಸ ಧ್ವನಿರಿತಿ' ಎಂಬ ಧ್ವನಿಲಕ್ಷಣಘಟಕ ವಾದ ಧ್ವನಿಪದವನ್ನು ನೆನೆದೇ ಮಾರ್ಗಕಾರನು 'ಧ್ವನಿಯೆಂಬುದಳಂಕಾರಂ' ಎಂದಿ ದ್ದಾನೆ. ಅಂತಹ ಕಾವ್ಯವಿಶೇಷಗಳು ಅಲಂಕಾರಗಳಿಗಿಂತ ಭಿನ್ನವೆಂಬುದು ಮಾರ್ಗಕಾರನ ನಿಲುವು.

ಧ್ವನಿವಾದಿಗಳು ಶಬ್ದಸಹಕೃತವಾದ ಅರ್ಥದಲ್ಲಿ ವ್ಯಂಜನೆಯನ್ನೊಪ್ಪುತ್ತಾ ರೆಯೇ ಹೊರತು ಕೇವಲ ಅರ್ಥದಲ್ಲಲ್ಲ, ಹಾಗಿರುವಾಗ 'ಅರ್ಥದೆ ದೂಷ್ಯಂ' ಎಂಬ ಮಾತಿನಿಂದ ಮಾರ್ಗಕಾರನು ವ್ಯಂಜನೆಯನ್ನು ದೂಷಿಸುತ್ತಿದ್ದಾನೆನ್ನುವುದು ಹೇಗೆ? ಎಂಬ ಶಂಕೆ ಸಹಜ. 'ಯತ್ರಾರ್ಥಃ ಶಬ್ದೋ ವಾ...' ಎಂದು ಧ್ವನಿಲಕ್ಷಣದಲ್ಲಿ ಶಬ್ದ ಹಾಗೂ ಅರ್ಥಗಳು ಏಕವಚನದಲ್ಲಿ ಹಾಗೂ ಬಿಡಿ ಬಿಡಿಯಾಗಿ ಉಪಾತ್ತವಾದುದ ರಿಂದ ಕೇವಲ ಅರ್ಥವೂ ವ್ಯಂಜಕವೆಂದು ಧ್ವನಿವಾದಿಗಳು ಹೇಳುತ್ತಾರೇನೋ! ಎಂಬ ಅನಿಸಿಕೆಗೆ ಅವಕಾಶವಿದೆ. ಹೆಚ್ಚಿನ ವಿಷಯಗಳು ವ್ಯಾಖ್ಯಾಗಮ್ಯವಾದುದರಿಂದ ಮಾರ್ಗಕಾರನೂ ಸಹ ಹಾಗೆಯೇ ಭಾವಿಸಿದಂತಿದೆ. 'ಉಪಸರ್ಜನೀಕೃತಸ್ವಾರ್ಥೌ ವ್ಯಂಕ್ತಃ' ಎಂಬಲ್ಲಿನ ದ್ವಿವಚನಪ್ರಯೋಜನವನ್ನು ವಿವರಿಸುವ ಮಾತುಗಳನ್ನಂತೂ ಮಾರ್ಗಕಾರನು ಕೇಳಿಲ್ಲ. ಧ್ವನಿಲಕ್ಷಣಕಾರಿಕೆಯನ್ನು ಮಾತ್ರ ನೋಡಿದ್ದ ಮಾರ್ಗ ಕಾರನು ಪೃಥಗುಪಾತ್ತವಾದ 'ಶಬ್ದ' 'ಅರ್ಥ' ಪದಗಳ ಏಕವಚನವನ್ನನುಸರಿಸಿ 'ಅರ್ಥದೆ ಧ್ವನಿಯಿಸುಗುಮೆನೆ ದೂಷ್ಯಂ' ಎಂದಿದ್ದಾನೆ. ಇಲ್ಲಿ ಇನ್ನೊಂದು ಶಂಕೆ : ಮಾರ್ಗಕಾರನು ಧ್ವನಿಯನ್ನು ನಿರಾಕರಿಸುತ್ತಿದ್ದರೆ ಲಕ್ಷ್ಯವೊಂದನ್ನು ಉದಾಹರಿಸಿದ್ದೇಕೆ?

ಎಂದು, ಪ್ರಾಯಃ ಅಂತರ್ಭಾವವಾದಿಗಳೆಲ್ಲರೂ ಲಕ್ಷ್ಯಗಳನ್ನು ಉದಾಹರಿಸಿಯೇ ಧ್ವನಿಯನ್ನು ನಿರಾಕರಿಸಿದ್ದು ಕಂಡುಬರುತ್ತದೆ. ಮಾರ್ಗಕಾರನ ಅನಂತರದ ಕಾಶ್ಮೀರದ ತಾರ್ಕಿಕನಾದ ಜಯಂತಭಟ್ಟನೂ ಸಹ 'ಭ್ರಮ ಧಾರ್ಮಿಕ ವಿಶ್ರಬ್ಧಂ', 'ಮಾಸ್ಮ ಪಾಂಥಗೃಹಂ ವಿಶ' ಎಂಬೀ ಎರಡು ಉದಾಹರಣೆಗಳನ್ನು ಎತ್ತಿ ಧ್ವನಿಯನ್ನು ನಿರಾಕರಿಸಿದ್ದು ಕಂಡುಬರುತ್ತದೆ. ಕಾವ್ಯಾದರ್ಶದ ವ್ಯಾಖ್ಯಾನಕಾರರಲ್ಲೊಬ್ಬನಾದ ರತ್ನಶ್ರೀ ಜ್ಞಾನನು ದಂಡಿಯ ಸಮಾಸೋಕ್ತಿಯನ್ನು ವ್ಯಾಖ್ಯಾನಿಸುತ್ತಾ 'ಇದನ್ನೇ ಇತರರು ಧ್ವನಿಯೆಂದು ಕರೆಯುತ್ತಾರೆ. ಹೇಗೆಂದರೆ-ಯತ್ರಾರ್ಥಃ ಶಬ್ದೋ ವಾ...' ಎನ್ನುತ್ತಾನೆ. ಪ್ರತೀಹಾರೇಂದು ರಾಜನಂತೂ ಅದೆಷ್ಟೋ ಲಕ್ಷ್ಯಗಳನ್ನು ಉದಾಹರಿಸುತ್ತಾನೆಂಬುದನ್ನು ಇಲ್ಲಿ ನೆನೆಯಬಹುದು.

ಧ್ವನ್ಯಾಲೋಕಕ್ಕಿಂತ ಹಿಂದೆಯೇ ಆಲಂಕಾರಿಕ ಜಗತ್ತಿನಲ್ಲಿ ಧ್ವನಿಯ ವ್ಯವಹಾರವು ಮೌಖಿಕ ಪರಂಪರೆಯ ರೂಪದಲ್ಲಿತ್ತೆಂದಾಗ ಧ್ವನಿವಿರೋಧವೂ ಮೌಖಿಕ ರೂಪದಲ್ಲಿ ಆಗಲೇ ಅಸ್ತಿತ್ವಕ್ಕೆ ಬಂದುದು ಸಂಭವ. ಭಾಕ್ತವಾದವಂತೂ ಅವಿಚ್ಛಿನ್ನ ಪರಂಪರೆಯ ರೂಪದಲ್ಲಿ ಇತ್ತೆಂಬುದು ಕೆಲವರ ಅಭಿಪ್ರಾಯ. ಉದ್ಭಟ ವಾಮನಾದಿಗಳು ಭಾಕ್ತ ವಾದಿಗಳೆಂದು ಅಭಿನವಗುಪ್ತರೇ ಹೇಳುತ್ತಾರೆ. ಆನಂದವರ್ಧನನೂ ಸಹ-'ಧ್ವನಿ' ಶಬ್ದವನ್ನು ಉಲ್ಲೇಖಿಸದಿದ್ದರೂ 'ಗುಣವೃತ್ತಿ'ಯಿಂದ ಕಾವ್ಯವ್ಯವಹಾರವನ್ನು ನಿರ್ವಹಿಸುತ್ತಿದ್ದವರೂ ಕೂಡ ಧ್ವನಿಮಾರ್ಗವನ್ನು ಮುಟ್ಟಿದಂತೆಯೇ ಆಗಿದೆ ಎನ್ನುತ್ತಾನೆ. ಭಾಮಹ ದಂಡಿ ಅವರೂ ಕೂಡ ಧ್ವನಿಯ ಸಾಮಾನ್ಯ ಪರಿಚಯವುಳ್ಳವರೇ ಆಗಿದ್ದರೆಂದೂ ಕೆಲವರು ಅಭಿಪ್ರಾಯಪಡುತ್ತಾರೆ. ಪ್ರತೀತಿ, ಗಮ್ಯಮಾನ ಅರ್ಥ, ಸುವ್ಯಂಜಿತ, ವ್ಯಕ್ತ ಇವೇ ಮೊದಲಾದ ಶಬ್ದಪ್ರಯೋಗಗಳನ್ನು ಅವರ ಕೆಲವು ಅಲಂಕಾರ ಲಕ್ಷಣಗಳಲ್ಲಿ ಕಾಣಬಹುದು. ಧ್ವನಿಯ ಪೂರ್ವಪಕ್ಷಗಳ ಪೈಕಿ ಅಲಂಕಾರಾಂತರ್ಭಾವವಾದ ಹಾಗೂ ಭಾಕ್ತವಾದಗಳು ಸೈದ್ಧಾಂತಿಕವಾಗಿ ಒಂದೇ ಆಗುತ್ತವೆ. ಭಾಮಹನು ವ್ಯಂಜನಾವೃತ್ತಿಯನ್ನು ವಿರೋಧಿಸುತ್ತಾನೆಂಬುದನ್ನು ಅವನ ಸ್ಫೋಟನಿರಾಕರಣೆಯಿಂದಲೇ ಊಹಿಸಬಹುದು. ಒಟ್ಟಿನಲ್ಲಿ ಭಾಮಹ ದಂಡಿಗಳು ಧ್ವನಿಯನ್ನು ಹೆಸರಿಸದಿದ್ದ ಮಾತ್ರಕ್ಕೆ ಆಗಿನ್ನೂ ಧ್ವನಿಯ ವ್ಯವಹಾರವೇ ಆರಂಭವಾಗಿರಲಿಲ್ಲವೆನ್ನಲು ಪ್ರಮಾಣ ಸಾಲದು. ಕನ್ನಡದ ಇಮ್ಮಡಿ ನಾಗವರ್ಮನೂ ಧ್ವನಿಯನ್ನು ಹೆಸರಿಸಿಲ್ಲವೆಂದು ಅವನ ಕಾಲದಲ್ಲಿ ಕರ್ನಾಟಕದ ವರೆಗೆ ಧ್ವನಿಯ ದನಿ ಕೇಳಿಬಂದಿರಲಿಲ್ಲವೆನ್ನಬಹುದೇ ?

ಆನಂದವರ್ಧನನ 'ಪರಂಪರಯಾ ಯಃ ಸಮಾಮ್ನಾತಪೂರ್ವಃ' ಎಂಬ ಮಾತನ್ನು ವ್ಯಾಖ್ಯಾನಿಸುತ್ತಾ ಲೋಚನಕಾರರು 'ಅವಿಚ್ಛಿನ್ನೇನ ಪ್ರವಾಹೇಣ ತೈರೇತದುಕ್ತಂ ವಿನಾಪಿ ವಿಶಿಷ್ಟಪುಸ್ತಕೇಷು ವಿನಿವೇಶಾತ್' ಎನ್ನುತ್ತಾರೆ. ಪರಂಪರೆ, ಅವಿಚ್ಛಿನ್ನ ಪ್ರವಾಹವೆಂಬೀ ಮಾತುಗಳಿಗೆ 'ತಲೆಮಾರುಗಳಿಂದ' ಎಂಬಂತಹ ಅರ್ಥವೂ ತೋರುತ್ತದೆ. ಧ್ವನ್ಯಾಲೋಕಕ್ಕೆ ಹಿಂದೆ ಎಲ್ಲೋ 'ಹತ್ತಾರು ವರ್ಷಗಳಿಂದ'

ಎಂಬಂತಹ ಅರ್ಥ ಇಲ್ಲಿ ಸಮಂಜಸವೆನಿಸದು. ಧ್ವನ್ಯಾಲೋಕಕ್ಕಿಂತ ಹಿಂದೆ ಧ್ವನಿಯ ವ್ಯವಹಾರವು ಕಾಶ್ಮೀರದ ಪಂಡಿತರಲ್ಲಿ ಮಾತ್ರ ಕೇಳಿ ಬರುತ್ತಿತ್ತೇ ಹೊರತು ಭಾರತದ ಇನ್ನಾವ ಭಾಗದಲ್ಲೂ ಕೇಳಿಬರುತ್ತಿರಲಿಲ್ಲವೆಂಬುದಕ್ಕೇನಾದರೂ ಪ್ರಮಾಣವಿದೆಯೇ? ಧ್ವನ್ಯಾಲೋಕಕ್ಕಿಂತ ಹಿಂದೆ 'ಧ್ವನಿ'ಯು ಗ್ರಂಥಗಳಲ್ಲೆಲ್ಲೂ ಉಲ್ಲಿಖಿತವಾಗಿರಲಿಲ್ಲೆಂಬ ಅಭಿನವಗುಪ್ತರ ಮಾತಿನಿಂದ ಕಾಶ್ಮೀರೇತರ ಭಾಗಗಳಲ್ಲಿ ಧ್ವನಿಯ ಸುಳಿವೇ ಇರಲಿಲ್ಲೆಂದು ಅರ್ಥವಾಗುವದಿಲ್ಲ. ಮಾರ್ಗಕಾರನ ಧ್ವನಿ ನಿರಾಕರಣೆಯು ಒಂದು ವೇಳೆ ಸಂಸ್ಕೃತ ದಲ್ಲಿ ಬಂದದ್ದಾದರೆ ಆಗ ಅದು ಅಭಿನವಗುಪ್ತರ ಕಿವಿಗೂ ಬೀಳುವ ಸಂಭವವಿತ್ತು. ಅಥವಾ ಕಿವಿಗೆ ಬಿದ್ದಿದ್ದರೂ ಇದು ಧ್ವನಿ ನಿರಾಕರಣೆಯಾದುದರಿಂದ ಉಲ್ಲೇಖಿಸು ತ್ತಿದ್ದರೋ ಇಲ್ಲವೋ ಹೇಳಲಾಗದು. ಯಾಕೆಂದರೆ, ಲೋಚನದ ಸಮಯಕ್ಕಾಗಲೇ ಧ್ವನಿ ನಿರಾಕರಣೆಗಳು ಗ್ರಂಥಸ್ಥವಾಗಿದ್ದರೂ, ಪ್ರಾಸಂಗಿಕವಾಗಿಯೂ ಕೂಡ ಲೋಚನ ದಲ್ಲಿ ಅವುಗಳನ್ನು ಉಲ್ಲೇಖಿಸುವ ಗೋಜಿಗೆ ಹೋಗಿಲ್ಲ. ಒಟ್ಟಿನಲ್ಲಿ ಅನುಲ್ಲೇಖವು ಅಜ್ಞಾನಕ್ಕೆ ಗಮಕವಲ್ಲವೆಂಬುದಿಲ್ಲಿ ಪ್ರಕೃತ.

ಧ್ವನಿಯ ಬಗೆಗೆ ತನಗೆ ದೊರೆತ ವಿಷಯಗಳನ್ನು ಸಂಗ್ರಹಿಸಿಯೇ–ಅಂದರೆ ಶಕ್ಯವಾದ ಪೂರ್ವಸಿದ್ಧತೆಯಿಂದಲೇ–ಧ್ವನಿ ನಿರಾಕರಣೆಗೆ ಕೈಹಾಕಿದ್ದಾನೆಯೇ ಹೊರತು ಆಕಸ್ಮಿಕವಾಗಿಯಲ್ಲ. ಯಾವುದೇ ಹಿನ್ನೆಲೆ, ಮುನ್ನೆಲೆ ಹಾಗೂ ಔಚಿತ್ಯವೂ ಇಲ್ಲದ ಧ್ವನ್ಯಲಂಕಾರದ ಅನ್ವೇಷಣೆಯು ಪ್ರಾಮಾದಿಕವೇ ಸರಿ. ಮಾರ್ಗಕಾರನ ಧ್ವನಿ ನಿರಾಕರಣೆಯಲ್ಲಿ ಬಂದಿರುದ 'ಅರ್ಥದೆ ದೂಷ್ಯಂ' ಎಂಬುದಕ್ಕೆ ಧ್ವನ್ಯಲಂಕಾರವಾದಿಗಳ ವ್ಯಾಖ್ಯಾನವು ಭಾರತೀಯ ಕಾವ್ಯಮೀಮಾಂಸೆಯ ಇತಿಹಾಸದಲ್ಲೇ ಹೊಸದು. 'ಕಮಲದೊಳನಿಮಿಷಯುಗಂ' ಎಂಬಂತಹ ಕಾವ್ಯದ ವಾಚ್ಯಾರ್ಥವು ಅಸಂಗತ ವೆಂದಾಗಲಿ, ಅದು ದೂಷ್ಯವೆಂದಾಗಲಿ, ಇಪ್ಪತ್ತನೇ ಶತಮಾನಕ್ಕೆ ಹಿಂದಿನ ಆಲಂಕಾರಿಕ ರಾರೂ ಹೇಳಿಲ್ಲವೆಂಬುದು ನನ್ನ ವಿಶ್ವಾಸ. 'ಕಮಲದೊಳನಿಮಿಷಯುಗಂ' ಎಂಬಂತಹ ಕಾವ್ಯಗಳಲ್ಲಿನ 'ಕಮಲ' 'ಅನಿಮಿಷ' ಮುಂತಾದ ಶಬ್ದಗಳು ಉದ್ದಿಷ್ಟವಾದ 'ಮುಖ' 'ಕಣ್ಣುಗಳು' ಎಂಬಂತಹ ಅರ್ಥಗಳಿಗೆ ವಾಚಕಗಳಲ್ಲವೆಂಬುದಿಷ್ಟು ಆಲಂಕಾರಿಕ ಸಮಯ. ವಾಚಕವಲ್ಲವೆಂದ ಮಾತ್ರಕ್ಕೆ ಕಾವ್ಯವೇ ದೂಷ್ಯವೆಂದರ್ಥವಲ್ಲ. ಇಂತಹ ಸ್ಥಳಗಳಲ್ಲಿ ಲಕ್ಷಣಾವೃತ್ತಿಯಿಂದ ಉದ್ದಿಷ್ಟಾರ್ಥಪ್ರತೀತಿಯೆಂಬುದು ಎಲ್ಲ ಪ್ರಸ್ಥಾನದವರಿಗೂ ಸಮ್ಮತವಾದ ವಿಚಾರ. 'ಕಮಲದೊಳನಿಮಿಷಯುಗಂ' ಎಂಬಂತಹ ಸ್ಥಳಗಳಲ್ಲಿ 'ಮುಖದಲ್ಲಿ ನೇತ್ರಗಳು' ಎಂಬಂತಹ ಅರ್ಥಪ್ರತೀತಿಗಾಗಿ ಮಾರ್ಗಕಾರನು ಹಾಗಿರಲಿ, ಆನಂದವರ್ಧನನೂ ಕೂಡ 'ಧ್ವನಿಯೆಂಬ ವ್ಯಾಪಾರಾಂತರ' ವನ್ನು ಅಂಗೀಕರಿಸುವದಿಲ್ಲ. ವಾಚ್ಯವಾದ ಅಲಂಕಾರದಿಂದ ವಸ್ತು, ಅಲಂಕಾರ, ಇಲ್ಲವೆ ರಸಾದಿಗಳು ಪ್ರತೀತವಾಗುವ ಸ್ಥಳದ ಮಾತು ಬೇರೆ.

'ಕಮಲದೊಳನಿಮಿಷಯುಗಂ' ಎಂಬಲ್ಲಿ 'ನೇಯ' ಅಥವಾ 'ವ್ಯರ್ಥದೋಷ'ಗಳ ಶಂಕೆಗೆ ಅವಕಾಶವಿಲ್ಲ. ಪ್ರಯುಕ್ತವಾಗಿರುವ ಪದಗಳಿಂದ ನಿರಾಕಾಂಕ್ಷವಾದ ಶಾಬ್ದ-

ಬೋಧ ನಿರ್ವಾಹವಾಗದೇ ಇದ್ದಾಗ 'ಉಚಿತ' ಪದವೊಂದನ್ನು ಅಧ್ಯಾಹಾರ ಮಾಡಿಕೊಳ್ಳಬೇಕಾಗಿ ಬಂದರೆ, ಅಂತಹ ಸ್ಥಳದಲ್ಲಿ 'ನೇಯ' ದೋಷವನ್ನು ಹೇಳುತ್ತಾರೆ. 'ಕಮಲದೊಳನಿಮಿಷಯುಗಂ' ಎಂಬಲ್ಲಿ ಯಾವ ಅಧ್ಯಾಹಾರವೂ ಇಲ್ಲದೇ ಸಹೃದಯರಿಗೆ ನಿರಾಕಾಂಕ್ಷಶಾಬ್ದಬೋಧವುಂಟಾಗುತ್ತಿದೆಯಾದ್ದರಿಂದ ಇದು 'ನೇಯ'ಕ್ಕೆ ಲಕ್ಷ್ಯವಲ್ಲ. 'ವ್ಯರ್ಥದೋಷ' ಸ್ಥಳದಲ್ಲಿ ಒಂದಕ್ಕೊಂದು ಸಂಬಂಧಿಸಿದಂತೆ ಎರಡು ವಾಕ್ಯಗಳಿದ್ದು. ಅವುಗಳ ಅರ್ಥಗಳಲ್ಲಿ ಪೂರ್ವಾಪರ ವಿರೋಧ ಕಂಡುಬರುವಂತಿದ್ದರೆ ಅದು 'ವ್ಯರ್ಥ'ವೆನಿಸುತ್ತದೆ. ಇಲ್ಲಿರುವದು ಒಂದೇ ವಾಕ್ಯವಾದುದರಿಂದ 'ವ್ಯರ್ಥ'ಕ್ಕೂ ಇದು ಲಕ್ಷ್ಯವಲ್ಲ. ವಿರೋಧವ್ಯಂಜಕಪದವಿಲ್ಲದ್ದರಿಂದ 'ವಿರೋಧಾಭಾಸ'ದ ಶಂಕೆಯೂ ಹೊಂದುವದಿಲ್ಲ. 'ಚೋದ್ಯಂ' ಎಂಬುದು ಮುಖ್ಯವಾಗಿ ಆಶ್ಚರ್ಯಸೂಚಕವೇ ಹೊರತು ವಿರೋಧಸೂಚಕವಲ್ಲ. 'ಶಬ್ದಶಕ್ತಿಮೂಲಧ್ವನಿ' ಶಂಕೆಗಿಲ್ಲಿ ಅವಕಾಶವಿಲ್ಲ. ಶ್ಲೇಷಾರ್ಥಕ ಶಬ್ದ ಪ್ರಯೋಗವಿದ್ದಲ್ಲಿ ಮಾತ್ರ 'ಶಬ್ದಶಕ್ತಿಮೂಲಧ್ವನಿ'ಗೆ ಅವಕಾಶವೆಂದು ಹೇಳುತ್ತಾರೆ. ಕಮಲ ಶಬ್ದಕ್ಕೆ 'ಮುಖ'ವೆಂಬರ್ಥವು ಶ್ಲೇಷೆಯಿಂದ ಲಭ್ಯವಾದುದಲ್ಲ. 'ಅನಿಮಿಷ' ಶಬ್ದದ ಎರಡು ಅರ್ಥಗಳ ಪೈಕಿ 'ದೇವತೆ' ಎಂಬರ್ಥವು ಪ್ರಕೃತಕ್ಕೆ ಅನ್ವಯಿಸುವದೇ ಇಲ್ಲ. 'ಅನಿಮಿಷ' ಎಂಬುದು ಒಂದು ನಾನಾರ್ಥಕ ಶಬ್ದ. 'ಸುರಮತ್ಸ್ಯಾ ಅನಿಮಿಷೌ'–ಎಂದು ಕೋಶ. ಶಬ್ದಗಳ ಸನ್ನಿವೇಶವಿಶೇಷದಿಂದುಂಟಾಗುವ ನಾನಾರ್ಥಕ ಪ್ರತೀತಿಯ ಸ್ಥಳದಲ್ಲಿ 'ಶ್ಲೇಷ'ವೆನ್ನುತ್ತಾರೆ. 'ಕಮಲದೊಳನಿಮಿಷಯುಗಂ' ಎಂಬಲ್ಲಿ ಈ ಬಗೆಯ ವಿಶೇಷವೇನಿಲ್ಲದ್ದರಿಂದ ಇಲ್ಲಿ 'ಶ್ಲೇಷಶಂಕೆ' ಯುಕ್ತವಲ್ಲ. ಕಾರಣ, ಧ್ವನ್ಯಲಂಕಾರದ ಬೆಂಬಲವಾಗಿ ತಲೆದೋರಿದ ವಿಕಲ್ಪಗಳು ಮಾರ್ಗಕಾರನ ಈ ಪದ್ಯಕ್ಕೆ ಅನ್ವಯಿಸುವುದಿಲ್ಲೆಂಬುದು ಖಚಿತ.*

ಭಾರತೀಯ ಕಾವ್ಯಮೀಮಾಂಸೆಯ ಇತಿಹಾಸದಲ್ಲಿ ಕವಿರಾಜಮಾರ್ಗಕಾರನ ಹೆಸರು ಧ್ವನಿವಿರೋಧಿಗಳ ಸಾಲಿನಲ್ಲಿ ಮೊದಲು ಬರಬೇಕು. ಕನ್ನಡೇತರ ಭಾಷಾವಿದ್ವಾಂಸರು ಮಾರ್ಗಕಾರನ ಈ ಧ್ವನಿನಿರಾಕರಣೆಯನ್ನು ಇನ್ನೂ ಅಷ್ಟಾಗಿ ಗಮನಿಸಿಲ್ಲ. ಶ್ರೀವಿಜಯನ ಧ್ವನಿನಿರಾಕರಣೆಗೆ ಹಿನ್ನೆಲೆಗಳು ಎರಡು : ಭಾಮಹನ ಸ್ಫೋಟನಿರಾಕರಣೆ ಒಂದು, ವಾಕ್ಯಪದೀಯದ— 'ನ ಸೋಽಸ್ತಿ ಪ್ರತ್ಯಯೋ

---

* 'ಇಲ್ಲಿ ಕೊಟ್ಟಿರುವ ಉದಾಹರಣೆಯಲ್ಲಿ – ಕಮಲದೊಳನಿಮಿಷಯುಗಂ ಮೇಲುನೋಟಕ್ಕೆ 'ಮೀನು' ಶಬ್ದದ ವಾಚ್ಯಾರ್ಥ ದೋಷಯುಕ್ತವೆಂಬಂತೆಯೇ ಇದೆ—ಮುಖದಲ್ಲಿ ಮೀನುಗಳೆರಡು ಸೊಗಸಾಗಿ ಕಾಣುವದು ಅಸಂಭವವಾದ್ದರಿಂದ.'

—ಕ. ರಾ. ಮಾರ್ಗದ ಹೊಸಗನ್ನಡ ಗದ್ಯಾನುವಾದ. ಪುಟ 158.

'ಸಂಪಾತಾದಾಯಾತಂ' ಎಂಬಂತಿರುವ ಈ ವಿವರಣೆಯು ಉದ್ದೇಶಪೂರ್ವಕವಲ್ಲ. ಆಕಸ್ಮಿಕವೆಂದು ಭಾವಿಸುತ್ತೇನೆ. 'ಮುಖದಲ್ಲಿ ಮೀನು' ಎಂದು ಮಾರ್ಗಕಾರ ಹೇಳುತ್ತಿಲ್ಲವಲ್ಲ! 'ಕಮಲ' ಶಬ್ದಕ್ಕೆ 'ಮುಖ'ವೆಂಬರ್ಥ ಪ್ರತೀತವಾಗುವಾಗ 'ಅನಿಮಿಷ' ಪದಕ್ಕೂ 'ಕಣ್ಣು' ಎಂಬರ್ಥ ಪ್ರತೀತವಾಗುವದರಿಂದ ಮೇಲುನೋಟದ ದೋಷಕ್ಕೆಡೆಯೆಲ್ಲಿದೆ?

—ಲೇಖಕ

ಲೋಕೇ...' ಎಂಬ ವಾಕ್ಯ ಇನ್ನೊಂದು. ಮೀಮಾಂಸಕರ ಹಾಗೂ ತಾರ್ಕಿಕರ ಶಾಬ್ದಬೋಧಪ್ರಕ್ರಿಯೆಗಳೂ ಸಹ ಅವನಿಗಿಲ್ಲಿ ಪ್ರೇರಣೆಯನ್ನೊದಗಿಸಿರಬಹುದು.

ಧ್ವನಿಯು ಅಲಂಕಾರಗಳಲ್ಲೇ ಅಂತರ್ಗತವೆಂಬ ಮಾರ್ಗಕಾರನ ಅಭಿಪ್ರಾಯವು ರತ್ನಶ್ರೀಜ್ಞಾನನಲ್ಲೂ ಕಂಡುಬರುತ್ತದೆ. ರತ್ನಶ್ರೀಜ್ಞಾನನು ರಾಷ್ಟ್ರಕೂಟ 'ತುಂಗ'ನ ಆಶ್ರಯದಲ್ಲಿದ್ದನಂತೆ.

'ಧ್ವನಿಯೆಂಬುದು ಅಲಂಕಾರ. ಅಲಂಕಾರವು ಶಬ್ದದಿಂದ ಪ್ರತೀತವಾಗುತ್ತದೆಯೇ ಹೊರತು ಅರ್ಥದಿಂದಲೂ ಅಲ್ಲ. ಅರ್ಥದಿಂದಲೂ ಅರ್ಥಾಂತರ ಪ್ರತೀತವಾಗುತ್ತದೆಂಬ ಮತ ದೂಷ್ಯ. ಧ್ವನಿಯೆಂಬುದು ಅಲಂಕಾರಕ್ಕಿಂತ ಬೇರೆಯಲ್ಲೆಂಬುದಕ್ಕೆ ಇದೊಂದು ಉದಾಹರಣೆ :— 'ಕಮಲದೊಳನಿಮಿಷಯುಗಮೊಪ್ಪಿ ತೋರ್ಪು-ದಿಂತಿದು ಚೋದ್ಯಂ' ಎಂಬೀ ಮಾರ್ಗಕಾರನ ಉದಾಹರಣೆಯು ಅತಿಶಯೋಕ್ತಿಯೇ ಹೊರತು ಧ್ವನ್ಯಲಂಕಾರವಲ್ಲ.

ಟಿಪ್ಪಣಿ :

ಧ್ವನಿಲಕ್ಷಣಕಾರಿಕೆ :—

> ಯತ್ರಾರ್ಥಃ ಶಬ್ದೋ ವಾ ತಮರ್ಥಮುಪಸರ್ಜನೀಕೃತಸ್ವಾರ್ಥೌ ।
> ವ್ಯಂಕ್ತಃ, ಕಾವ್ಯವಿಶೇಷಃ ಸ ಧ್ವನಿರಿತಿ ಸೂರಿಭಿಃ ಕಥಿತಃ ॥

—ಧ್ವನ್ಯಾಲೋಕಃ ೧–೧೩

ಕವಿರಾಜಮಾರ್ಗದ ಧ್ವನಿನಿರಾಕರಣೆ :—

> ಧ್ವನಿಯೆಂಬುದಳಂಕಾರಂ
> ಧ್ವನಿಯಿಸುಗುಂ ಶಬ್ದದಿಂದಮರ್ಥದೆ ದೂಷ್ಯಂ ।
> ನೆನೆವುದಿದನಿಂತು ಕಮಲದೊ-
> ಳನಿಮಿಷಯುಗಮೊಪ್ಪಿ ತೋರ್ಪುದಿಂತಿದು ಚೋದ್ಯಂ ॥

—ಕವಿರಾಜಮಾರ್ಗ ೩–೨೦೮

ಧ್ವನಿಲಕ್ಷಣಘಟಕವಾಗಿರುವ ಶಬ್ದ, ಅರ್ಥ ಹಾಗೂ ಧ್ವನಿಯೆಂಬೀ ಮೂರು ಪದಗಳನ್ನೇ ಕುರಿತಂತಿದೆ ಮಾರ್ಗಕಾರನ ಧ್ವನಿಕಂದ. ಲಕ್ಷಣದಲ್ಲಿರುವ 'ವ್ಯಂಕ್ತಃ' ಎಂಬುದಕ್ಕೆ ಬದಲಾಗಿ ಮಾರ್ಗಕಾರನು 'ಧ್ವನಿಯಿಸುಗುಂ' ಪದವನ್ನು ಬಳಸಿರುವುದನ್ನೂ ಗಮನಿಸಬೇಕು. 'ನೆನೆ' ಧಾತುವಂತೂ ಜ್ಞಾತಾರ್ಥಜ್ಞಾಪಕವೆಂದು ಬೇರೆ ಹೇಳಬೇಕಾದ್ದಿಲ್ಲ.

ವಾಕ್ಯಪದೀಯದ ವಾಕ್ಯ :—

> ನ ಸೋಽಸ್ತಿ ಪ್ರತ್ಯಯೋ ಲೋಕೇ ಯಃ ಶಬ್ದಾನುಗಮಾದೃತೇ ।
> ಅನುವಿದ್ಧಮಿವ ಜ್ಞಾನಂ ಸರ್ವಂ ಶಬ್ದೇನ ಭಾಸತೇ ॥

—ವಾಕ್ಯಪದೀಯ, ೧–೧೨೪

ಭಾಮಹನ ಸ್ಫೋಟನಿರಾಕರಣೆ :—

ಶಪಥೈರಪಿ ಚಾದೇಯಂ ವಚೋ ನ ಸ್ಫೋಟವಾದಿನಾಂ ।
ನಭಃಕುಸುಮಮಸ್ತೀತಿ ಶ್ರದ್ಧಧ್ಯಾತ್ ಕಃ ಸಚೇತನಃ ॥

—ಕಾವ್ಯಾಲಂಕಾರ, ೬–೧೨

ಇಯಂತಃ ಈದೃಶಾಃ ವರ್ಣಾಃ ಈದೃಗರ್ಥಾಭಿಧಾಯಿನಃ ।
ವ್ಯವಹಾರಾಯ ಲೋಕಸ್ಯ ಪ್ರಾಗಿತ್ಥಂ ಸಮಯಃ ಕೃತಃ ॥

ಕಾವ್ಯಾಲಂಕಾರ, ೬–೧೩

ಜಯಂತ ಭಟ್ಟನ ಧ್ವನಿನಿರಾಕರಣೆ (ಕ್ರಿ. ಶ. ಸು. 900) :—

ಏತೇನ ಶಬ್ದಸಾಮರ್ಥ್ಯಮಹಿಮ್ನಾ ಸೋಽಪಿ ವಾರಿತಃ ।
ಯಮನ್ಯಃ ಪಂಡಿತಂಮನ್ಯಃ ಪ್ರಪೇದೇ ಕಂಚನ ಧ್ವನಿಂ ॥
ವಿಧೇರ್ನಿಷೇಧಾವಗತಿಃ ವಿಧಿಬುದ್ಧಿರ್ನಿಷೇಧತಃ ।

ಯಥಾ

ಭಮ ಧಮ್ಮಿಅ ವೀಸತ್ಥೋ, ಮಾ ಸ್ಮ ಪಾಂಥ ಗೃಹಂ ವಿಶ ।
ಮಾನಾಂತರಪರಿಚ್ಛೇದ್ಯವಸ್ತುರೂಪೋಪದೇಶಿನಾಂ ॥
ಶಬ್ದಾನಾಮೇವ ಸಾಮರ್ಥ್ಯಂ ತತ್ರ ತತ್ರ ತಥಾವಿಧಂ ।
ಅಥವಾ ನೇದೃಶೀ ಚರ್ಚಾ ಕವಿಭಿಃ ಸಹ ಶೋಭತೇ ।
ವಿದ್ವಾಂಸೋಽಪಿ ವಿಮುಹ್ಯಂತಿ ವಾಕ್ಯಾರ್ಥಗಹನೇಽಧ್ವನಿ ॥

—ನ್ಯಾಯಮಂಜರೀ, ಪ್ರಥಮಾಹ್ನಿಕ.

ರತ್ನಶ್ರೀಜ್ಞಾನ :—(ಕ್ರಿ. ಶ. ಸು. 930)

ಸಮಾಸೋಕ್ತಿ...ತಸ್ಮಾದಿಯಂ ಗುಣೀಭೂತಾ ಅರ್ಥಾಂತರಂ ಸ್ಫುಟಯತಿ. ನ ತು ಸ್ವಾರ್ಥ ತಂತ್ರಾ । ಇಯಮೇವ ಚಾನ್ಯೈಃ ಧ್ವನಿರಿತಿ ವ್ಯವಹ್ರಿಯತೇ । ಯದಾಹುಃ—

ಯತ್ರಾರ್ಥಃ ಶಬ್ದೋ ವಾ ತಮರ್ಥಮುಪಸರ್ಜನೀಕೃತಸ್ವಾರ್ಥೌ ।
ವ್ಯಂಕ್ತಃ ಕಾವ್ಯವಿಶೇಷಃ ಸ ಧ್ವನಿರಿತಿ ಸೂರಿಭಿಃ ಕಥಿತಃ ॥ ಇತಿ

[ಧ್ವನಿಕಾರಿಕಾಯಾಂ, ೧–೧೩]

—ಕಾವ್ಯಲಕ್ಷಣಂ, ಪುಟ ೧೩೧

ಧ್ವನ್ಯಾಲೋಕಕ್ಕಿಂತ ಹಿಂದೆ ಕಾಶ್ಮೀರದ ವಿದ್ವಾಂಸರಲ್ಲಿ ಮಾತ್ರ ಧ್ವನಿಯ ವ್ಯವಹಾರವಿತ್ತೆಂದು ಖಚಿತವಾಗಿ ತಿಳಿಸುವ ಪ್ರಬಲ ಪ್ರಮಾಣವು ಸಿಕ್ಕಿದಾಗ ಕವಿರಾಜ ಮಾರ್ಗದ ಧ್ವನಿಕಂದವು ಪ್ರಕ್ಷಿಪ್ತವೆಂದು ಸಿದ್ಧವಾಗಿ ಆಗ ಇದು ತನ್ನ ಮಹತ್ವವನ್ನು ಕಳೆದುಕೊಳ್ಳುತ್ತದೆ. ಆಗಲೂ ಕೂಡ ಪದ್ಯದ ಅರ್ಥದಲ್ಲಿ ಯಾವ ಬದಲಾವಣೆಯೂ ಆಗುವದಿಲ್ಲ. ತ್ರಿಕಾಲದಲ್ಲೂ ಈ ಪದ್ಯದ ಅರ್ಥ ಧ್ವನಿನಿರಾಕರಣೆಯೇ ಸರಿ ಯೆಂಬುದು ಈ ಲೇಖಕನ ನಿಲುವು.

ಅಭಿನವಗುಪ್ತರು ಲೋಚನದಲ್ಲಿ ಧ್ವನ್ಯಾಲೋಕದ ನಂತರ ಕೇಳಿಬಂದ ಧ್ವನಿಯ ವಿರೋಧ, ವಿರೋಧಿಗಳ ಬಗೆಗೆ ಹೇಗೆ ಉದಾಸೀನರೋ, ಹಾಗೆಯೇ ಭಾಮಹ

ದಂಡಿಗಳು ಧ್ವನಿಯ ಬಗೆಗೆ ಉದಾಸೀನರಿರಬಹುದು. ಲಕ್ಷಣಾ, ಗೌಣೀ ವೃತ್ತಿಗಳಿಂದಲೇ ಕಾವ್ಯಾರ್ಥಪ್ರತೀತಿ ಸಿದ್ಧಿಸುವದೆಂಬುದು ಅವರ ಅಭಿಮತವಿರಬಹುದು. ಭಟ್ಟೋದ್ಭಟ, ವಾಮನ ಮೊದಲಾದವರು ಭಾಕ್ತವಾದಿಗಳೆಂದು ಅಭಿನವಗುಪ್ತರು ಹೇಳುತ್ತಾರೆ.

ಧ್ವನ್ಯಾಲೋಕಕ್ಕೆ ಮುಂಚೆ ಧ್ವನಿಯು ಸಮಾಮ್ನಾತವಾಗಿತ್ತಾದರೂ ಧ್ವನಿಯನ್ನು ಕುರಿತು ಗ್ರಂಥರಚನೆಯಾಗಿರಲಿಲ್ಲೆಂದು ಅಭಿನವಗುಪ್ತರ ವಚನವಿದೆಯೇ ಹೊರತು ಧ್ವನಿನಿರಾಕರಣೆಯು ಗ್ರಂಥಸ್ಥವಾಗಿರಲಿಲ್ಲೆಂದು ಅವರ ವಚನವಿಲ್ಲ. ಧ್ವನಿಯನ್ನು ಕುರಿತು ಗ್ರಂಥರಚನೆಯಾಗಿಲ್ಲವೆಂದಮೇಲೆ ಅದರ ನಿರಾಕರಣೆಯೂ ಗ್ರಂಥಸ್ಥವಾಗಿರಲಿಕ್ಕಿಲ್ಲೆಂಬುದು ಕೇವಲ ಊಹೆ. ಧ್ವನ್ಯಾಲೋಕದ ಸಮಕಾಲದಲ್ಲೇ ವಿರೋಧವೂ ವ್ಯವಹಾರದಲ್ಲಿತ್ತು, ಹಾಗೂ ಅದು ಗ್ರಂಥಸ್ಥವೂ ಆಯಿತೆಂಬುದಕ್ಕೆ ಮಾರ್ಗಕಾರನ ಧ್ವನಿಕಂದವೇ ಪ್ರಮಾಣ.

ಧ್ವನಿಕಂದದ ಸಂಸ್ಕೃತಚ್ಛಾಯೆ :—

> ಧ್ವನಿರಿತಿ ತ್ವಲಂಕಾರಃ
> ಧ್ವನ್ಯತೇ ಶಬ್ದೇನ, ಅರ್ಥೇನಾಪೀತಿ ತು ದೂಷ್ಯಂ ।
> ಸ್ಮರತೇದಮಿತ್ಥಂ
> ಕಮಲೇಽನಿಮಿಷಯುಗಂ ಕಾಶತೇತರಾಮಿತೀದಂ ಚೋದ್ಯಂ ॥

ವಸ್ತು ಸಂಗ್ರಹ

ಕೈವಾರ ಸಮ್ಮೇಳನಾಧ್ಯಕ್ಷರ ಭಾಷಣದ ಪ್ರಸ್ತುತ ಭಾಗಗಳು

ಕೈವಾರಕ್ಕೆ ತನ್ನದೇ ಆದ ಸ್ಥಳಪುರಾಣವಿದೆಯೆಂದು ಕೇಳಿದ್ದೇನೆ. ಒಂದು ಜನಾಂಗ ತಾನು ನೆಚ್ಚಿರುವ ಹಿರಿಯ ಮೌಲ್ಯಗಳು ಮೂರ್ತಿವೆತ್ತಂತಿರುವ ಯಾವ ಮಹಾವ್ಯಕ್ತಿಗಳನ್ನು ಕಲ್ಪಿಸಿಕೊಂಡು ಅವರಿಗೆ ಮೆಚ್ಚಿಗೆಯ ಕಾಣಿಕೆಯನ್ನು ಸಲ್ಲಿಸಿದೆಯೋ, ಆ ವ್ಯಕ್ತಿಗಳಿಗೂ ತನಗೂ ಸಂಬಂಧವನ್ನು ಕಲ್ಪಿಸಿಕೊಳ್ಳುವುದು ಮಾನವ ಸ್ವಭಾವಕ್ಕೆ ಬಂದದ್ದು. ಆದ್ದರಿಂದಲೇ ನಮ್ಮ ರಾಮಾಯಣ–ಮಹಾಭಾರತಗಳಲ್ಲಿನ ಮಹಾವ್ಯಕ್ತಿಗಳ ಪಾದಸ್ಪರ್ಶದಿಂದ ನಮ್ಮ ಊರು ಪವಿತ್ರವಾಗಿದೆ ಎಂದುಕೊಳ್ಳುತ್ತೇವೆ. ಕೈವಾರವೂ ಈ ಬಗೆಯ ಭಾವಸಂಪತ್ತನ್ನು ಪಡೆದಿದೆ. ಇಲ್ಲಿಯ ಸ್ಥಳಪುರಾಣ ಕೃತಯುಗದ ಜಯವಿಜಯರ ಕಥೆಯಿಂದ ಹೊರಟು ತ್ರೇತಾಯುಗದ ಸೀತಾರಾಮಲಕ್ಷ್ಮಣರ ದರ್ಶನ ಪಡೆದು, ದ್ವಾಪರದ ಭೀಮ–ಹಿಡಿಂಬರ ಕಾಳಗದ ಮೇಲೆ ದೃಷ್ಟಿಯನ್ನು ಬೀಸಿ, ಕಲಿಯುಗದ ಶ್ರೀ ನಾರೇಯಣ ಯತೀಂದ್ರರವರೆಗೂ ಬಂದಿದೆ. ಪುರಾಣೇತಿಹಾಸಗಳನ್ನು ಬಿಟ್ಟು ಇಂದಿನ ಕಾಲಕ್ಕೆ ಹತ್ತಿರ ಬಂದಮೇಲೂ ಕೈವಾರ ತನ್ನ ವೈಶಿಷ್ಟ್ಯವನ್ನು ಉಳಿಸಿಕೊಂಡಿದೆ. ಶ್ರೀ ನಾರೇಯಣ ಯತೀಂದ್ರರು ಆ ವೈಶಿಷ್ಟ್ಯವನ್ನು ಒದಗಿಸಿಕೊಟ್ಟಿದ್ದಾರೆ. ಅವರು ಭವಿಷ್ಯದರ್ಶನ ಶಕ್ತಿಯುಳ್ಳ ಕಾಲಜ್ಞಾನಿಗಳು ; ದೈವಾಂಶಸಂಭೂತರು. ತಮ್ಮ ಮಹಿಮೆಯಿಂದಾಗಿ ಸಾಮಾನ್ಯ ಮಾನವರಿಗಿಂತ ಎಷ್ಟೋ ಎತ್ತರದಲ್ಲಿದ್ದರೂ ಅವರು ಇಲ್ಲಿಯವರಿಗೆ ಹತ್ತಿರವೇ. ಅವರು ಅತ್ತ ಯತೀಂದ್ರರು, ಇತ್ತ ಕೈವಾರದ ತಾತಯ್ಯನವರು. ಇದೆಲ್ಲ ಸಂತೋಷದಿಂದ ನೆನೆಯಬೇಕಾದ ವಿಷಯ. ಬಹುಶಃ ನಮ್ಮ ದೇಶ ಹಿಂದಿನದನ್ನು ಸ್ಮರಿಸಿ ಹೆಮ್ಮೆಪಡುತ್ತ ಕುಳಿತದ್ದು ಹೆಚ್ಚಾಯಿತು. ಶ್ರೀ ನಾರೇಯಣ ಯತೀಂದ್ರರು ಹಿಂದಿನ ಆಧ್ಯಾತ್ಮಿಕ ಸಂಪತ್ತನ್ನು ಇಂದಿನದಾಗಿ ಮಾಡಿದ್ದಾರೆ. ಆ ಗತಕಾಲದ ವೀರರ, ಮೇಧಾವಿಗಳ, ಪುಣ್ಯಪುರುಷರ ನಾಡಿನಲ್ಲಿ ನಾವು ಹುಟ್ಟಿದೆವೆಂದು ಹೇಳಿಕೊಳ್ಳುವುದು ಸ್ವಾಭಾವಿಕ. ಆದರೆ ಅವರ ಕೀರ್ತಿಯನ್ನು ಮುಂದುವರಿಸುವಂಥ, ಸಾಹಸದ ಎಲ್ಲೆಗಳನ್ನು ತಳ್ಳಿಕೊಂಡು ಮುಂದೆ ಸಾಗುವಂಥ ಬದುಕನ್ನು ಬಾಳುವುದೇ ನಾವು ಪೂರ್ವಿಕರಿಗೆ ಸಲ್ಲಿಸಬೇಕಾದ ಕಾಣಿಕೆ : ಅವರನ್ನು ಅನುಕರಿಸುತ್ತ ಅವರ ಸತ್ವಹೀನ ಪ್ರತಿಕೃತಿಗಳಂತೆ ಬಾಳುವುದಲ್ಲ.

ಈ ಸತ್ಯ ಕನ್ನಡ ಸಾಹಿತ್ಯ ಪ್ರಪಂಚಕ್ಕೂ ಅನ್ವಯಿಸುತ್ತದೆಂಬುದನ್ನು ಮನಗಂಡು ಅದರ ಬೆಳಕಿನಲ್ಲಿ ತಮ್ಮ ಜೀವನವನ್ನು ರೂಪಿಸಿಕೊಂಡವರು—ನನ್ನ ಪೂಜ್ಯ ಗುರುಗಳಾದ ಬಿ. ಎಂ. ಶ್ರೀಕಂಠಯ್ಯನವರು. ಅವರ ಪ್ರಭಾವದಿಂದಾಗಿ, ಅವರ ಸಂತತ ಪ್ರಚಾರದಿಂದಾಗಿ, ಅವರು ಸ್ವತಃ ನಡೆಸಿದ ಪ್ರಯೋಗಗಳಿಂದಾಗಿ

ಕನ್ನಡ ಸಾಹಿತ್ಯದಲ್ಲಿ ಹೊಸ ಯುಗವೊಂದು ಆರಂಭವಾಯಿತು. ಅದು ಹಿಂದಿನ ಯಾವ ಯುಗವೂ ಇಡದಷ್ಟು ದೊಡ್ಡ ದಾಪನ್ನು ಇಟ್ಟು ಅತ್ಯಂತ ಪರಿಣಾಮಕಾರಿಯಾದ ಪ್ರಗತಿಯನ್ನು ಸಾಧಿಸಿದೆ. ಶತಮಾನಗಳ ಕಾಲದಿಂದ ಬಂದ ಸಂಪ್ರದಾಯಗಳ ಪ್ರಯೋಜನವನ್ನು ಬಿಟ್ಟುಕೊಡದೆ, ಆದರೆ ಆ ಸಂಪ್ರದಾಯದ ಎಲ್ಲೆಕಟ್ಟುಗಳಲ್ಲೇ ಉಳಿದು 'ಬಂಧನವೇ ಒಂದು ಸೌಖ್ಯ' ಎಂದುಕೊಳ್ಳುವ ಮನೋವೃತ್ತಿಗೆ ಬಲಿಬೀಳದೆ ಹೊಸಯೌವನದ ಉತ್ಸಾಹದಿಂದ ಮುನ್ನುಗ್ಗಿದ ಯುಗ, ನಮ್ಮದು. ಅದರ ಪ್ರವರ್ತಕರಾದ ಬಿ. ಎಂ. ಶ್ರೀಯವರು ಬದುಕಿದ್ದರೆ ಈ ವರ್ಷದ ಆದಿಯಲ್ಲಿ ಅವರಿಗೆ ನೂರು ವರ್ಷ ತುಂಬುತ್ತಿತ್ತು. ಕನ್ನಡನಾಡು ಬಿ. ಎಂ. ಶ್ರೀಯವರ ಶತಮಾನೋತ್ಸವವನ್ನು ಆಚರಿಸುತ್ತಿರುವ ವರ್ಷದಲ್ಲೇ ಇಲ್ಲಿ ಈ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ. ಕೈವಾರದ ವೈಶಿಷ್ಟ್ಯಗಳಲ್ಲಿ ಇದೂ ಒಂದು.

ಶ್ರೀಯವರು ನಮ್ಮ ಹಿಂದಿನ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿ ಅದರ ರಸವನ್ನು ಆಸ್ವಾದಿಸಿದ್ದರು ; ಆದರೆ ಅದರ ಕುಂದುಕೊರತೆಗಳನ್ನು ಸ್ಪಷ್ಟವಾದ ಮಾತಿನಲ್ಲಿ ಟೀಕಿಸಿಯೂ ಟೀಕಿಸಿದರು. 'ಇದು ನಮ್ಮದು' ಎಂಬ ಅಭಿಮಾನ ಅವರ ದೃಷ್ಟಿಯನ್ನು ಮಸಕು ಮಾಡಲಿಲ್ಲ. ಇಂಗ್ಲಿಷ್ ಕವನಗಳ ಲಯಸೌಂದರ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ತಮ್ಮ ಕೃತಿಗಳಲ್ಲಿ ಕನ್ನಡದ ಜಾಯಮಾನಕ್ಕೆ ಹೊಂದುವ ಹೊಸ ಲಯಗಳನ್ನೂ ಬಾಗುಬಳುಕುಗಳನ್ನೂ ತಂದದ್ದಲ್ಲದೆ ಸ್ವಾತಂತ್ರ್ಯದ ಹಾದಿಯಲ್ಲಿ ಮುಂದುವರಿಯುವಂತೆ ಇತರರಿಗೆ ಮಾರ್ಗದರ್ಶಕರಾದರು. ಉನ್ನತಮಟ್ಟದ ಇಂಗ್ಲಿಷ್ ಸಾಹಿತ್ಯದಲ್ಲಿ ಕಾಣುವ ಸರಳತೆ ಗಾಂಭೀರ್ಯಗಳನ್ನು ಮೆಚ್ಚಿದ್ದ ಅವರು ನಮ್ಮ ಹಳೆಯ ಸಾಹಿತ್ಯದಲ್ಲಿ ಕೆಲವು ವೇಳೆ ಕಂಡುಬರುವ ಸಂಸ್ಕೃತ ತುಂಬಿದ ಆಡಂಬರದ ಶೈಲಿ, ಶ್ಲೇಷೆ, ಪ್ರಾಸ, ಯಮಕ, ಚಮತ್ಕಾರ, ಕಾವ್ಯವಸ್ತುವಿಗೆ ಹೊಂದದ ವರ್ಣನೆಗಳು—ಮುಂತಾದ ದೋಷಗಳನ್ನು ಎತ್ತಿ ತೋರಿಸಿ ನಮ್ಮನ್ನು ಅವುಗಳ ವ್ಯಾಮೋಹದಿಂದ ಮುಕ್ತರಾಗಿಸಿದರು.

ಮೇಲೆ ಹೇಳಿರುವುದನ್ನು ನೋಡಿದರೆ 'ಶ್ರೀಯವರು ನಮ್ಮ ಹಳೆಯ ಸಂಪ್ರದಾಯಕ್ಕೆ ವಿರೋಧಿಗಳಾಗಿದ್ದರು, ಇಂಗ್ಲಿಷ್ ಸಾಹಿತ್ಯಕ್ಕೆ ಮನಸೋತರು' ಎನ್ನಬಹುದು. "ಇತರ ಸಾಹಿತ್ಯಗಳ ಸೆಳೆತಕ್ಕೇಕೆ ಸಿಕ್ಕಿಕೊಳ್ಳಬೇಕು ? ನಮ್ಮದೇ ಆದ ಹಳೆಯ ಸಾಹಿತ್ಯ ಸಾಲದೆ ?" ಎಂಬ ಪ್ರಶ್ನೆಗೆ ಅವರು "ಸಾಲದು, ಕ್ಷಮಿಸಬೇಕು, ಸಾಲದು" ಎಂದೇ ಖಚಿತವಾದ ಉತ್ತರ ಕೊಟ್ಟರು. ಆಗಿನ ಮುಂದಗಾಮಿ ಕನ್ನಡಾಭಿಮಾನಿಗಳು ಶ್ರೀಯವರು ಕನ್ನಡದ ಶತ್ರು ಎಂದೇ ಭಾವಿಸಿದರು. ಇವತ್ತು ಕೆಲವರು ಇಂಗ್ಲಿಷಿನ ಪ್ರಭಾವವನ್ನು ಹೇಗೆ ಹೀಗಳೆಯುತ್ತಾರೋ ಹಾಗೆಯೇ ಆಗ ಶ್ರೀಯವರನ್ನೂ ಅವರ ಅನುಯಾಯಿಗಳನ್ನೂ ಹೀಗಳೆದರು. ಶ್ರೀಕಂಠಯ್ಯನವರು ಕನ್ನಡಕ್ಕಾಗಿ ಶ್ರಮಿಸಿದರೆಂಬುದನ್ನು ಯಾರೂ ಇಲ್ಲವೆನ್ನಲಿಲ್ಲ. ಆದರೆ ಅವರಂಥ ಇಂಗ್ಲಿಷ್ ಪ್ರೇಮಿಗಳು ಕನ್ನಡದ ನೇತಾರರಾದ್ದರಿಂದ ಕನ್ನಡ ಹಾಳಾಯಿತು.

ಕನ್ನಡದ ಮನೆಗೆ ಇಂಗ್ಲಿಷ್ ಬೆಂಕಿ ಬಿತ್ತು ಇತ್ಯಾದಿ ಮಾತುಗಳನ್ನಾಡಿದರು. ಶ್ರೀಯವರು ಇಂಗ್ಲಿಷ್ ಪ್ರೇಮಿಯಾದ್ದರಿಂದ ಕನ್ನಡದ ಶತ್ರುವಾದರು—ಈ ಜನರ ದೃಷ್ಟಿಯಲ್ಲಿ.

o o o

ಇಂಗ್ಲಿಷಿನಿಂದಾಗಿ ನಾವು ಪರಕೀಯ ಸಂಸ್ಕೃತಿಗೆ ದಾಸರಾದೆವು, ಅದು ನಮ್ಮ ಸಂಸ್ಕೃತಿಗೆ ಮಾರಕ ಎಂಬ ವಾದವನ್ನು ನಾನು ಇದುವರೆಗೆ ವಿರೋಧಿಸಿದ್ದೇನೆ. ಆದರೆ ಇನ್ನೊಂದು ಆಪಾದದೆಯನ್ನು ಭಾಗಶಃ ಆದರೂ ಒಪ್ಪದಿರಲಾರೆ. ನಾವು ಪಾಶ್ಚಾತ್ಯ ಸಂಸ್ಕೃತಿಗೆ ದಾಸರಾಗದಿದ್ದರೂ ಇಂಗ್ಲಿಷ್ ಭಾಷೆಗೆ ಸ್ವಲ್ಪ ದಾಸರಾದದ್ದುಂಟು. ಅದು ರಾಜಭಾಷೆ. ಒಳ್ಳೆಯ ಹುದ್ದೆ ಸಿಕ್ಕಬೇಕಾದರೆ ಅದನ್ನು ಕಲಿಯಲೇಬೇಕು. ಅದೇ ಶಿಕ್ಷಣ ಮಾಧ್ಯಮ. ಕಲಿಯಬೇಕಾದ್ದನ್ನು ಚೆನ್ನಾಗಿಯೇ ಕಲಿತೆವು. ಅಂದ ಮೇಲೆ ಇಂಗ್ಲಿಷ್ ನಮ್ಮ ದೇಶದಲ್ಲಿ ವಿಶ್ವವ್ಯಾಪಿಯಾದದ್ದೂ ಆಶ್ಚರ್ಯವಲ್ಲ. ಇಂಗ್ಲಿಷ್ ಮೂಲಕ ಪಡೆಯಬೇಕಾದ ಜ್ಞಾನ ಬೇಕಾದಷ್ಟಿತ್ತು, ಸವಿಯಬಹುದಾದ ಸಾಹಿತ್ಯ ಸೌಂದರ್ಯವೂ ಬೇಕಾದಷ್ಟಿತ್ತು. ಇದನ್ನೆಲ್ಲ ಗಣನೆಗೆ ತಂದುಕೊಂಡ ಮೇಲೂ ನಮ್ಮ ಇಂಗ್ಲಿಷ್ ಪ್ರೇಮದಲ್ಲಿ ಪ್ರತಿಷ್ಠಾಪೂಜಕಮನೋವೃತ್ತಿ ಸೇರಿತ್ತೆಂಬುದು ನಿಜ. ಮನೆಯಲ್ಲಿ, ಶಾಲೆಯಲ್ಲಿ, ಆಟದ ಬಯಲಿನಲ್ಲಿ, ವೇದಿಕೆಯ ಮೇಲೆ, ಸಮಿತಿಗಳಲ್ಲಿ, ವಾಯುವಿಹಾರಕ್ಕೆ ಹೊರಟಾಗ—ಎಲ್ಲೆಲ್ಲೂ ಇಂಗ್ಲಿಷ್. ಅಂಗಡಿಮುಂಗಟ್ಟುಗಳ ಬೋರ್ಡೆಲ್ಲ ಇಂಗ್ಲಿಷಿನಲ್ಲಿ. ಶಾಲೆಗಳಲ್ಲಿ ಕನ್ನಡ ಮೇಷ್ಟರಿಗೆ ಏನೇನೂ ಗೌರವವಿಲ್ಲ. ಕನ್ನಡಕ್ಕೊಂದು ಇಲಾಖೆಯಿಲ್ಲ, ಪ್ರಾಧ್ಯಾಪಕರಿಲ್ಲ. ಸಂಸ್ಕೃತ ಓದಿದವರನ್ನು "ಕನ್ನಡ ಪಾಠಾನೂ ಹೇಳಿ" ಎಂದದ್ದೂ ಉಂಟು. ಕೆ. ವಿ. ರಾಘವಾಚಾರ್ಯರೂ ಜಿ. ಪಿ. ರಾಜರತ್ನಂ ಅವರೂ ಕೆಲಸಕ್ಕೆ ಸೇರಿದಾಗ ಅವರಿಗೆ ೬೦ ರೂಪಾಯಿ ಸಂಬಳ ಎಂದು ನೆನಪು—ಉಳಿದೆಲ್ಲ ಇಲಾಖೆಗಳಲ್ಲೂ ಕನಿಷ್ಠ ವೇತನ ೭೫ ರೂಪಾಯಿ!

ಈ ಪರಿಸ್ಥಿತಿಯಿಂದಾಗಿ ನಾವು—ಕನ್ನಡಿಗರು—ಇಂಗ್ಲಿಷ್ ಸಂಸ್ಕೃತಗಳ ಮೇಲೆ ಯುದ್ಧ ಹೂಡಲೇಬೇಕಾಯಿತು. ಯುದ್ಧಕಾಲದಲ್ಲಿ ಶತ್ರುಗಳ ಮೇಲೆ ಪ್ರಯೋಗಿಸುವ ವಾಗ್ಬಾಣಗಳನ್ನು ಪ್ರಯೋಗಿಸಲೇಬೇಕಾಯಿತು. "ಕನ್ನಡ ತಾಯಿಯನ್ನು ಮಕ್ಕಳೇ ಕಡೆಗಣಿಸಿದ್ದಾರೆ; ಕನ್ನಡದ ತಾಯಿ ಕ್ಷಯರೋಗದಿಂದ ನರಳುತ್ತಿದ್ದಾಳೆ. ಉಪಚರಿಸುವವರು ಗತಿಯಿಲ್ಲ" ಮುಂತಾದ ಎಚ್ಚರಿಕೆಯ ಮಾತುಗಳು ಆಗಿನ ವಾತಾವರಣದಲ್ಲಿ ಸಹಜ, ಸ್ವಾಭಾವಿಕ. ಆಗಿನ ಹಿರಿಯರು ನೂರು ವೇದಿಕೆಗಳಿಂದ – ಬೀದಿಯಲ್ಲಲ್ಲ – ಅಂಥ ಮಾತಾಡಿ ನಮ್ಮನ್ನು ಹುರಿದುಂಬಿಸಿದರು. ಆಗ ಘೋಷಿಸಿದ ಯುದ್ಧದಲ್ಲಿ ನಾವು ಗೆದ್ದೆವು ಎಂದೇ ನನ್ನ ಭಾವನೆ. ಆದರೆ ಈಗ ಅದೇ ಬಗೆಯ, ಅದಕ್ಕಿಂತ ಎಷ್ಟೋ ಪಟ್ಟು ಭಯಕಾರಕವಾದ ಮಾತುಗಳು ಕೇಳಿಬರುತ್ತಿವೆ. "ಇಂಗ್ಲಿಷ್ ನಮಗೆ ಮಾರಕ; ಕನ್ನಡಕ್ಕೆ ಅಪಾಯ ತಟ್ಟಿದೆ; ಕನ್ನಡಿಗರಿಗೆ ತಮ್ಮ ಭಾಷೆಯ

ವಿಷಯದಲ್ಲಿ ಅಭಿಮಾನವಿಲ್ಲ" ಇತ್ಯಾದಿ ಘೋಷಣೆಗಳು ಕೇಳಿಬರುತ್ತಿವೆ. ಇಂದಿನ ಪರಿಸ್ಥಿತಿಗೆ ಇಂಥ ಮಾತು ಎಷ್ಟುಮಟ್ಟಿಗೆ ಅನ್ವಯಿಸುತ್ತದೆಯೋ ನೋಡೋಣ.

ಮೈಸೂರು ವಿಶ್ವವಿದ್ಯಾನಿಲಯ—ಆಗ ಕರ್ನಾಟಕದಲ್ಲಿ ಅದೊಂದೇ ವಿಶ್ವವಿದ್ಯಾನಿಲಯ—ಅಸ್ತಿತ್ವಕ್ಕೆ ಬಂದಮೇಲೆ ಕಾಲು ಶತಮಾನಕ್ಕಿಂತ ಹೆಚ್ಚು ಕಾಲ ಮಹಾರಾಜರ ಕಾಲೇಜಿನಲ್ಲಿ ಎಲ್ಲಕ್ಕಿಂತ ಹೆಚ್ಚು ಪ್ರತಿಷ್ಠೆಯುಳ್ಳ ಇಲಾಖೆಯೆಂದರೆ ಇಂಗ್ಲಿಷ್ ಇಲಾಖೆ. ಇವತ್ತು—ಇದು ನನ್ನೊಬ್ಬನ ಭ್ರಮೆಯೋ ಅಥವಾ ಇತರರಿಗೂ ಹಾಗೆನ್ನಿಸುತ್ತದೆಯೋ ಹೇಳಲಾರೆ—ಮೈಸೂರು ವಿಶ್ವವಿದ್ಯಾನಿಲಯದ ಮಾತಾಡುವಾಗ ಸಾಮಾನ್ಯವಾಗಿ ಜನ ಕನ್ನಡ ಇಲಾಖೆಯನ್ನು ನೆನೆಯುತ್ತಾರೆ. ಕನ್ನಡಕ್ಕೆ ಮೀಸಲಾದ ಅಧ್ಯಯನ ಸಂಸ್ಥೆಯಿದೆ. ಇಬ್ಬರು ಪ್ರಾಧ್ಯಾಪಕರಿದ್ದಾರೆ. ಕನ್ನಡ ಅಧ್ಯಾಪಕವರ್ಗದವರ ಸಂಬಳ ಇತರ ಇಲಾಖೆಗಳವರದ್ದಕ್ಕಿಂತ ಕಡಮೆಯಿಲ್ಲ. ವಸ್ತುಪ್ರದರ್ಶನ ಶಾಲೆಯೊಂದಿದೆ. ಈ ವಿಶ್ವವಿದ್ಯಾನಿಲಯ ಬಿ.ಆರ್. ಪ್ರಾಜೆಕ್ಟ್‌ನಲ್ಲಿ ಸ್ನಾತಕೋತ್ತರ ಕೇಂದ್ರವನ್ನು ತೆರೆದಿದೆ—ಅದರ ಡೈರೆಕ್ಟರು ಕನ್ನಡ ಇಲಾಖೆಯವರು. ಕನ್ನಡ ಇಲಾಖೆಯವರು ಪ್ರಿನ್ಸಿಪಲ್‌ರಾಗಿದ್ದಾರೆ, ಉಪಕುಲಪತಿಗಳಾಗಿದ್ದಾರೆ. ಈಗ ಕರ್ನಾಟಕದಲ್ಲಿ ಐದು ವಿಶ್ವವಿದ್ಯಾನಿಲಯಗಳಿವೆ. ಅವೆಲ್ಲದರಲ್ಲೂ ಇಂಗ್ಲಿಷ್ ಇಲಾಖೆ ಮುಂದುವರಿಯುತ್ತಿದೆ, ಆದರೆ ಅದರಿಂದ ಕನ್ನಡಕ್ಕೇನೂ ಅಪಾಯ ಬಂದಂತಾಗಿಲ್ಲ. ಅಪಾಯ ಬರುವುದಂತಿರಲಿ, ಇಂಗ್ಲಿಷ್ ಬೋಧನೆಯನ್ನೇ ವೃತ್ತಿಯಾಗಿ ಆಶ್ರಯಿಸಿರುವವರೆಷ್ಟೋ ಜನ ಸ್ವ-ಇಚ್ಛೆಯಿಂದ ಕನ್ನಡದಲ್ಲಿ ಬರೆಯುತ್ತಿದ್ದಾರೆ, ಇಂಗ್ಲಿಷ್ ಎಂ.ಎ. ಮಾಡಿಕೊಂಡು ಬಿ.ಎಂ.ಶ್ರೀ.ಯವರೂ ಮಾಸ್ತಿಯವರೂ ತಮ್ಮ ವೃತ್ತಿಯನ್ನು ಯಶಸ್ವಿಯಾಗಿ ನಡೆಸುವುದರ ಜೊತೆಗೆ ಕನ್ನಡಕ್ಕೆ ಅದ್ಭುತವಾದ ಸೇವೆ ಸಲ್ಲಿಸಿದರಷ್ಟೆ. ಆ ಸಂಪ್ರದಾಯ ಮುಂದುವರಿಯುತ್ತಿದೆ. ಇಂಗ್ಲಿಷ್ ಪ್ರಾಧ್ಯಾಪಕರಾದ ಸರ್ವಶ್ರೀ ಎಸ್. ವಿ. ರಂಗಣ್ಣ, ಗೋಕಾಕ್, ಕುರ್ತಕೋಟಿ, ಇನಾಂದಾರ್, ಯು. ಆರ್. ಅನಂತಮೂರ್ತಿ, ಲಂಕೇಶ್, ಎಲ್. ಎಸ್. ಶೇಷಗಿರಿರಾವ್, ಎನ್. ಬಾಲಸುಬ್ರಹ್ಮಣ್ಯ, ಎಚ್. ಕೆ. ರಾಮಚಂದ್ರಮೂರ್ತಿ, ಗೋಪಾಲಕೃಷ್ಣ ಅಡಿಗ, ಶಂಕರಮೊಕಾಶಿ ಪುಣೇಕರ, ಶಾಂತಿನಾಥ ದೇಸಾಯಿ, ಆಮೂರ್, ಚಂದ್ರಶೇಖರ ಪಾಟೀಲ, ಗಿರಡ್ಡಿ ಗೋವಿಂದರಾಜ, ಎಸ್. ಅನಂತನಾರಾಯಣ, ಎಂ. ರಾಮರಾಯರು—ಪಟ್ಟಿ ಸಂಪೂರ್ಣವಾಗಿಲ್ಲ. ಈ ಗುಂಪಿಗೆ ಸೇರಿದಂತೆ ನನಗೆ ತಿಳಿಯದವರು ಎಷ್ಟೋ ಜನ ಇರಬೇಕು. ಇವರೆಲ್ಲ ಅತ್ಯುತ್ತಮ ದರ್ಜೆಯ ಇಂಗ್ಲಿಷ್ ಅಧ್ಯಾಪಕರೆಂದು ಹೆಸರು ಪಡೆದವರು, ಆಯ್ದುಕೊಂಡ ವಿಷಯವನ್ನು ಆಳವಾಗಿ ಅಭ್ಯಸಿಸಿದವರು. ಯಾರೊಬ್ಬರೂ ಇಂಗ್ಲಿಷಿನಲ್ಲಿ ಏಗಲಾರದೆ ಕನ್ನಡಕ್ಕೆ ಬಂದವರಲ್ಲ! ಅವರ ಇಂಗ್ಲಿಷ್ ಅಧ್ಯಯನವೇ 'ಕನ್ನಡದಲ್ಲಿ ಬರೆ' ಎಂದು ಅವರನ್ನು ಪ್ರಚೋದಿಸಿದೆ ಎಂದರೂ ತಪ್ಪಾಗದು. ಅವರ ಜೀವನದಲ್ಲಿ ಇಂಗ್ಲಿಷ್ ಭಾಷೆ ಕನ್ನಡದ ಶತ್ರುವಾಗಿ ಪರಿಣಮಿಸಿಲ್ಲ.

o o o

ವಿಚಾರ ಸಾಹಿತ್ಯ

ನನಗೆ ಕನ್ನಡ ಸಾಹಿತ್ಯದ ಪ್ರಗತಿ ಆನಂದ ಕೊಟ್ಟಿದೆ : ಆದರೆ ಒಂದು ವಿಷಯದಲ್ಲಿ ಅತೃಪ್ತಿಯೂ ಇದೆ ಎಂದು ಸ್ವಲ್ಪ ಹೊತ್ತಿನ ಕೆಳಗೆ ಹೇಳಿದೆನಷ್ಟೆ. ನನ್ನ ಆನಂದ ಲಲಿತಸಾಹಿತ್ಯದಿಂದ—ನಾವು 'ಸೃಜನಶೀಲ' ಎನ್ನುವ ಸಾಹಿತ್ಯದಿಂದ—ಬಂದದ್ದು. ನನ್ನ ಬದುಕಿನಲ್ಲಿ ನೂರಕ್ಕೆ ಎಪ್ಪತ್ತು ಭಾಗವಾದರೂ ಇಂಥ ಸಾಹಿತ್ಯವನ್ನು ಓದುವುದರಲ್ಲೂ ಬೋಧಿಸುವುದರಲ್ಲೂ ಅಲ್ಪಸ್ವಲ್ಪ ಬರೆಯುವುದರಲ್ಲೂ ಕಳೆದಿದೆ. ಅದು ನಮ್ಮ ಬದುಕನ್ನು ರೂಪಿಸುವುದರಲ್ಲಿ ಗಣನೀಯವಾದ ಪಾತ್ರ ವಹಿಸುತ್ತದೆ ಎಂದು ನನ್ನ ನಂಬಿಕೆ. ಇದನ್ನು ಇಲ್ಲಿ ಹೇಳುವುದಕ್ಕೆ ಕಾರಣ : ನಾನು ವಿಚಾರಸಾಹಿತ್ಯದ ಅವಶ್ಯಕತೆಯನ್ನು ಒತ್ತಿ ಹೇಳಿದಾಗ ಲಲಿತಸಾಹಿತ್ಯ ಪ್ರೇಮಿಗಳು ನನ್ನನ್ನು ಕ್ಷಮಿಸಲೆಂದು.

ೋ ೋ ೋ

ವಿಚಾರ ಸಾಹಿತ್ಯವೂ ಲಲಿತ ಸಾಹಿತ್ಯವೂ ಪರಸ್ಪರ ವಿರೋಧಿಗಳಲ್ಲ. ಆದರೆ ಸಾಮಾನ್ಯವಾಗಿ ಒಂದನ್ನು ಬರೆಯುವವರು ಇನ್ನೊಂದನ್ನು ಬರೆಯಹೋಗುವುದಿಲ್ಲ. ಬರ್ಟ್ರಂಡ್ ರಸೆಲ್ ಕೊನೆಗಾಲದಲ್ಲಿ ಒಂದು ಕಾದಂಬರಿಯನ್ನು ಬರೆದರೆಂದು ನೆನಪು. ಎಚ್. ಜಿ. ವೆಲ್ಸರು ವಿಚಾರ ಮತ್ತು ಲಲಿತ ಸಾಹಿತ್ಯಗಳೆರಡರಲ್ಲೂ ಉತ್ತಮ ದರ್ಜೆಯ ಕೆಲಸ ಮಾಡಿದರು. ಆದರೆ ಸಾಮಾನ್ಯವಾಗಿ ವಿಚಾರ ಸಾಹಿತ್ಯವನ್ನು ಬರೆಯುವವರು ತಮ್ಮ ಕ್ಷೇತ್ರದಲ್ಲಿ ಅತ್ಯುತ್ತಮ ದರ್ಜೆಯ ಪಾಂಡಿತ್ಯವನ್ನು ಪಡೆದವರು. ಅವರು ಲಲಿತ ಸಾಹಿತ್ಯ ರಚನೆಗೆ ಕೈಹಾಕುವುದು ಅಪರೂಪ. ಇವೆರಡು ಬಗೆಯ ಸಾಹಿತ್ಯಗಳೂ ಒಂದಕ್ಕೊಂದು ಪೂರಕ. ಲಲಿತ ಸಾಹಿತ್ಯ ಚಿತ್ರಪ್ರಧಾನ, ಭಾವಪ್ರಧಾನ, ಕೆಲವು ಪ್ರಕಾರಗಳಲ್ಲಿ ಕ್ರಿಯಾಪ್ರಧಾನ. ಅದರಲ್ಲಿ ವಿಚಾರವು ಬಹುಮಟ್ಟಿಗೆ ಮೂರ್ತವಾಗುತ್ತದೆ--ಅಂದರೆ, ಪಾತ್ರಗಳು ಆಡುವ ಮಾತಿನ, ಮಾಡುವ ಕೆಲಸಗಳ ಮೂಲಕ ವಿಚಾರ ಅಭಿವ್ಯಕ್ತಿ ಪಡೆಯುತ್ತದೆ. ಎಸ್. ಎಲ್. ಭೈರಪ್ಪನವರ 'ತಬ್ಬಲಿಯು ನೀನಾದೆ ಮಗನೆ' ಎಂಬ ಕಾದಂಬರಿಯಲ್ಲಿ ಎರಡು ಸಂಸ್ಕೃತಿಗಳ ಘರ್ಷಣೆಯ ಚಿತ್ರವಿದೆ. ಆ ಘರ್ಷಣೆಯ ನಾಲ್ಕಾರು ಮುಖಗಳನ್ನು ದಿಟ್ಟಿಸಿ ನೋಡಿ, ಲಾಭನಷ್ಟಗಳನ್ನು ಗುರುತಿಸಿ, ಕೂಲಂಕಷವಾಗಿ ವಾದ ಪ್ರತಿವಾದಗಳನ್ನು ಪರಿಶೀಲಿಸಿ ಅನುಸ್ಯೂತವಾಗಿ ವಿಚಾರಲಹರಿಯನ್ನು ಮುಂದುವರಿಸುವುದು ಕಾದಂಬರಿಗೆ ಸಾಧ್ಯವಲ್ಲ. ಹಾಗೆ ಮಾಡಹೊರಟರೆ ಕಾದಂಬರಿಯ ಮೇಲೆ ಹೊರಲಾರದ ಹೊರೆಯನ್ನು ಹೇರಿದಂತಾಗುತ್ತದೆ. ವಿಚಾರಪ್ರಿಯನ ದೃಷ್ಟಿಯಿಂದ ಲಲಿತ ಸಾಹಿತ್ಯದ ಕೊರತೆಯೆಂದರೆ : ಅದರ ಸೌಂದರ್ಯವೇ ಗಮನವನ್ನು ಸೆರೆಹಿಡಿದದ್ದರಿಂದಾಗಿ ಆಲೋಚನಾಮೃತ ನಮ್ಮ ಕೈತಪ್ಪಿಸಿಕೊಂಡು ಹೋಗುವ ಸಂಭವ. ಅದರಲ್ಲಿರುವ ಸೂಚನೆಗಳನ್ನು ವಿಮರ್ಶಕ ಗುರುತಿಸಿ ಬೆಳೆಸಬಹುದು : ಜನಸಾಮಾನ್ಯ ಕಥೆಯಿಂದಲೇ

ತೃಪ್ತಿಪಡೆಯುತ್ತದೆ. ವಿಚಾರಸಾಹಿತ್ಯದ ಕೊರತೆಯೆಂದರೆ ಅದಕ್ಕೆ ಪ್ರೇರಕ ಶಕ್ತಿ, ಹುರಿದುಂಬಿಸುವ ಶಕ್ತಿ ಕಡಮೆ.

o o o

ಈಗ ಅನೇಕ ಕಡೆ ಲಲಿತಸಾಹಿತ್ಯವನ್ನು ಕುರಿತ ವಿಚಾರ ಸಂಕಿರಣಗಳೂ ಶಿಬಿರಗಳೂ ನಡೆಯುತ್ತಿವೆಯಷ್ಟೆ. ಅವುಗಳ ಜೊತೆಗೇ ವಿಚಾರ ಪ್ರಧಾನವಾದ ವಿಷಯಗಳನ್ನು ಕುರಿತ ಶಿಬಿರಗಳನ್ನು ಏರ್ಪಡಿಸಿ ಲಲಿತ ಸಾಹಿತ್ಯದಲ್ಲಿ ಜನರಿಗಿರುವ ಉತ್ಸಾಹ ವಿಚಾರ ಸಾಹಿತ್ಯಕ್ಕೂ ಸಲ್ಲುವಂತೆ ಮಾಡಬಹುದು. ಈ ಕೆಲಸದಲ್ಲಿ ವಿಶ್ವವಿದ್ಯಾಲಯಗಳ ಭೌತ ಮತ್ತು ಮಾನವಿಕ ಶಾಸ್ತ್ರಗಳ ಅಧ್ಯಾಪಕರು ಸಂತೋಷದಿಂದ ಸಹಕರಿಸಿಯಾರು. ಇದರಿಂದಾಗಿ ಕನ್ನಡ ಭಾಷಾಭಿಮಾನ ಕನ್ನಡ ಇಲಾಖೆಗೆ ಸೀಮಿತವಾಗದೆ ಇತರ ಇಲಾಖೆಗಳಲ್ಲಿ ಈಗಾಗಲೇ ಇರಬಹುದಾದ ಉತ್ಸಾಹ ಮತ್ತಷ್ಟು ಹೆಚ್ಚುತ್ತದೆ.

ಕೈವಾರದ ಸಾಹಿತ್ಯ ಸಮ್ಮೇಳನ

ಕೋಲಾರ ಜಿಲ್ಲೆಯ ಕೈವಾರದಲ್ಲಿ ಈ ವರ್ಷ ಮಾರ್ಚಿ 23, 24 ಮತ್ತು 25 ರಂದು ನಡೆದ 56ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಈಚಿನ ಹಲವು ಸಮ್ಮೇಳನಗಳಂತೆ 'ವಿಜೃಂಭಣೆ'ಯಿಂದ ನಡೆಯಿತು. ಈ ಸಮ್ಮೇಳನದ ಮುಖ್ಯ ವೈಶಿಷ್ಟ್ಯ ಎಂದರೆ ಅದು ಒಂದು ಗ್ರಾಮದಲ್ಲಿ ನಡೆದದ್ದು. ಸಮ್ಮೇಳನಾಧ್ಯಕ್ಷರಾದ ಪ್ರೊ॥ ಅಕ್ಕಿಹೆಬ್ಬಾಳು ನರಸಿಂಹ ಮೂರ್ತಿರಾಯರು ಹೇಳಿದಂತೆ, "ದೊಡ್ಡ ಪಟ್ಟಣಗಳಲ್ಲಿ ಸಭೆ ಶಿಬಿರ ವಿಚಾರ ಸಂಕಿರಣಗಳು ಹಳಸಲಾಗಿ ಹೋಗಿವೆ." ಕೈವಾರ ಎಲ್ಲ ಹಳ್ಳಿಗಳಂತಹ ಒಂದು ಹಳ್ಳಿಯಲ್ಲ. ಶ್ರೀ ನಾರೇಯಣ (ಕುಮಾರವ್ಯಾಸ ತನ್ನ ಇಷ್ಟ ದೈವವನ್ನು ಛಂದಸ್ಸಿನ ಅಗತ್ಯಕ್ಕಾಗಿ 'ನಾರಯಣ' ಎಂದುಕೊಂಡಂತೆ, 'ನಾರೇಯಣ' ಎಂಬ ಶಬ್ದರೂಪವೂ ಒಂದು ವೈಶಿಷ್ಟ್ಯವೆ) ಯತೀಂದ್ರರ ಆಧ್ಯಾತ್ಮಿಕ ಪ್ರಭಾವದಿಂದ ಪಾವನವಾಗಿರುವ ಒಂದು ಕ್ಷೇತ್ರ. ಈ ಸಮ್ಮೇಳನದ ಇನ್ನೊಂದು ವೈಶಿಷ್ಟ್ಯವನ್ನು ಮರೆಯದೆ ಕನ್ನಡಿಗರ ಗಮನಕ್ಕೆ ತಂದದ್ದು ಸಂತೋಷದ ಸಂಗತಿ. ಆ ವೈಶಿಷ್ಟ್ಯವನ್ನು ವಿವರಿಸಿದ ಸಮ್ಮೇಳನಾಧ್ಯಕ್ಷರ ಮಾತುಗಳಲ್ಲಿ ಅವರ ಗುರುಭಕ್ತಿಯೂ ಗುರುವಿನ ವ್ಯಕ್ತಿತ್ವವೂ ಅರಳಿ ಪರಿಮಳಿಸಿವೆ:

"ಗತಕಾಲದ ವೀರರ, ಮೇಧಾವಿಗಳ, ಪುಣ್ಯಪುರುಷರ ನಾಡಿನಲ್ಲಿ ನಾವು ಹುಟ್ಟಿದೆವೆಂದು ಹೇಳಿಕೊಳ್ಳುವುದು ಸ್ವಾಭಾವಿಕ. ಆದರೆ ಅವರ ಕೀರ್ತಿಯನ್ನು ಮುಂದುವರಿಸುವಂಥ, ಸಾಹಸದ ಎಲ್ಲೆಗಳನ್ನು ತಳ್ಳಿಕೊಂಡು ಮುಂದೆ ಸಾಗುವಂಥ ಬದುಕನ್ನು ಬಾಳುವುದೇ ನಾವು ಪೂರ್ವಿಕರಿಗೆ ಸಲ್ಲಿಸಬೇಕಾದ ಕಾಣಿಕೆ; ಅವರನ್ನು ಅನುಕರಿಸುತ್ತ ಅವರ ಸತ್ವಹೀನ ಪ್ರತಿಕೃತಿಗಳಂತೆ ಬಾಳುವುದಲ್ಲ. ಈ ಸತ್ಯ ಕನ್ನಡ ಸಾಹಿತ್ಯ ಪ್ರಪಂಚಕ್ಕೂ ಅನ್ವಯಿಸುತ್ತದೆಂಬುದನ್ನು ಮನಗಂಡು ಅದರ ಬೆಳಕಿನಲ್ಲಿ ತಮ್ಮ ಜೀವನವನ್ನು ರೂಪಿಸಿಕೊಂಡವರು—ನನ್ನ ಪೂಜ್ಯ ಗುರುಗಳಾದ ಬಿ. ಎಂ. ಶ್ರೀಕಂಠಯ್ಯನವರು.

ಅವರ ಪ್ರಭಾವದಿಂದಾಗಿ, ಅವರ ಸಂತತ ಪ್ರಚಾರದಿಂದಾಗಿ, ಅವರು ಸ್ವತಃ ನಡಸಿದ ಪ್ರಯೋಗಗಳಿಂದಾಗಿ ಕನ್ನಡ ಸಾಹಿತ್ಯದಲ್ಲಿ ಹೊಸ ಯುಗವೊಂದು ಆರಂಭವಾಯಿತು. ಅದು ಹಿಂದಿನ ಯಾವ ಯುಗವೂ ಇಡದಷ್ಟು ದೊಡ್ಡ ದಾಪನ್ನು ಇಟ್ಟು ಅತ್ಯಂತ ಪರಿಣಾಮಕಾರಿಯಾದ ಪ್ರಗತಿಯನ್ನು ಸಾಧಿಸಿದೆ.

ಶತಮಾನಗಳ ಕಾಲದಿಂದ ಬಂದ ಸಂಪ್ರದಾಯಗಳ ಪ್ರಯೋಜನವನ್ನು ಬಿಟ್ಟುಕೊಡದೆ, ಆದರೆ ಆ ಸಂಪ್ರದಾಯದ ಎಲ್ಲೆಕಟ್ಟುಗಳಲ್ಲೇ ಉಳಿದು 'ಬಂಧನವೇ ಒಂದು ಸೌಖ್ಯ' ಎಂದುಕೊಳ್ಳುವ ಮನೋವೃತ್ತಿಗೆ ಬಲಿಬೀಳದೆ ಹೊಸ ಯೌವನದ ಉತ್ಸಾಹದಿಂದ ಮುನ್ನುಗ್ಗಿದ ಯುಗ, ನಮ್ಮದು. ಅದರ ಪ್ರವರ್ತಕರಾದ ಬಿ. ಎಂ. ಶ್ರೀಯವರು ಬದುಕಿದ್ದರೆ ಈ ವರ್ಷದ ಆದಿಯಲ್ಲಿ ಅವರಿಗೆ ನೂರು ವರ್ಷ ತುಂಬುತ್ತಿತ್ತು. ಕನ್ನಡನಾಡು ಬಿ.ಎಂ.ಶ್ರೀಯವರ ಶತಮಾನೋತ್ಸವವನ್ನು ಆಚರಿಸುತ್ತಿರುವ ವರ್ಷದಲ್ಲೇ ಇಲ್ಲಿ ಈ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ. ಕೈವಾರದ ವೈಶಿಷ್ಟ್ಯಗಳಲ್ಲಿ ಇದೂ ಒಂದು."

ಈ ವೈಶಿಷ್ಟ್ಯವನ್ನು ಗುರುತಿಸಿ ತಮ್ಮ ಭಾಷಣದಲ್ಲಿ ತಿಳಿಸಿದ ಪೂಜ್ಯ ಮೂರ್ತಿರಾಯರು ವಂದ್ಯರು. ಆದರೆ ಈ ವೈಶಿಷ್ಟ್ಯ ಸ್ಪಷ್ಟಗೋಚರವಾಗುವಂತೆ ಸಮ್ಮೇಳನದ ಸ್ವಾಗತ ಸಮಿತಿ ಯಾವ ವ್ಯವಸ್ಥೆಯನ್ನೂ ಮಾಡಿರಲಿಲ್ಲ. ಚಿಂತಾಮಣಿಯಿಂದ ಕೈವಾರಕ್ಕೆ ಹೋಗುವ ದಾರಿಯಲ್ಲಿ ಹಿಂದಿನ ಸಮ್ಮೇಳನಾಧ್ಯಕ್ಷರುಗಳ ನೆನಪು ದಾರಿಹೋಕನಿಗೆ ಕ್ಷಣಕಾಲ ಮರುಕೊಳಿಸುವಂತೆ ನಿಲ್ಲಿಸಿದ್ದ 55 ಕಮಾನುಗಳಲ್ಲಿ ಒಂದು ಬಿ. ಎಂ. ಶ್ರೀ.ಯವರ ಹೆಸರಿನಲ್ಲಿದ್ದುದೆಷ್ಟೋ ಅಷ್ಟೆ. ಬಿ. ಎಂ. ಶ್ರೀ.ಯವರ ಶತಮಾನೋತ್ಸವ ವರ್ಷದಲ್ಲಿ ಅವರ ಪ್ರತಿಭಾವಂತ ಶಿಷ್ಯರಲ್ಲಿ ಒಬ್ಬರಾದ ಶ್ರೀ ಮೂರ್ತಿರಾಯರನ್ನು ಆರಿಸಿದ್ದೇ ಒಂದು ದೊಡ್ಡ ಸಾಧನೆ ಅಲ್ಲವೆ? ಸಮ್ಮೇಳನ ನಡೆದದ್ದು 'ಶ್ರೀಯೋಗಿ ನಾರೇಯಣನಗರ'ದಲ್ಲಿ. ಇದರ ಅಚ್ಚುಕಟ್ಟಿಗೆ ಸಾಕಷ್ಟು ಶ್ರಮಿಸಿದ್ದರು. ವ್ಯಯ ಮಾಡಿದ್ದರು, ಸ್ವಾಗತ ಸಮಿತಿಯ ಅಧ್ಯಕ್ಷರಾದ, ವಿದ್ಯಾಭಿಮಾನಿ, ಸಾಹಿತ್ಯಾಭಿಮಾನಿ ಶ್ರೀ ಎಂ. ಎಸ್. ರಾಮಯ್ಯನವರು. ಆ ಯೋಗಿಯ 'ಕಾಲಜ್ಞಾನ' ಮುಂತಾದ ತೆಲುಗು ರಚನೆಗಳ ಸಂಪುಟಗಳ ಪ್ರಕಟನೆಯೂ ಸ್ವಾಗತಾರ್ಹವೇ. ಕೋಲಾರ ಜಿಲ್ಲೆಯವರೇ ಆದ ಸರ್ ಮೋಕ್ಷಗುಂಡಂ ಅವರ ಹೆಸರನ್ನು ಸಮ್ಮೇಳನದ ಮಂಟಪಕ್ಕೂ, ಡಾ॥ ಡಿ.ವಿ.ಜಿ. ಅವರ ಹೆಸರನ್ನು ವೇದಿಕೆಗೂ ಇಟ್ಟದ್ದು ಕೂಡ ಉಚಿತವಾಗಿತ್ತು. ಬಿ. ಎಂ. ಶ್ರೀ.ಯವರ ಸಾಧನೆ – ಸಂದೇಶಗಳನ್ನು ಕುರಿತೋ, ಅವರ ವ್ಯಕ್ತಿತ್ವ ಕೃತಿಗಳನ್ನು ಕುರಿತೋ ಒಂದು ವಿಚಾರಗೋಷ್ಠಿಯನ್ನು ಏರ್ಪಡಿಸಬಹುದಾಗಿತ್ತು.

ಕನ್ನಡ ಚಳವಳಿ : ಶ್ರೀ ಮೂರ್ತಿರಾಯರ ಭಾಷಣದ ಬಹುಭಾಗ ಗೋಕಾಕ್ ವರದಿಯ ಸಂಬಂಧವಾಗಿ ನಡೆದ ಚಳವಳಿಯ ಹಿನ್ನೆಲೆ–ಮುನ್ನೆಲೆಗಳ ವಿವರಣೆ, ಚಳವಳಿಯ ಹಿಂದಿನ ಮನೋವೃತ್ತಿ, ನಿಲುವು ಇವುಗಳನ್ನು "ಗೌರವದಿಂದ ವಿರೋಧಿಸುವುದಕ್ಕೆ" ಮೀಸಲಾಗಿದೆ. ಚಳವಳಿ ಮಾಡಿದವರು ತಳೆದ ಇಂಗ್ಲಿಷ್ ವಿರೋಧವನ್ನು ವಿಶ್ಲೇಷಿಸಿ, ಇಂಗ್ಲಿಷಿನಿಂದ ನಮಗೆ ಎಷ್ಟು ಉಪಕಾರವಾಗಿದೆ, ಮುಂದೆ ಇನ್ನೂ

ಎಷ್ಟೊಂದು ಉಪಕಾರ ಆಗಬೇಕಾಗಿದೆ ಎಂಬುದನ್ನು ದೀರ್ಘವಾಗಿಯೆ ಪ್ರಸ್ತಾಪಿಸಿದ್ದಾರೆ. ಭಾಷೆಯ ಸಂಬಂಧವಾಗಿ ನಡೆದ ಇತ್ತೀಚಿನ ಚಳವಳಿಯಲ್ಲಿ ಆಸ್ತಿಪಾಸ್ತಿಗೆ ನಷ್ಟ, ಪ್ರಾಣಹಾನಿ ಆದದ್ದು ದಿಟ. ಇದರಿಂದ ಶ್ರೀಯುತರ ಮನಸ್ಸು ನೊಂದಂತೆ ಚಳವಳಿಯನ್ನು ಪ್ರಾರಂಭಿಸಿದವರ ಮನಸ್ಸೂ ನೊಂದಿದೆ. ದೊಡ್ಡ ದೊಡ್ಡ ನಗರಗಳಲ್ಲಿ ವಾಹನಸಂಚಾರದ ಅಪಘಾತಗಳಿಂದ ಪ್ರತಿನಿತ್ಯವೂ ಪ್ರಾಣಹಾನಿಯಾಗುತ್ತಿದೆ. ಹಾಗೆಂದು ವಾಹನಸಂಚಾರವನ್ನೇ ನಿಷೇಧಿಸುವುದಕ್ಕಾಗುತ್ತದೆಯೇ ? ಕರ್ನಾಟಕದ ಸದ್ಯದ ಭಾಷಾ ಚಳವಳಿಯ ಮುಖ್ಯ ಗುರಿ, ಜೀವನದ ಎಲ್ಲ ಕ್ಷೇತ್ರಗಳಲ್ಲೂ ಕನ್ನಡಕ್ಕೆ ನೈಸರ್ಗಿಕವಾಗಿ ಸಲ್ಲಬೇಕಾದ ಸ್ಥಾನಮಾನಗಳನ್ನು ದೊರಕಿಸುವುದು. ಬೇರೆ ಬೇರೆ ಭಾಷೆಗಳನ್ನಾಡುವ ಕನ್ನಡೇತರರು ಕನ್ನಡ ಕಲಿತು ಕನ್ನಡ ಜನದೊಂದಿಗೆ ಸುಖದುಃಖಗಳನ್ನು ಹಂಚಿಕೊಂಡು ಒಂದು ಒಕ್ಕಲಾಗಿ ಬದುಕಲಿ ಎಂದು. ಬಿ. ಎಂ. ಶ್ರೀ.ಯವರು ಸಂಸ್ಕೃತವನ್ನು ವಿರೋಧಿಸಿದ್ದು ಏಕೆ ? ಕವಿರಾಜಮಾರ್ಗಕಾರ, ನಯಸೇನ, ಮಧುರ, ಮಹಲಿಂಗರಂಗ ಇವರುಗಳು ಯಾವ ಕಾರಣಕ್ಕಾಗಿ ಸಂಸ್ಕೃತವನ್ನು ವಿರೋಧಿಸಿದರೋ ಅದೇ ಕಾರಣಕ್ಕಾಗಿ. ಹಾಗೆ ನೋಡಿದರೆ, ಕವಿರಾಜಮಾರ್ಗಕಾರ ಪ್ರಪ್ರಥಮ ಚಳವಳಿಗಾರ. ಆಧುನಿಕ ಯುಗದಲ್ಲಿ ಬಿ. ಎಂ. ಶ್ರೀ. ಪ್ರಪ್ರಥಮ ಚಳವಳಿಗಾರರು. ಅಂದಿನ ಕೆಲವರು 'ಶ್ರೀ' ಅವರನ್ನು 'ಕ್ರಾಂತಿಕಾರರು' ಎಂದು ಮೆಚ್ಚಿಕೊಂಡು ಮಾತಾಡಿದ್ದಾರೆ. ಬಿ. ಎಂ. ಶ್ರೀ.ಯವರ ಕಾಲದಲ್ಲಿ ಕನ್ನಡದ ಸಮಸ್ಯೆಗಳು ಹೇಗೆ ಇದ್ದುವೋ ಈಗಲೂ ಹಾಗೆಯೇ ಉಳಿದುಕೊಂಡು ಬಂದಿವೆ. ಕನ್ನಡ ಸಂಸ್ಕೃತಕ್ಕೆ ಹೊರೆಯಾಗಿತ್ತು ; ಅದು ಹಾವಳಿ ಮಾಡಲಿಲ್ಲ. ಇಂಗ್ಲಿಷು ಹೊರೆಯಾಗಿಲ್ಲ : ಆದರೆ ಹಾವಳಿ ಮಾಡುತ್ತಿದೆ. ಎಲ್ಲರೂ ಬಿ. ಎಂ. ಶ್ರೀ. ಅವರಂತೆ, ಮೂರ್ತಿರಾಯರಂತೆ ಭಾಷೆಯ ಬಳಕೆಯಲ್ಲಿ ವಿವೇಕವಂತರಲ್ಲ. ಇಂಗ್ಲಿಷ್ ಕಲಿತಲ್ಲದೆ ಬದುಕಿನಲ್ಲಿ ಮೋಕ್ಷವಿಲ್ಲ ಎಂಬ ಭಾವನೆ ಸಾಮಾನ್ಯ ಜನರಲ್ಲೂ ಬೇರುಬಿಟ್ಟು ಬಲಿಯುತ್ತಿದೆ. ಕಸಮುಸುರೆ ಮಾಡುವ ಕೆಲಸಗಿತ್ತಿಗೂ ತನ್ನ ಹೆಣ್ಣು ಮಗುವನ್ನು—ಗಂಡುಮಗುವನ್ನಲ್ಲ—ಇಂಗ್ಲಿಷ್ ಮೀಡಿಯಮ್ ಶಾಲೆಗೆ ಸೇರಿಸುವ ಹುಚ್ಚು ಹಿಡಿದಿದೆ. ಕನ್ನಡಕ್ಕಾಗಿ ಹೋರಾಟ ನಡಸುವವರು ಇಂಗ್ಲಿಷ್ ವಿರೋಧಿಗಳೂ ಅಲ್ಲ, ಇಂಗ್ಲಿಷನ್ನು ಗಡೀಪಾರು ಮಾಡಬೇಕೆಂದು ಹೇಳತಕ್ಕವರೂ ಅಲ್ಲ. ಚಳವಳಿಯ ಸ್ವರೂಪವನ್ನೇ ಅರ್ಥಮಾಡಿಕೊಳ್ಳದೆ ಕ್ಷಣಿಕ ಆವೇಶದಿಂದಲೋ ಪ್ರಚಾರಪ್ರಿಯತೆಯಿಂದಲೋ ಗುಂಪುವರ್ತನೆಯ ಸುಳಿಗೆ ಸಿಲುಕಿಯೋ ಚಳವಳಿಗೆ ನುಗ್ಗಿದವರು ದಾರಿ ತಪ್ಪಿ ನಡೆದರೆ, ರಾಜಕಾರಣಿಗಳಿಂದ ಪ್ರೇರಿತರಾಗಿಯೋ, ಬೇರೆ ಕಾರಣಗಳಿಗಾಗಿಯೋ ಸಮಾಜ ವಿರೋಧಿ ಶಕ್ತಿಗಳು ಚಳವಳಿಯಲ್ಲಿ ನುಸುಳಿ ಹಿಂಸಾಚಾರಕ್ಕೆ ಎಡೆಗೊಟ್ಟರೆ, ಸದುದ್ದೇಶದಿಂದ ಶಾಂತಿ ಅಹಿಂಸೆಗಳ ಪಾಲನೆಯನ್ನು ಬಿಡದೆ ಪರಿಮಿತ ಸಂಖ್ಯೆಯ ಬುದ್ಧಿಜೀವಿಗಳು ಪ್ರಾರಂಭಿಸಿದ ಚಳವಳಿಯನ್ನೇ ದೂಷಿಸುವುದು ಕಾಲಧರ್ಮವನ್ನು ಅರ್ಥಮಾಡಿಕೊಳ್ಳದೆ ಆಡುವ ಮಾತು.

ಬಿ. ಎಂ. ಶ್ರೀ.ಯವರು ತಮ್ಮ ಕಾಲದ ಕನ್ನಡದ ಸ್ಥಿತಿಯನ್ನು ದೃಷ್ಟಿಯಲ್ಲಿಟ್ಟು ಕೊಂಡು ಏನು ಹೇಳಿದರು ಎನ್ನುವುದು ಈಗ ಪ್ರಸ್ತುತವಾಗಿದೆ :

> "ಈಗ ಐವತ್ತು ವರ್ಷಗಳಿಂದ ಇಂಗ್ಲಿಷ್ ವಿದ್ಯಾಭ್ಯಾಸದ ಫಲವಾಗಿ ಹೊಸ ಚೈತನ್ಯ, ಹೊಸ ದೇಶಾಭಿಮಾನ ಭಾಷಾಭಿಮಾನಗಳು ಚಿಗುತು ಹೊಸ ಜೀವನಕ್ಕೆ ತಕ್ಕಂತೆ ಜನತೆಗೆಲ್ಲಾ ತಕ್ಕ ಸಾಹಿತ್ಯ ಸೃಷ್ಟಿ ನಡೆಯುತ್ತಿದೆ. ಆದರೆ ಕನ್ನಡಿಗರಿಗೆ ಒಂದು ಕಟ್ಟಿಲ್ಲ : ಒಂದು ದೃಷ್ಟಿಯಿಲ್ಲ. ಕನ್ನಡಿಗರು ಒಡೆದಿದ್ದಾರೆ ; ಒಡಕು ಬೆಳೆಯುತ್ತಲೂ ಇದೆ. ವಿದ್ಯೆಯಲ್ಲಿ, ಜ್ಞಾನಪ್ರಚಾರದಲ್ಲಿ, ಸಾಹಿತ್ಯದಲ್ಲಿ, ಕನ್ನಡ ದೇಶದ ಎಲ್ಲಾ ಕಾರ್ಯಸ್ಥಾನಗಳಲ್ಲಿ ಕನ್ನಡಕ್ಕಿರಬೇಕಾದ ಪ್ರಧಾನಸ್ಥಾನವನ್ನು ಕೊಡಬೇಕೆಂದು ಹೋರಾಡುವವರು ಕೆಲವು ಮಂದಿ ಮಾತ್ರ."

ಬಿ. ಎಂ. ಶ್ರೀ. ಅವರು ಮೇಲಿನ ಮಾತುಗಳನ್ನು ಕುವೆಂಪು ಅವರ "ಕಿಂದರಿ ಜೋಗಿ ಮತ್ತು ಇತರ ಕಥನ ಕವನಗಳು" ಎಂಬ ಕವನ ಸಂಕಲನಕ್ಕೆ ಬರೆದ ಮುನ್ನುಡಿಯಲ್ಲಿ ಹೇಳಿದ್ದಾರೆ ! ಎಷ್ಟು ಜನ ಈ ಮಾತನ್ನು ಗಮನಿಸಿದ್ದಿರಬಹುದು ! ದಿವಂಗತ ವೆಂಕಣ್ಣಯ್ಯನವರಿಗೆ ಪ್ರಬುದ್ಧ ಕರ್ಣಾಟಕದಲ್ಲಿ 'ಶ್ರದ್ಧಾಂಜಲಿ' ಸಮರ್ಪಿಸುವ ತಮ್ಮ ಬರಹದಲ್ಲಿ ಬಿ. ಎಂ. ಶ್ರೀ. ವೆಂಕಣ್ಣಯ್ಯನವರನ್ನು ನೆನೆಯುವಾಗ "ಕನ್ನಡದ ಚಳವಳಿಗೆ ಚತುರ್ಭುಜವಾಗಿದ್ದರು" ಎಂದಿದ್ದಾರೆ. ಸೌಮ್ಯಮೂರ್ತಿಗಳಾಗಿದ್ದು ಏಕಾಂತದಲ್ಲಿ ಕನ್ನಡ ಸೇವೆ ಮಾಡಿದರೂ, ಕನ್ನಡಕ್ಕಾಗಿ ಪರಿತಪಿಸಿದರೂ, ಬಿ.ಎಂ.ಶ್ರೀ. ಅವರ ದೃಷ್ಟಿಯಲ್ಲಿ ವೆಂಕಣ್ಣಯ್ಯನವರ ವಾಙ್ಮಯ ತಪಸ್ಸು 'ಕನ್ನಡದ ಚಳವಳಿ.' ಆಗಿನ ಕಾಲಕ್ಕೆ ಆ ಬಗೆಯ ಚಳವಳಿ ಸಾಕಾಗಿತ್ತು. ಮೈಸೂರಿನ ಯುವರಾಜರೇ ಪರಿಷತ್ತಿನ ಅಧ್ಯಕ್ಷರಾಗಿದ್ದ ಕಾಲ ಅದು. ಪರಿಷತ್ತಿನ ಬೆಳ್ಳಿಯ ಹಬ್ಬಕ್ಕೆ ಮಹಾರಾಜರವರೇ ಅಧ್ಯಕ್ಷರು. 'ಸಂಭಾವನೆ' ಗ್ರಂಥಕ್ಕೆ ದಿವಾನ ಮಿರ್ಜಾ ಇಸ್ಮಾಯಿಲ್‌ರವರು ಕಳಿಸಿದ ಸಂದೇಶಕ್ಕೆ ಕನ್ನಡದಲ್ಲಿ ಸಹಿ ಮಾಡಿದರೆ, ಅಂದಿನ ನಮ್ಮ ದೃಷ್ಟಿಯಲ್ಲಿ ಅದೊಂದು ಮಹತ್ವದ ಸಂಗತಿ. ಬಿ. ಎಂ. ಶ್ರೀ. ಯುಗದ ಕನ್ನಡ ಚಳವಳಿಯ ಸ್ವರೂಪ ಇದು.

ದಿನ ಕಳೆದಂತೆ. ಕನ್ನಡದ ಕಾರ್ಯಕ್ಷೇತ್ರ ವಿಸ್ತಾರವಾಗುತ್ತಾ ಬಂದಿತು. ಚಲನಚಿತ್ರಗಳಲ್ಲಿ ಕನ್ನಡ ಮಾತಿಗೆ ಮುಖ ಸಿಕ್ಕಿತು, ಬಾಯಿ ತೆರೆಯಿತು. ಕನ್ನಡ ಚಿತ್ರಗಳ ಸಂಖ್ಯೆ ಬೆಳೆಯುತ್ತಿದ್ದರೂ ಅವುಗಳನ್ನು ಪ್ರದರ್ಶಿಸಲು ಬೆಂಗಳೂರಿನಲ್ಲಿ ಅವಕಾಶ ಸಾಲದಾಗಿತ್ತು. ಚಿತ್ರಮಂದಿರಗಳ ಒಡೆಯರು ಪರಭಾಷೆಯ ಜನ. ಕನ್ನಡ ಚಿತ್ರಗಳ ಅಭಿವೃದ್ಧಿಯಲ್ಲಿ ಅವರಿಗೆ ಆಸಕ್ತಿ ಇಲ್ಲ. ಈ ಸನ್ನಿವೇಶದಲ್ಲಿ ಅ.ನ.ಕೃ., ರಾಮಮೂರ್ತಿ, ತ.ರಾ.ಸು. ಮುಂತಾದವರು ಚಳವಳಿ ಹೂಡಲು ಬೀದಿಗಿಳಿದರು. 'ಅಕಡೆಮಿಕ್ ಸಾಹಿತಿಗಳು' ಬೀದಿಗಿಳಿಯುವುದು ತಮ್ಮ ಗೌರವಕ್ಕೆ ಕಡಮೆ ಎಂದು ಭಾವಿಸಿದ್ದರೋ, ಈ ಚಳವಳಿ ಅನಗತ್ಯ ಎಂದು ಎಣಿಸಿದ್ದರೋ. ಅಂತೂ ತೆಪ್ಪನಿದ್ದರು.

ವಿಶ್ವವಿದ್ಯಾನಿಲಯದಲ್ಲಿ ದ್ವಿತೀಯ ಭಾಷೆಯಾಗಿ ಕನ್ನಡದ ಬದಲು ಸಂಸ್ಕೃತವನ್ನೋ ಫ್ರೆಂಚನ್ನೋ ತೆಗೆದುಕೊಳ್ಳುತ್ತಿದ್ದರು ವಿದ್ಯಾರ್ಥಿಗಳು. ಇಂದಿನಂತೆ ಅಂದು ಕೂಡ ಉದಾರ ಅಂಕದಾನವೇ ವಿದ್ಯಾರ್ಥಿಗಳಿಗೆ ಒಡ್ಡಿದ್ದ ಪ್ರಲೋಭನೆ. ಸಂಸ್ಕೃತದವರ ಕಾರ್ಯನೀತಿಯಿಂದ ಕನ್ನಡಕ್ಕೆ ಆಗುತ್ತಿದ್ದ ತೊಂದರೆಯ ಬಗೆಗೆ ಬಿ. ಎಂ. ಶ್ರೀ. ಸೆನೆಟ್ ಸಭೆಯಲ್ಲಿ ಉಗ್ರವಾಗಿಯೇ ಹೋರಾಡಿದ್ದರು. ಈ ಪ್ರಸಂಗವನ್ನು ತೀ. ನಂ. ಶ್ರೀ. ತಮ್ಮ 'ಕಾವ್ಯಾನುಭವ' ಗ್ರಂಥದಲ್ಲಿ ಬಣ್ಣಿಸಿದ್ದಾರೆ. ಆಸಕ್ತರು ಓದಿ ನೋಡಬಹುದು.

ಅಂದು ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಉದ್ಭವಿಸಿದ್ದ ಪ್ರಶ್ನೆ ಇಂದು ಪ್ರೌಢ ಶಾಲಾ ವಿದ್ಯಾಭ್ಯಾಸ ಮಟ್ಟದಲ್ಲಿ ಪೆಡಂಭೂತವಾಗಿ ವಿಜೃಂಭಿಸಿ, ಬುದ್ಧಿಜೀವಿಗಳು ಕನ್ನಡ–ಕನ್ನಡಿಗರ ಹಿತರಕ್ಷಣೆಗಾಗಿ 'ಬೀದಿಗಿಳಿದು' ಶಾಂತಿ–ಅಹಿಂಸಾಪರವಾದ ಚಳವಳಿ ಹೂಡಬೇಕಾಯಿತು. ಬೀದಿಗಳಲ್ಲಿ ಮೌನ ಮೆರವಣಿಗೆ, ಧರಣಿ, ಸರದಿ ಉಪವಾಸ ಸತ್ಯಾಗ್ರಹ, ಇವೆಲ್ಲವೂ ಮಹಾತ್ಮ ಗಾಂಧಿಯವರ ಮಾರ್ಗದಲ್ಲಿ ನಡೆದಂಥವು. ಹಿಡಿಯಷ್ಟು ಬುದ್ಧಿಜೀವಿಗಳು ಪ್ರಾರಂಭಿಸಿದ ಚಳವಳಿ ಸಾಮಾನ್ಯ ಜನತಾ ಪ್ರತಿನಿಧಿಗಳಾದ ಅಭಿಮಾನಿಗಳ ಕೈಗೆ ಹೋದಾಗ, ಚಳವಳಿಗೆ ಪ್ರಜಾಪ್ರಾತಿನಿಧ್ಯದ ವ್ಯಾಪಕ ಸ್ವರೂಪ ಬಂದಾಗ, ಅನಿವಾರ್ಯವಾಗಿ ಅದಕ್ಕೆ ರಾಜಕೀಯ ಅಂಟಿಕೊಂಡಿತು. ಗೋಕಾಕ್ ಸಮಿತಿ ರಚನೆ; ಅವರ ವರದಿ; ಅದರ ಅಂಗೀಕಾರ; ಅದನ್ನು ಅನುಷ್ಠಾನಕ್ಕೆ ತರುವ ಸಂದರ್ಭದಲ್ಲಿ ರಾಜ್ಯಾಂಗಕ್ಕೆ ವಿರುದ್ಧ ಎಂಬ ಪ್ರಸ್ತಾಪ; ಸಂಸ್ಕೃತಾಭಿಮಾನಿಗಳಿಗೂ ಅಲ್ಪಸಂಖ್ಯಾತ ವರ್ಗಕ್ಕೂ ಅನ್ಯಾಯವಾಗಿದೆ ಎಂದು ಗೋಕಾಕ್ ವರದಿ ವಿರುದ್ಧ ನ್ಯಾಯಸ್ಥಾನಕ್ಕೆ ಮೊರೆ; ತಡೆಯಾಜ್ಞೆ; ವರದಿ ನೆನೆಗುದಿಗೆ ಬಿದ್ದಿರುವುದು; ಕನ್ನಡ ನಾಡಿನಲ್ಲಿಯ ಬ್ಯಾಂಕುಗಳಲ್ಲಿ ಕಾರ್ಖಾನೆಗಳಲ್ಲಿ ಕನ್ನಡಿಗರಿಗೆ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗ, ಇದಕ್ಕಾಗಿ ಚಳವಳಿ—ಹೀಗೆ, ಕನ್ನಡ ಪರವಾದ ಚಳವಳಿ ಸಮಗ್ರ ಕನ್ನಡಿಗರ ಚಳವಳಿಯಾಗಿ ಪರಿಣಮಿಸಿದೆ. ಚಳವಳಿಯ ಸ್ವರೂಪ ವ್ಯಾಪಕವಾಗಿ, ಸಂಕೀರ್ಣವಾಗತೊಡಗಿದೆ. ಕನ್ನಡ ಭಾಷೆ ಸಾಹಿತ್ಯ ಉಳಿಯಬೇಕಾದರೆ, ಬೆಳೆಯಬೇಕಾದರೆ, ಬುದ್ಧಿಜೀವಿಗಳ ವಿದ್ಯಾವಂತರ ಬೆಂಬಲ ಮಾತ್ರ ಇಂದು ಸಾಲದು. ಎಲ್ಲ ಕನ್ನಡಿಗರೂ ಎಚ್ಚೆತ್ತು, ಕನ್ನಡ ನಾಡಿನಲ್ಲಿ ನೆಲಸಿರುವ ಇತರ ಪ್ರಾಂತೀಯರೂ ಕನ್ನಡ ಕಲಿತು ಚ. ವಾಸುದೇವಯ್ಯ, ವೆಂಕಣ್ಣಯ್ಯ, ಮಾಸ್ತಿ, ರಾಜರತ್ನಂ, ಎಂ.ಆರ್.ಶ್ರೀ., ನಿಸ್ಸಾರ್, ಮುಂತಾದವರಂತೆ ಮಹಾಸಾಹಿತಿಗಳಾಗದಿದ್ದರೂ ಕನ್ನಡಕ್ಕೆ ಕಾಲ್ತೊಡಕಾಗದೆ ಉರ್ದು–ಕನ್ನಡಿಗ, ತಮಿಳು–ಕನ್ನಡಿಗ, ಮಲಯಾಳಿ–ಕನ್ನಡಿಗರಾದಾಗಲೇ ಕನ್ನಡ ಉಳಿಯುತ್ತದೆ, ಬೆಳೆಯುತ್ತದೆ. ಈ ಪರಿಸ್ಥಿತಿ ಏರ್ಪಡುವುದಕ್ಕೆ ಸಹಾಯಕವಾಗುವಂಥ ಶಾಂತಮಾರ್ಗದ ಚಳವಳಿ ಮುಂದುವರಿಯಬೇಕಾಗುತ್ತದೆ. ಕನ್ನಡಕ್ಕೆ ಏನೂ ಭಯವಿಲ್ಲ, ಕನ್ನಡ ಸಾಹಿತ್ಯ ಸುಭದ್ರವಾಗಿದೆ ಎನ್ನುವ all is right with Kannada ಎಂಬ ಸ್ವಸಂತುಷ್ಟ ಧೋರಣೆ ಖಂಡಿತ ಸಲ್ಲದು.

—ಎಂ. ವಿ. ಸೀ.

ಸ್ಮಾರಕ ಭವನ ನಿರ್ಮಾಣ : 'ಶ್ರೀ ಭವನ'

ಶ್ರೀ ಲಕ್ಷ್ಮೀಪತಿ ಎಂಬವರು ನಗರದ ದಿನಪತ್ರಿಕೆಯೊಂದರಲ್ಲಿ ರಾಜ್ಯಸರ್ಕಾರದ ನೆರವಿನಿಂದ 'ಪಿಟೀಲ್ ಚೌಡಯ್ಯ ಸ್ಮಾರಕ ಭವನ' ನಿರ್ಮಾಣವಾಗಿರುವುದನ್ನು ಉಲ್ಲೇಖಿಸಿ, 'ಬಸವ ಭವನ' ರೂಪಗೊಂಡಿರುವುದನ್ನು ವಾಚಕರ ಗಮನಕ್ಕೆ ತಂದು, ಬೆಂಗಳೂರು ನಗರ ನಿರ್ಮಾಪಕರಾದ ಕೆಂಪೇಗೌಡರ ಹೆಸರಿನಲ್ಲಿ ಸ್ಮಾರಕ ಭವನ ನಿರ್ಮಾಣವಾಗಬೇಕೆಂದು ಸೂಚಿಸಿದ್ದಾರೆ. ಈ ಸೂಚನೆ ಸ್ವಾಗತಾರ್ಹ.

ಇದೇ ವರ್ಷ ಬಿ. ಎಂ. ಶ್ರೀ.ಯವರ, ಕೈಲಾಸಂ ಅವರ ಜನ್ಮಶತಾಬ್ದಗಳು ಜರುಗುತ್ತಿವೆ. 'ಶ್ರೀ'ಯವರ ಜನ್ಮಶತಾಬ್ದವು ಇದೇ ವರ್ಷದ ಜನವರಿ 3ರಂದು ಬೆಳ್ಳೂರಿನಲ್ಲಿ ನಡೆದು, ಸ್ಥಳದ ಉತ್ಸವ ಸ್ವಾಗತ ಸಮಿತಿ 'ಶ್ರೀ'ಯವರ ಪೂರ್ವಜರಿಗೆ ಸೇರಿದ್ದ ನಿವೇಶನವನ್ನು ಕೊಂಡಿದ್ದು, 'ಶ್ರೀ ಭವನ' ನಿರ್ಮಾಣಕ್ಕೆ ವ್ಯವಸ್ಥೆ ಮಾಡು ತ್ತಿದೆ. ಅಂದು ಮಾನ್ಯ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆ ಅವರ ಸ್ಥಾನದಲ್ಲಿ ಉತ್ಸವವನ್ನು ಉದ್ಘಾಟನೆ ಮಾಡಿದ ಮಾನ್ಯ ಶ್ರೀ ಎಂ. ಚಂದ್ರಶೇಖರ್ ಅವರು (ನಗರಾಭಿವೃದ್ಧಿ ಸಚಿವರು) ಭವನ ನಿರ್ಮಾಣಕ್ಕೆ ಸರ್ಕಾರದ ಸಹಾಯ ದೊರಕಿಸಿ ಕೊಡುವುದಾಗಿಯೂ ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನವು ಬೆಂಗಳೂರಿನಲ್ಲಿ ನಿರ್ಮಿಸಲಿರುವ 'ಶ್ರೀ ಭವನ'ಕ್ಕೆ ನಿವೇಶನವನ್ನೂ ಅಗತ್ಯವಾದ ಸಹಾಯವನ್ನೂ ದೊರಕಿಸಿಕೊಡುವುದಾಗಿ ಭರವಸೆ ನೀಡಿದರು. ವಾರ್ಷಿಕ ಅನುದಾನಕ್ಕಾಗಿಯೂ ಭವನ ನಿರ್ಮಾಣಕ್ಕೆ ಸಹಾಯಧನಕ್ಕಾಗಿಯೂ ಪ್ರತಿಷ್ಠಾನ ಸಲ್ಲಿಸಿದ ಮನವಿಗಳನ್ನು ರಾಜ್ಯಸರ್ಕಾರ ಮತ್ತೆ ಪರಿಶೀಲಿಸಿ ಸೂಕ್ತ ಸಹಾಯವನ್ನು ನೀಡುತ್ತದೆಂದು ನಾವು ನಿರೀಕ್ಷಿಸುತ್ತೇವೆ.

ಇದೇ ಸಂದರ್ಭದಲ್ಲಿ, ಕೋಲಾರ ಚಿನ್ನದ ಗಣಿ ಪ್ರದೇಶದ "ಕನ್ನಡ ಮಿತ್ರರು" ಎಂಬ ಕನ್ನಡಾಭಿಮಾನಿಗಳ ಸಂಘವು ಸ್ವಪ್ರಯತ್ನದಿಂದ ಬೆಮೆಲ್ ನಗರದ ವಿಜಯ ನಗರ ಬಡಾವಣೆಯಲ್ಲಿ ಬಿ. ಎಂ. ಶ್ರೀ. ಭವನವನ್ನು ನಿರ್ಮಿಸಿರುವುದನ್ನು ಕನ್ನಡಿಗ ರೆಲ್ಲರೂ ಅಭಿನಂದಿಸಬೇಕಾಗಿದೆ.

ಮೈಸೂರು, ಬೆಂಗಳೂರು, ಧಾರವಾಡ — ಈ ಮೂರು ನಗರಗಳೂ ಬಿ. ಎಂ. ಶ್ರೀ.ಯವರ ಕಾರ್ಯಕ್ಷೇತ್ರಗಳು. ಸದ್ಯಕ್ಕೆ ಈ ಮೂರು ನಗರಗಳಲ್ಲಿಯೂ 'ಶ್ರೀ ಭವನ' ನಿರ್ಮಾಣವಾಗಬೇಕಾದ್ದು ಸೂಕ್ತ. ಈ ಹಿಂದೆ, ಧಾರವಾಡದ ವಿದ್ಯಾವರ್ಧಕ ಸಂಘ ನಿರ್ಮಾಣಕ್ಕೆ ಅಂದಿನ ಮೈಸೂರು ಮಹಾರಾಜರೂ, ಸರ್ಕಾರವೂ ಧನಸಹಾಯ ನೀಡಿದೆ. ಕನ್ನಡ ಸಾಹಿತ್ಯ ಪರಿಷತ್ತಿಗೆ ಈಚೆಗೆ ಕೂಡ ಸ್ವರ್ಣಮಹೋತ್ಸವ, ವಜ್ರಮಹೋತ್ಸವಗಳ ನೆನಪಿಗಾಗಿ ರಾಜ್ಯಸರ್ಕಾರ ಉದಾರ ವಾಗಿ ಸಹಾಯ ನೀಡಿದೆ.

ಪ್ರತಿಷ್ಠಾನ ನಿರ್ಮಿಸಬೇಕೆಂದಿರುವ ಕಟ್ಟಡಕ್ಕೆ ಅದರ ಸದಸ್ಯರೂ ಬಿ.ಎಂ.ಶ್ರೀ. ಹಾಗೂ ಕನ್ನಡದ ಅಭಿಮಾನಿಗಳೂ ಉದಾರವಾಗಿ ಸಹಾಯ ಮಾಡುವರೆಂದು ನಂಬಿದ್ದೇವೆ; ಸಹಾಯ ಮಾಡಬೇಕೆಂದು ಪ್ರತಿಷ್ಠಾನ ಮನವಿ ಮಾಡಿಕೊಳ್ಳುತ್ತದೆ. ಪ್ರತಿಯೊಬ್ಬ ಕನ್ನಡಿಗನೂ ಒಂದೊಂದು ರೂಪಾಯಿ ಕೊಟ್ಟರೂ ಲಕ್ಷಾಂತರ ರೂಪಾಯಿ ಸಂಗ್ರಹವಾಗುತ್ತದೆ. ಧನಸಂಗ್ರಹ ಕಾರ್ಯಕ್ಕೆ ಕ್ರಿಯಾಶೀಲವಾಗಿ ಪ್ರಯತ್ನಿಸುತ್ತಲೂ ಇದೆ. ರಾಜ್ಯಸರ್ಕಾರವೂ ಪ್ರತಿಷ್ಠಾನದ ಘನವಾದ ಉದ್ದೇಶದ ಪೂರೈಕೆಯಲ್ಲಿ ಕೈಗೂಡಿಸಿ, ಕನ್ನಡಿಗರ ಕೃತಜ್ಞತೆಗೆ ಪಾತ್ರವಾಗಬೇಕೆಂದು ಕೇಳಿಕೊಳ್ಳುತ್ತೇವೆ. ಕಾರಣ, ಶ್ರೀಯವರು ನಾಡು ನುಡಿಗಳಿಗೆ ಸಲ್ಲಿಸಿದ ಸೇವೆ ಅನುಪಮ, ಅಭೂತಪೂರ್ವ, ಅನನುಕರಣೀಯ.

ಅಂತೆಯೇ, ಈಗ ಬೆಂಗಳೂರಿನಲ್ಲಿ ಹಂಗಾಮಿಯಾಗಿ ನಿರ್ಮಿತವಾಗಿದ್ದ ಕೈಲಾಸಂ ಕಲಾಕ್ಷೇತ್ರದ ನಿವೇಶನದಲ್ಲಿ ಕೈಲಾಸಂ ಸ್ಮಾರಕ ಭವನವನ್ನೂ ರಾಜ್ಯಸರ್ಕಾರ ಕೈಲಾಸಂ ಜನ್ಮಶತಾಬ್ದಿ ವರ್ಷದಲ್ಲಿ ನಿರ್ಮಿಸಬೇಕೆಂದು ಪ್ರತಿಷ್ಠಾನ ಬಯಸುತ್ತದೆ. ಬಿ. ಎಂ. ಶ್ರೀ.ಯವರೂ ಕೈಲಾಸಂ ಅವರೂ ಕೆಲಕಾಲವಾದರೂ ಸಹವಾಸಿಗಳಾಗಿದ್ದು, ಸ್ನೇಹಿತರಾಗಿದ್ದರೆಂಬುದನ್ನು ಬಹು ಜನ ಅರಿಯರು.

○ ○ ○

ಕನ್ನಡ ಪಾಂಡಿತ್ಯಕ್ಕೆ ಕೊಡಲಿ ಪೆಟ್ಟು

ಪ್ರೌಢಶಾಲೆಗಳಲ್ಲಿ ಕನ್ನಡ ಪಾಠ ಹೇಳುವುದಕ್ಕಾಗಿ ಕನ್ನಡ ಪಂಡಿತರನ್ನು ಎಂದಿನಿಂದಲೂ ನೇಮಿಸುವುದು ಒಂದು ಅಗತ್ಯವಾದ ಕನ್ನಡ ಶಿಕ್ಷಣ ಕಾರ್ಯದ ಕಾರ್ಯನೀತಿಯಾಗಿ ನಡೆದುಬಂದಿತ್ತು. ಈಚಿನ ದಿನಗಳಲ್ಲಿ, ಪಂಡಿತರ ಸ್ಥಾನದಲ್ಲಿ ಇಲ್ಲವೆ ಪಂಡಿತರ ಜೊತೆಗೆ ಬಿ.ಎ. ತರಗತಿಯಲ್ಲಿ ಕನ್ನಡವನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡು ಬಿ.ಎ. ಪದವಿ ಪಡೆದವರನ್ನು ಕನ್ನಡ ಪಾಠ ಹೇಳುವ ಕೆಲಸಕ್ಕೆ ನೇಮಿಸಿಕೊಳ್ಳುವ ಪದ್ಧತಿ ಕ್ರಮವಾಗಿ ಜಾರಿಗೆ ಬಂದು, ಕನ್ನಡ ಪಂಡಿತ ಪರೀಕ್ಷೆ ಮಾಡಿದವರ ಸ್ಥಾನಮಾನ ಕುಸಿಯುವುದರ ಜೊತೆಗೆ ಅವರಿಗೆ ಉತ್ತೇಜನವೂ ಕಡಮೆಯಾಗತೊಡಗಿತು. ಕಾಲೇಜಿನ ಮಟ್ಟದಲ್ಲೂ ಕನ್ನಡ ಪಾಠಕ್ಕೆ ಪಂಡಿತರನ್ನು ನೇಮಿಸಿಕೊಳ್ಳಲಾಗುತ್ತಿತ್ತು. ಆಗಿನ ದಿನಗಳಲ್ಲಿ ಅತ್ಯಂತ ಸಮರ್ಥ ಬೋಧಕರೆಂದು ಹೆಸರು ಪಡೆದಿದ್ದ ಕಾಸಕಾಸಹಳ್ಳಿ ವರದಾಚಾರ್ಯರು ಬಿ.ಎಂ.ಶ್ರೀ.ಯವರ ಗುರುಗಳು ಎನ್ನುವುದನ್ನು ಇಲ್ಲಿ ಉಲ್ಲೇಖಿಸಬಹುದು. ತೀ.ನಂ.ಶ್ರೀ. ಅವರ, ಡಿ.ಎಲ್. ಎನ್. ಅವರ ಗುರುಗಳೂ ಆಗಿದ್ದರು ವರದಾಚಾರ್ಯರು. ತೀ.ನಂ.ಶ್ರೀ. 'ವೈಯಾಕರಣನ ಶಯ್ಯೆಯ ಬಳಿ' ಎಂಬ ಕವನದ ಮೂಲಕ ತಮ್ಮ ಗುರುಭಕ್ತಿಯನ್ನು ಪ್ರಕಟಿಸಿದ್ದಾರೆ. ರಾಜರತ್ನಂ ಮೊದಲಾದ ಅನೇಕ ಇಂದಿನ ಪ್ರಸಿದ್ಧ ಸಾಹಿತಿಗಳಿಗೆ ಆಸ್ಥಾನ ವಿದ್ವಾನ್ ಎಂ. ಆರ್. ವರದಾಚಾರ್ಯರು, ದಿವಂಗತ ಟಿ. ಎಸ್. ಸುಬ್ಬರಾಯ ಶಾಸ್ತ್ರಿಗಳು

ಕಾಲೇಜು ಮಟ್ಟದ ಶಿಕ್ಷಕರಾಗಿದ್ದರು. ಈ ಸಂದರ್ಭದಲ್ಲಿ ಪಂಡಿತ ಪಿ.ಆರ್. ಕರಿಬಸವ ಶಾಸ್ತ್ರಿಗಳು, ಪಂಡಿತ ಮುಳಿಯ ತಿಮ್ಮಪ್ಪಯ್ಯ, ಪಂಡಿತ ಎಂ.ಪಿ. ಪೂಜಾರ, ಎಚ್. ಚೆನ್ನಕೇಶವ ಅಯ್ಯಂಗಾರ್ ಮುಂತಾದವರು ಕರ್ನಾಟಕದ ಅನೇಕ ಬರಹಗಾರರಿಗೆ ಬೋಧಕರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಪಂಪರಾಮಾಯಣ, ಪಂಪಭಾರತ, ಶಬ್ದಮಣಿದರ್ಪಣ ಇವುಗಳನ್ನು ಸಂಪಾದಿಸಿರುವ ಬೆಳ್ಳಾವೆ ವೆಂಕಟ ನಾರಾಯಣಪ್ಪನವರಿಗೆ ತೋಗೆರೆ ನಂಜುಂಡಶಾಸ್ತ್ರಿಗಳು, ಕಡಬದ ನಂಜುಂಡಶಾಸ್ತ್ರಿಗಳು ನೆರವುನೀಡದೆ ಹೋಗಿದ್ದರೆ ಅವು ಪಾಂಡಿತ್ಯಪೂರ್ಣವಾಗಿ ಹೊರಬರುವುದು ಸಾಧ್ಯವಾಗುತ್ತಿರಲಿಲ್ಲ. ಮದರಾಸು ವಿ.ವಿ.ನಿಲಯದಲ್ಲಿ ಬೋಧಕರಾಗಿದ್ದ ದೇವಶಿಖಾಮಣಿ ಅಳಸಿಂಗರಾಚಾರ್ಯರು, ಎಚ್. ಶೇಷ ಅಯ್ಯಂಗಾರ್ಯರು ಮಂಗಳೂರು ಪ್ರಾಂತ್ಯದ ಬಹುಮಂದಿ ವಿದ್ವಾಂಸರ ಪಾಂಡಿತ್ಯಕ್ಕೆ ಕಾರಣಭೂತರು. ಇಂಥ ಪಂಡಿತೋತ್ತಮರ ಕೈಲಿ ಶಿಕ್ಷಣ ಪಡೆದಿದ್ದರಿಂದಲೇ ಡಿ.ಎಲ್.ಎನ್., ತೀ.ನಂ.ಶ್ರೀ, ರಾಜರತ್ನಂ, ಕ.ವೆಂ.ರಾಘವಾಚಾರ್, ಎನ್. ಅನಂತರಂಗಾಚಾರ್, ಕೆ. ವೆಂಕಟರಾಮಪ್ಪ, ಎಂ.ವಿ.ಸೀ., ಜಿ. ವೆಂಕಟಸುಬ್ಬಯ್ಯ, ರಂ. ಶ್ರೀ. ಮುಗಳಿ, ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟ, ಮುಂತಾದವರು ಆಧುನಿಕರಾದರೂ ಸಮರ್ಥ ಬೋಧಕರಾಗಲು ಸಾಧ್ಯವಾಯಿತು. ಇದರಿಂದ, ಇಂದಿನ ಅನೇಕ ಕನ್ನಡ ಬೋಧಕರು ಸಮರ್ಥಬೋಧಕರಲ್ಲವೆಂದು ಅರ್ಥವಲ್ಲ. ಅವರಿಗೆ ಕನ್ನಡ ಪಾಂಡಿತ್ಯದ ಭದ್ರವಾದ ನೆಲಗಟ್ಟು ಸಾಲದು ಎಂದಷ್ಟೇ ಆಶಯ.

ನಮ್ಮ ಪ್ರಾಚೀನ ಕವಿಗಳೆಲ್ಲರೂ ಪ್ರಾಯಿಕವಾಗಿ ಉಭಯ ಭಾಷಾ ಪಂಡಿತರು. ಉಭಯ (ಸಂಸ್ಕೃತ–ಕನ್ನಡ) ಕವಿಗಳು, ಉಭಯ ವ್ಯಾಕರಣ ಮನೀಷಿಗಳು. ಇವರ ಕಾವ್ಯಗಳನ್ನು ಸಮರ್ಥವಾಗಿ ಪಾಠ ಹೇಳಬೇಕಾದರೆ, ಆ ಕವಿಗಳಿಗೆ ನ್ಯಾಯ ಸಲ್ಲಿಸಬೇಕಾದರೆ, ಭಾರತೀಯ ಕಾವ್ಯಮೀಮಾಂಸೆ (ಅಲಂಕಾರ ಶಾಸ್ತ್ರ), ಛಂದಸ್ ಶಾಸ್ತ್ರ, ಹಳಗನ್ನಡ ವ್ಯಾಕರಣ, ತಕ್ಕಮಟ್ಟಿಗೆ ಸಂಸ್ಕೃತ ಭಾಷೆಯ – ವಾಙ್ಮಯದ ಪರಿಚಯ ಅಗತ್ಯ. ಕನ್ನಡ ಪಂಡಿತರಿಗೆ ಈ ಶಾಸ್ತ್ರಗಳಲ್ಲಿ ಮೂಲಭೂತ ಶಿಕ್ಷಣದ ವ್ಯವಸ್ಥೆಯನ್ನು ಕನ್ನಡ ಪಂಡಿತವರ್ಗ ಶಿಕ್ಷಣಕ್ರಮದಲ್ಲಿ ಅಳವಡಿಸಲಾಗಿತ್ತು. ಪಂಡಿತರುಗಳು ಪೌಢಶಾಲೆಯ ವಿದ್ಯಾರ್ಥಿಗಳಿಗೆ ಶ್ರದ್ಧೆಯಿಂದ, ನಿಷ್ಠೆಯಿಂದ ಪಾಠ ಹೇಳಿದ್ದೇ ಆದರೆ, ಕಾಲೇಜು ಮಟ್ಟದಲ್ಲಿ ಕಾವ್ಯವ್ಯಾಸಂಗಕ್ಕೆ ಅಗತ್ಯವಾದ ಬುನಾದಿ ಏರ್ಪಡುವುದು. ಅಗತ್ಯವೆನಿಸಿದರೆ, ಆಧುನಿಕ ಕಾಲಕ್ಕೆ ತಕ್ಕಂತೆ ಪಂಡಿತಪರೀಕ್ಷೆಯ ಪಠ್ಯಪ್ರಣಾಳಿಕೆಯನ್ನು ಅಳವಡಿಸಲಿ. ಆದರೆ, ಈಗ ನಮ್ಮ ರಾಜ್ಯಸರ್ಕಾರ ಕನ್ನಡ ಪಂಡಿತರನ್ನು ಇನ್ನುಮುಂದೆ ಪ್ರೌಢಶಾಲೆಗಳಿಗೆ ನೇಮಿಸಿಕೊಳ್ಳುವುದಿಲ್ಲ ಎಂಬ ಆಜ್ಞೆ ಹೊರಡಿಸಿರುವುದು ದುರದೃಷ್ಟಕರ. ಈಗಾಗಲೇ ಪಂಡಿತ ಪರೀಕ್ಷೆ ಮಾಡಿರುವವರ ಉದ್ಯೋಗದ ಪ್ರಶ್ನೆ ಒತ್ತಟ್ಟಿಗಿರಲಿ. ಸರಕಾರದ ಆಜ್ಞೆ ಕನ್ನಡ ಪಾಂಡಿತ್ಯಕ್ಕೇ ಕೊಟ್ಟ ದೊಡ್ಡ ಕೊಡಲಿಪೆಟ್ಟು ಎಂದು ಅತ್ಯಂತ ವಿಷಾದದಿಂದ ಹೇಳಬೇಕಾಗಿದೆ. ಸರಕಾರ ಈ ಆಜ್ಞೆಯನ್ನು ಕೂಡಲೆ ರದ್ದುಪಡಿಸಬೇಕು.

ಕನ್ನಡ ಸಂಶೋಧನೆ:

Kannada research: Address to R. Narasimhachar

The Karnataka Sahitya Parishat (Kannada Academy) presented last Saturday evening an address to Prakthana Vimarsha Vichakshana Rao Bahadur R. Narasimhachar, M.A. M.R.A. S., retired Director of Archaeology in Mysore, on his being the recipient of the title of 'Mahamahopadhyaya' from the Government of India. Mr. S. P. Rajagopalachari, Member of Council, presided on the occasion.

After invocation and veena music by Mrs. Rajamma, Mr. D. V. Gundappa, Vice-President of the Parishat, referred to the history and the aims of the Parishat which were to create a new life and spirit in Kannada literature and in that new light to make the life of the Kannada country more beautiful. Mr. R. Narasimhachar was one of the founders of the Parishat and had lent it the support of his name and fame. He was one of the earliest workers in the field of Kannada literature in recent times and the title bestowed on him was very apt. Mr. Gundappa then read letters from Rajakaryaprasakta Rao Bahadur M. Shama Rao and Mr. Benegal Rama Rao of Madras regretting their inability to be present at the function and wishing it every success.

Mr. M. Venkatesa Iyengar then read the address which referred to the work carried on by Mr. Narasimhachar for the past 50 years in the field of Kannada literature and his researches in archaeology

and history of Kannada literature, his profound scholarship not only in Kannada but also in Tamil and Sanskrit and his great qualities of head and heart.

Mr. R. Narasimhachar, replying to the address thanked the organisers of the function for the honour done to him. He said he had been able to do one or two things in his time but he felt that he did not deserve all this praise. He then referred to some of the items of research work carried on by him. Some European archaeologists held that the existence of the "Ganga Vamsa", was a myth. The speaker was able to prove from some coins and inscriptions the existence of this dynasty and one of the famous kings of this dynasty was one "Durvineetha" who was the author of the first translation into Sanskrit of "Brihathkatha". He had also proved that there was a system of coinage during the time of the Hoysala kings and also the ability of the Karnataka architects in certain directions. He was also the first to unearth some Sanskrit dramas of Bhasa Kavi. There was the work of "Kavicharitra" begun by him and this was a work to be continued by the younger generation. Nobody could say the last word on this subject.

Mr. S. P. Rajagopalachari, the President, said that he considered that Mr. Narasimhachar's greatest claim to the lasting gratitude of the Kannada country was in bringing to light the greatness of the Hoysala temple architecture. His books on the three great temples of Halebid, Belur and Somanathapur were regarded as works of very great interest and if to-day they were justly proud of these ancient monuments of

civilisation it was due to Mr. Narasimhachar's scholarly work. The speaker also referred to the good work turned out by the Parishat and called upon the public to help the Parishat in its work.

The guest of the day and the president were garlanded and the function came to a close with a vote of thanks and distribution of flowers.

[3–4–1934ರಂದು ಹಿಂದೂ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ವರದಿ ;
3–4–1984ರಂದು ಪುನಃ ಪ್ರಕಟಿತ.]

ಗ್ರಂಥವಿಮರ್ಶೆ

ಸೂತಭಾರತ ಅಥವಾ ಸ್ವರ್ಗಾರೋಹಣ ಪರ್ವ*

ವ್ಯಾಸಭಾರತದ ಮಹಾಪ್ರಸ್ಥಾನಪರ್ವ ಮತ್ತು ಸ್ವರ್ಗಾರೋಹಣಪರ್ವದ ಕಥಾಂಶವನ್ನು ಭಾಮಿನೀಷಟ್ಪದಿಗಳಲ್ಲಿ ವರ್ಣಿಸಲಾಗಿದೆ. ಕೃತಿಯ ಕೊನೆಯಲ್ಲಿ 'ಸೂತಭಾರತ ಸಮಾಪ್ತ' ಎಂದು ಬರೆದಿರುವ ಕಾರಣ ಈ ಹೆಸರನ್ನಿಡಲಾಗಿದೆ. ಶ್ರೀಯುತರಾದ ಡಾ॥ ಶ್ರೀಕೃಷ್ಣಭಟ್ ಅರ್ತಿಕಜೆ ಮತ್ತು ಎಂ. ಜಿ. ಹೆಗಡೆ ಹಲಸಿಗೆ–ಅವರು ಜೊತೆಗೂಡಿ ತಮಗೆ ದೊರಕಿದ ಏಕೈಕ ಹಸ್ತಪ್ರತಿಯ ಆಧಾರದಿಂದ, ತುಂಬ ಶ್ರಮವಹಿಸಿ ಇದನ್ನು ಸಂಪಾದಿಸಿದ್ದಾರೆ. ವಿಸ್ತಾರವಾದ ಪೀಠಿಕೆಯನ್ನು ಬರೆದು ಉಪಯುಕ್ತವಾದ ಶಬ್ದಕೋಶವನ್ನೂ ಸೇರಿಸಿದ್ದಾರೆ. ಪ್ರಧಾನ ಸಂಪಾದಕರಾದ ಪ್ರೊ॥ ಎಂ. ವಿ. ಸೀತಾರಾಮಯ್ಯನವರು ಇದನ್ನು ಸಂಸ್ಕರಿಸಿ ಬಿ. ಎಂ. ಶ್ರೀ. ಪ್ರತಿಷ್ಠಾನದ ಪರವಾಗಿ ಪ್ರಕಟಿಸಿದ್ದಾರೆ.

ಕೃತಿಯನ್ನು ರಚಿಸಿದ ಕವಿಯ ಹೆಸರು ತಿಳಿದುಬಂದಿಲ್ಲ. ಕವಿಯು ಸುಮಾರು ಹದಿನೇಳು ಅಥವಾ ಹದಿನೆಂಟನೆಯ ಶತಕದಲ್ಲಿದ್ದಿರಬೇಕು ಎಂದು ಸಂಪಾದಕರು ತಮ್ಮ ಪೀಠಿಕೆಯಲ್ಲಿ ಸಕಾರಣವಾಗಿ ನಿರೂಪಿಸಿದ್ದಾರೆ.. ಸೂತಭಾರತ ಎಂಬ ಕಾವ್ಯನಾಮವನ್ನು ಕುರಿತು ಸಂಪಾದಕರು ಎರಡು ಊಹೆಗಳನ್ನು ಮುಂದಿಟ್ಟಿದ್ದಾರೆ.

೧. ರೋಮಹರ್ಷಣನೆಂಬ ಮಹರ್ಷಿಗೆ ಸೂತ ಎಂಬ ಹೆಸರು ಪ್ರಸಿದ್ಧವಾಗಿತ್ತು. ಪುರಾಣಗಳನ್ನು ಪ್ರವಚನ ಮಾಡುತ್ತಿದ್ದ ಈತ ಮಹಾಭಾರತವನ್ನೂ ಹೇಳುತ್ತಿದ್ದುದರಿಂದ ಅದಕ್ಕೆ 'ಸೂತಭಾರತ' ಎಂಬ ಹೆಸರು ಬಂದಿದ್ದಿರಬಹುದು. ಅದರ ಕಥಾಂಶವನ್ನು ಒಳಗೊಂಡ ಈ ಕಾವ್ಯಕ್ಕೆ ಸೂತಭಾರತ ಎಂಬ ಹೆಸರು ಬಂದಿರಬಹುದು.

೨. ಸೂತಶಬ್ದಕ್ಕೆ ಕಿಟೆಲ್‌ಕೋಶದಲ್ಲಿ Despatched, Departed ಎಂದು ಅರ್ಥವಿದೆ. ಈ ಆಂಗ್ಲ ಶಬ್ದಗಳಿಗೆ ಕ್ರಮವಾಗಿ ಯಮಲೋಕಕ್ಕೆ ಕಳುಹಿಸು. ಮರಣಹೊಂದು ಎಂಬ ಅರ್ಥಗಳಿವೆ. ಈ ಸ್ವರ್ಗಾರೋಹಣಪರ್ವದ ಕಥೆಯಲ್ಲಿ 'ಅಗಲುವ ಹಾಗು ಮರಣ ಹೊಂದಿ ಸ್ವರ್ಗವನ್ನು ಸೇರುವ ಕಥೆಯಿರುವುದರಿಂದಲೇ ಕವಿ ಈ ಕಾವ್ಯವನ್ನು 'ಸೂತಭಾರತ' ಎಂಬುದಾಗಿ ಕರೆದಿರಬೇಕೆಂಬುದು ಹೆಚ್ಚು ಸಮಂಜಸವಾಗುತ್ತದೆ.'

---

* ಪ್ರಧಾನ ಸಂಪಾದಕರು : ಎಂ. ವಿ. ಸೀತಾರಾಮಯ್ಯ ; ಸಂಪಾದಕರು : ಡಾ॥ ಶ್ರೀಕೃಷ್ಣ ಭಟ್ ಅರ್ತಿಕಜೆ, ಎಂ. ಜಿ. ಹೆಗಡೆ ಹಲಸಿಗೆ ; ಪ್ರಕಾಶಕರು : ಬಿ. ಎಂ. ಶ್ರೀ. ಪ್ರತಿಷ್ಠಾನ (ರಿ.), ಬೆಂಗಳೂರು–19 ; ಪುಟ : 36 + 151 ; ಬೆಲೆ : ರೂ. ೧೫–೦೦.

ಮಹಾಭಾರತವನ್ನು ಹೇಳಿದವನು ರೋಮಹರ್ಷಣನ ಮಗ ಉಗ್ರಶ್ರವ ಎಂಬವನು; ರೋಮಹರ್ಷಣನಲ್ಲ. ಉಗ್ರಶ್ರವನು ಸೌತಿ. ಮಹಾಭಾರತದ ಆದಿಯಲ್ಲೇ 'ರೌಮಹರ್ಷಣಿರುಗ್ರಶ್ರವಾಃ ಸೌತಿಃ ಪೌರಾಣಿಕಃ' ಎಂದು ಪ್ರಾರಂಭ ವಾಗುತ್ತದೆ. ಈತನೂ ಸೂತಜಾತಿಯವನಾದ್ದರಿಂದ 'ಸೂತ' ಎಂಬ ವ್ಯವಹಾರವೂ ಉಂಟು.

ಎರಡನೆಯ ಊಹೆ ಪೋಜಿಸದು. ಸೂತಶಬ್ದಕ್ಕೆ ಅಗಲು ಎಂದಾಗಲಿ, ಮರಣಹೊಂದು—ಎಂದಾಗಲಿ ಅರ್ಥವೆಲ್ಲಾದರೂ ಇದೆಯೆ? ಪಾರ್ಥ ಎಂದರೆ ಅರ್ಜುನ. ಅರ್ಜುನ ಶಬ್ದಕ್ಕೆ ಕೋಶದಲ್ಲಿ 'ಮತ್ತಿಮರ' ಎಂದೂ ಅರ್ಥ ಉಂಟು. ಆದ್ದರಿಂದ ಪಾರ್ಥ ಎಂದರೆ ಮತ್ತಿಮರ ಎಂದು ಅರ್ಥ ಮಾಡಬಹುದೆ?

ಸ್ವರ್ಗಾರೋಹಣಪರ್ವ ಎನ್ನುವುದು ದೊಡ್ಡ ಹೆಸರಾಯಿತು. ಭಾರತದ ಎಲ್ಲ ಕಥೆ ಬಂದಿಲ್ಲವಾದ್ದರಿಂದ ಭಾರತವೆನ್ನಲಾಗುವುದಿಲ್ಲ. ಸೂತನು ಹೇಳಿದ ಕಥಾಂಶ ವಾದ್ದರಿಂದ 'ಸೂತಭಾರತ' ಎಂದಿರಬಹುದು. ಸಂಪಾದಕರ ಮೊದಲನೆಯ ಊಹೆ ಹೆಚ್ಚು ಸಮಂಜಸವೆನಿಸುತ್ತದೆ.

ಈ ಕಾವ್ಯದಲ್ಲಿ ಹದಿನಾಲ್ಕು ಸಂಧಿಗಳಿವೆ. ಹನ್ನೆರಡು ಸಂಧಿಗಳಿಗೆ ಸ್ವರ್ಗಾ ರೋಹಣದ ಕಥೆ ಕ್ರಮವಾಗಿ ಮುಗಿಯುತ್ತದೆ. ೧೩ನೆಯ ಸಂಧಿಯಲ್ಲಿ ಒಂದು ವಿಚಿತ್ರವಾದ ಕಥೆ ಇದೆ—

ಕೃಷ್ಣನ ಆದೇಶದಂತೆ ಅವನ ಮಗಳಾದ ಸುಲೋಚನೆ ಅಭಿಮನ್ಯುವನ್ನು ನೋಡುತ್ತಾಳೆ. ನೋಡಿದ ಮಾತ್ರದಿಂದ ಅವಳು ದೃಷ್ಟಿಗರ್ಭವನ್ನು ಧರಿಸುತ್ತಾಳೆ. ಅನಂತರ ತಂದೆಯ ಆಜ್ಞೆಯಂತೆ ಒಂದು ಕೊಳದಲ್ಲಿ ಮುಳುಗಲು ಅವಳ ಗರ್ಭಸ್ರಾವ ವಾಗಿ ಹಲವು—ಬಹುಶಃ ಇಬ್ಬರು—ಮಕ್ಕಳು ಜನಿಸುತ್ತಾರೆ. ಅವರೇ ಋಕ್ಕಿಯರು. ಕೃಷ್ಣನು ಅವರಿಗೆ "ನೀವು ಲೋಕದ ನಾರಿಯರನ್ನು ಕಾಡುತ್ತ ನೀರಿನಲ್ಲಿ ವಾಸವಾಗಿರಿ. ಆದರೆ ಪಾಂಡವರ ಚರಿತ್ರೆಯನ್ನು ಯಾರು ಕೇಳುತ್ತಾರೋ ಅಥವಾ ನನ್ನನ್ನು ನೆನೆಯುತ್ತಾರೋ ಅವರನ್ನು ಮಾತ್ರ ಪೀಡಿಸಬೇಡಿ" ಎಂದು ವರವನ್ನೀಯುತ್ತಾನೆ. ಅವರು ಸಂತೋಷದಿಂದ ಒಪ್ಪಿಕೊಳ್ಳುತ್ತಾರೆ.

೧೪ನೆಯ ಸಂಧಿಯು ೧೮ ಪದ್ಯಗಳಲ್ಲಿ ಮಹಾಭಾರತದ ಎಲ್ಲ ಪರ್ವಗಳ ಕಥೆ ಯನ್ನು ಸಂಕ್ಷೇಪಿಸಿ ಸಂಗ್ರಹಿಸಲಾಗಿದೆ. ಸ್ತ್ರೀಪರ್ವದ ಕಥೆಯನ್ನು 'ಐಕ್ಯಪರ್ವದಲಿ' ಎಂದೂ, ಪ್ರಸ್ಥಾನಪರ್ವದ ಕಥೆಯನ್ನು 'ಪ್ರಹಸ್ತಪರ್ವದಲಿ' ಎಂದೂ ಬರೆಯ ಲಾಗಿದೆ. ಲಿಪಿದೋಷವಿರಲೂ ಸಾಕು. ಸಂಪಾದಕರಿಗೆ ದೊರಕಿರುವುದು ಒಂದೇ ಹಸ್ತಪ್ರತಿ. ಅದೂ ಅತ್ಯಂತ ಅಶುದ್ಧವಾದದ್ದು. ಸಂಪಾದಕರ ಕಷ್ಟವನ್ನು ನಾವು ಊಹಿಸಿಕೊಳ್ಳಬಹುದು.

ವ್ಯಾಸಭಾರತದ ಕಥಾ ಸಂದರ್ಭವನ್ನು ಕವಿ ಅಲ್ಲಲ್ಲಿ ಬದಲಾಯಿಸಿದ್ದಾನೆ. ಒಟ್ಟು ಇಂತಹ 37 ಮಾರ್ಪಾಟುಗಳನ್ನು ಸಂಪಾದಕರು ಗುರುತಿಸಿ ತಿಳಿಸಿದ್ದಾರೆ. ರಸೋಚಿತವೇನಲ್ಲದ ಕೆಲವು ಮುಖ್ಯ ಮಾರ್ಪಾಟುಗಳಿಗೆ ಕಾರಣವನ್ನು ಹೇಳುವುದು ಕಷ್ಟ. ಪಾಂಡವರು ಸ್ವರ್ಗಕ್ಕೆ ಪ್ರಸ್ಥಾನ ಮಾಡುವಾಗ ಕುಂತಿ ಜೊತೆಯಲ್ಲಿ ಹೋಗುವುದು, ದಾರಿಯಲ್ಲಿ ದ್ರೌಪದಿ ಅಗ್ನಿಪ್ರವೇಶ ಮಾಡಿ ಪಾರಾಗುವುದು, ಕೃಷ್ಣನು ಧರ್ಮರಾಯನಿಗೆ ವಿಮಾನವನ್ನು ಕಳಿಸುವುದು, ಸ್ವರ್ಗದಲ್ಲಿ ಕೃಷ್ಣನೇ ಕೌರವಾದಿಗಳನ್ನು ಧರ್ಮರಾಯನಿಗೆ ತೋರಿಸುವುದು ಮುಂತಾದ ಮಾರ್ಪಾಟುಗಳು ಸೂತಭಾರತದಲ್ಲಿವೆ.

ಈ ಕವಿಯ ಮೇಲೆ ಕೆಲವು ಪ್ರಾಚೀನ ಕವಿಗಳ ಪ್ರಭಾವ ಕಂಡುಬರುವುದರಿಂದ ಅವರ ಕಾವ್ಯಗಳನ್ನು ಈತನು ವ್ಯಾಸಂಗ ಮಾಡಿದ್ದನೆಂದು ಹೇಳಬಹುದು. ಕುಮಾರವ್ಯಾಸನ ಗದುಗಿನ ಭಾರತ, ಹರಿಹರನ ಪಂಪಾಶತಕ, ರಾಘವಾಂಕನ ಹರಿಶ್ಚಂದ್ರಕಾವ್ಯ, ವಿರೂಪಾಕ್ಷನ ಚೆನ್ನಬಸವ ಪುರಾಣ, ಲಕ್ಷ್ಮೀಶನ ಜೈಮಿನಿಭಾರತ–ಇವುಗಳ ಪ್ರಭಾವವಿರುವುದನ್ನು ಸಂಪಾದಕರು ನಿದರ್ಶನ ಸಹಿತವಾಗಿ ತೋರಿಸಿದ್ದಾರೆ.

ಸೂತಭಾರತದಲ್ಲಿ ಕರುಣರಸಕ್ಕೆ ಪ್ರಾಧಾನ್ಯ ಬಂದಿದೆ. ಪಾಂಡವರು ಮಹಾಪ್ರಸ್ಥಾನಕ್ಕೆ ಹೊರಟಾಗ ಅರಮನೆಯವರ ಮತ್ತು ಪೌರರ ಆಕ್ರಂದನ, ಒಂಟಿಯಾದ ಪರೀಕ್ಷಿತನ ಗೋಳು, ವೃಷಸನೆಂಬವನ ಕೈಗೆ ಸಿಕ್ಕಿದ ದ್ರೌಪದಿಯ ಆಕ್ರಂದನ, ಮುಂದೆ ದ್ರೌಪದಿ, ನಕುಲ, ಸಹದೇವಾದಿಗಳು ಮೃತರಾಗಿ ಬೀಳಲಾಗಿ ಉಳಿದವರ ಶೋಕ–ಭಾವಪೂರ್ಣವಾಗಿ ವರ್ಣಿತವಾಗಿವೆ. ಅಲ್ಲಲ್ಲಿ ವೀರ, ಭಯಾನಕಗಳೂ ಉಂಟು. ಭಕ್ತಿಯ ಪ್ರತಿಪಾದನೆ ಚೆನ್ನಾಗಿ ಬಂದಿದೆ. ವಸ್ತುವರ್ಣನೆಯಲ್ಲಿಯೂ ಕವಿ ತನ್ನ ಕೌಶಲವನ್ನು ತೋರಿದ್ದಾನೆ. ಕಲಿಯ ಆಗಮನದಿಂದ ಲೋಕದಲ್ಲಾದ ಮಾರ್ಪಾಟು, ಪರೀಕ್ಷಿತನ ಪಟ್ಟಾಭಿಷೇಕ, ವೃಕ್ಷಲತೆಗಳು, ಕಾಳ್ಗಿಚ್ಚು, ಹಿಮದ ಪ್ರಭಾವ–ಮುಂತಾದವುಗಳು ಸುಂದರವಾಗಿ ವರ್ಣಿಸಲ್ಪಟ್ಟಿವೆ. ನಿದರ್ಶನಾರ್ಥವಾಗಿ ಕೆಲವನ್ನಿಲ್ಲಿ ತೋರಿಸಬಹುದು.

೧. ಪಾಂಡವರು ನಗರದಿಂದ ಮಹಾಪ್ರಸ್ಥಾನಕ್ಕೆ ತೆರಳುವಾಗ ಸ್ತ್ರೀಯರ ವಿಲಾಪ—

ಆರ ನೋಂಪಿಯ ಕೆಡಿಸಿದೆವೊ ಮೇ
ಣಾರ ಪೋಲೆಯ ಸೆಳೆದವೋ ಮೇ
ಣಾರ ಗಂಡರನಗಲಿಸಿದೆವೋ ಪೂರ್ವಕಾಲದಲಿ ।
ಆರ ಸಿರಿಯನು ಹಳಿದೆವೋ ಮ-
ತ್ತಾರ ಭೋಜನವೆಳೆದುಕೊಂಡೆವೊ
ವೀರಪಾಂಡವರೆಮ್ಮನಗಲಿದರೆಂದು ಮರುಗಿದರು ॥ (೪–೧೪)

೨. ಕಲಿಪುರುಷನ ಹಾವಳಿಯನ್ನು ಕೇಳಿ ಧರ್ಮರಾಯನ ದುಗುಡ :

ಮನದಲಂಕುರವಾಯ್ತು ದುಗುಡವು
ಕೊನೆತುದೆರಡೆಲೆಯಾಯ್ತು ಬುದ್ಧಿಯು
ನೆನಹು ಮುಸುಕಿತು ಚಿತ್ತವೆಲ್ಲವ ಪರಹಿ ಪದಗೆಡಿಸೆ
ತನುವನಾವರಿಸಿತ್ತು ಯಮನಂ
ದನಗೆ ದೃಶ್ಯವ ತೋರುತಿದೆ ಲೋ
ಚನದ ಕಡೆಯಲಿ ಕೋಡಿವರಿದವು ಬಾಷ್ಪವಾರಿಗಳು ॥ (೧–೧೨)

೩. ಪರ್ವತವನ್ನು ಹತ್ತಿ ಸಾಗುವಾಗ ಪಾಂಡವರ ಪಾಡು :

ಕಲ್ಲುಕಲ್ಲನು ಹಳಚಿ ಕೈಕಾ
ಲೆಲ್ಲ ಬಿಕ್ಕನೆ ಬಿರಿಯೆ ನಡೆಯಲು
ಮೆಲ್ಲಡಿಗಳೊಡೆದರುಣಜಲ ಸುರಿಸುರಿದು ತಾರಿರಲು ।
ಕಲ್ಲೆಡಹಿ ಬೆಟ್ಟೊಡೆದು ಕೈಕಾ
ಲೆಲ್ಲ ಛಿಕ್ಕನೆ ಸೀಳಿ ಧರಣೀ
ವಲ್ಲಭರು ಪರಲೋಕ ಲಂಪಟದಿಂದ ಗಮಿಸಿದರು ॥ (೭–೭)

೪. ಸತ್ತುಬಿದ್ದ ತಾಯಿ ಕುಂತಿಯನ್ನು ಅಗಲಿಹೋದ ಧರ್ಮರಾಯನ ಶೋಕ :

ಪಸಿದೆ, ಬಾಯೆಂದೆಂಬ ತಾಯನು
ಬಿಸುಟು ಹೆಣನನು ಬಂದ ಪಾತಕಿ
ವಸುಧೆ ಹೊರುವುದೆ ತಾಯೆ ನಿನ್ನಯ ಗುಣವನೆಣಿಸುವರೆ ।
ಮಸೆದಲಗು ಉದ್ದಳಿಸುವಂದದಿ
ಬಸುರ ಹೊಯ್ದುಳುತಾಗ ಯಮಸುತ
ದೆಸೆಯ ನೋಡುತ ತಾಯ ಗುಣಗಣಗಳನು ನೆನೆನೆನೆದು ॥ (೯–೯)

೫. ವೃಕ್ಷಜಾತಿಗಳ ಪರಿಚಯ ಕವಿಗೆ ಎಷ್ಟಿದೆಯೆಂಬುದಕ್ಕೆ ಈ ಒಂದು ಪದ್ಯ ಸಾಕಾಗುತ್ತದೆ :

ಜಾಲವಿದು ಕೆನ್ನೆಲ್ಲಿ ಜೊಬ್ಬುಲಿ
ಹಾಲೆತೇಕ ಲವಂಗವಿದು ಕಂ-
ಚಾಳ ಚಂದನ ಕಕ್ಕೆ ಕಾರೆಯು ಮತ್ತಿ ಕಮ್ಮತ್ತಿ ।
ಗಾಳಿಯಿಂಡವು ದಡಸು ಅಂಕಲೆ
ತಾಳೆ ತೆಂಗು ತಿಲಂಕಿಯಿದು ಕಾ
ಹಾಲೆ ಪಾಲೆಯು ನಿಂಬೆಯೌದುಂಬರವು ಅರಳಿಗಳು ॥ (೬–೫)

ಈ ಗ್ರಂಥವನ್ನು ಪರಿಷ್ಕರಿಸಲು ಸಂಪಾದಕರು ಅಪಾರ ಶ್ರಮ ವಹಿಸಿದ್ದಾರೆಂಬುದನ್ನು ಪ್ರತಿಯೊಂದು ಪುಟವೂ ಸಾರುತ್ತದೆ. ಪ್ರತಿಯೊಂದು ಪುಟದ ಅಡಿಯಲ್ಲಿ ಅಪಪಾಠಗಳ ಪಟ್ಟಿಯೇ ಇದೆ. ದೊರೆತದ್ದು ಒಂದೇ ಹಸ್ತಪ್ರತಿ. ಕೆಲವೆಡೆ ಲಿಪಿಗಳೇ

ಇರಲಿಲ್ಲವಂತೆ. ತಾವು ಪರಿಷ್ಕರಿಸಿದ ಪಾಠವನ್ನೂ ಊಹಿಸಿ ಸೇರಿಸಿದ್ದನ್ನೂ ಕಂಸ ಚಿಹ್ನೆಯಲ್ಲಿ ತೋರಿಸಿದ್ದಾರೆ. ಇದಕ್ಕಾಗಿ ದುಡಿದ ಸಂಪಾದಕ ವರ್ಗವನ್ನು ಅಭಿನಂದಿಸುತ್ತೇವೆ.

ಸೂತಭಾರತ ಗದುಗಿನ ಭಾರತ ಮಟ್ಟಕ್ಕೆ ಎಂದಿಗೂ ಏರಲಾರದು. ಕಾವ್ಯ ರಚನೆಯಲ್ಲಿ ಹಲವಾರು ನ್ಯೂನತೆಗಳನ್ನು ಕವಿಯು ಮಾಡಿದ್ದಾನೆ. ಅಪೂರ್ಣವಾಗಿದ್ದ ಗದುಗಿನ ಭಾರತವನ್ನು ತಿಮ್ಮಣ್ಣ ಕವಿ ಪೂರ್ಣ ಮಾಡಿದ್ದಾನೆ. ತಿಮ್ಮಣ್ಣ ಕವಿಯು ಬರೆದ ಸಂಗತಿ ಗೊತ್ತಿಲ್ಲದೆ, ಗದುಗಿನ ಭಾರತವನ್ನು ಪೂರ್ತಿ ಮಾಡುವ ಹಂಬಲದಿಂದ ಈ ಕವಿ ಸೂತಭಾರತವನ್ನು ಬರೆದನೋ ಎಂಬ ಸಂದೇಹಕ್ಕೆ ಎಡೆಯುಂಟು. ಹೇಗಿದ್ದರೂ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಈ ಕಾವ್ಯಕ್ಕೆ ಸ್ಥಾನ ಉಂಟು. ಬಿ.ಎಂ.ಶ್ರೀ ಪ್ರತಿಷ್ಠಾನದ ಪರವಾಗಿ ಇದನ್ನು ಪ್ರಕಟಿಸಿದ ಪ್ರಧಾನ ಸಂಪಾದಕರಾದ ಪ್ರೊ॥ ಎಂ.ವಿ. ಸೀತಾರಾಮಯ್ಯನವರ ಪರಿಶ್ರಮ ಸ್ತುತ್ಯವಾದುದು.

—ಎಸ್. ರಂಗನಾಥಶರ್ಮಾ

ಧ್ರುವ ಚರಿತ್ರೆ*

ಧ್ರುವನ ಚರಿತ್ರೆ ಸುಪ್ರಸಿದ್ಧವಾದುದು. ವಿಷ್ಣುಪುರಾಣದ ಪ್ರಥಮಾಂಶದಲ್ಲಿಯೂ ಭಾಗವತದ ನಾಲ್ಕನೆಯ ಸ್ಕಂಧದಲ್ಲಿಯೂ ಇದು ಸುಂದರವಾಗಿ ನಿರೂಪಿತವಾಗಿದೆ. ವಿಷ್ಣುಪುರಾಣದಲ್ಲಿ ಧ್ರುವನು ವಿಷ್ಣುವನ್ನು ತಪಸ್ಸಿನಿಂದ ಮೆಚ್ಚಿಸಿ ವರವನ್ನು ಪಡೆದನೆಂಬಲ್ಲಿಗೆ ಮುಗಿಯುತ್ತದೆ. ಭಾಗವತದಲ್ಲಿ ಅವನು ರಾಜನಾದ ಮೇಲೆ ಕುಬೇರನೊಡನೆ ಯುದ್ಧ ಮಾಡಿದ ಪ್ರಸಂಗ ವರ್ಣಿತವಾಗಿದೆ. ಪ್ರಕೃತ ಗ್ರಂಥವು ಕುಬೇರನೊಡನೆ ನಡೆದ ಯುದ್ಧವನ್ನೂ ವರ್ಣಿಸುವುದರಿಂದ ಕವಿ ತಿಮ್ಮಪ್ಪದಾಸರು ಭಾಗವತವನ್ನು ಅನುಸರಿಸಿದ್ದಾರೆಂಬುದು ಸ್ಪಷ್ಟವಾಗಿದೆ. ತಿಮ್ಮಪ್ಪದಾಸರು ಲಲಿತವಾದ ಸಾಂಗತ್ಯದಲ್ಲಿ ಈ ಸರಳ ಕಥೆಯನ್ನು ಸುಂದರವಾಗಿ ವರ್ಣಿಸಿದ್ದಾರೆ.

ಕವಿ ತಿಮ್ಮಪ್ಪದಾಸರ ಸ್ಥಳ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ. ಬಳಿಕ ಅವರು ಮೈಸೂರಿನಲ್ಲಿಯೂ ಶ್ರೀರಂಗಪಟ್ಟಣದಲ್ಲಿಯೂ ಅರಕಲಗೂಡಿನಲ್ಲಿಯೂ ವಾಸವಾಗಿದ್ದರು. ಇವರು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಎಂದರೆ ಕ್ರಿ. ಶ. ೧೭೯೬–೧೮೬೮ರ ನಡುವೆ ಇದ್ದವರು. ಇವರ ಗುರು ವಾಸುದೇವಾರ್ಯ. ಬಹುಶಃ ಇವರ ಪಿತಾಮಹನೇ ಗುರು. ಕವಿಯ ತಂದೆಯ ಹೆಸರು ನಾರಾಯಣ. ತಾಯಿ ವೆಂಕಮ್ಮ. ಇವೇ ಮೊದಲಾದ ವಿವರಗಳನ್ನು ಪ್ರಧಾನ ಸಂಪಾದಕರಾದ ಪ್ರೊ॥ ಎಂ. ವಿ. ಸೀತಾರಾಮಯ್ಯನವರು ಸರಿಯಾದ ದಾಖಲೆಗಳೊಡನೆ ತುಂಬ ಶ್ರಮವಹಿಸಿ ಸಂಗ್ರಹಿಸಿದ್ದಾರೆ. ಹೆಚ್ಚಿನ ವಿವರಗಳಿಗೆ ಇವರೇ ಸಂಪಾದಿಸಿದ 'ಅರ್ಚನ' ಎಂಬ ಗ್ರಂಥದ ಪೀಠಿಕೆಯನ್ನು ನೋಡಬಹುದು.

ದಾಸರು ಅತ್ಯಂತ ಭಗವದ್ಭಕ್ತರು, ಅದ್ವೈತಿಗಳು, ಭಾಗವತ ಸಂಪ್ರದಾಯದವರು. ಇವರು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಇದುವರೆಗೆ ೧೧ ಗ್ರಂಥಗಳ ಹಸ್ತಪ್ರತಿಗಳು ದೊರಕಿವೆ. ಭಕ್ತಿಜ್ಞಾನ ಪ್ರಧಾನವಾದ ಕೀರ್ತನೆಗಳೇ ಅಧಿಕ. ಅವುಗಳಲ್ಲಿ 'ಪೂಜಾವಿಧಾನ ಕೀರ್ತನೆಗಳು' ಎಂಬ ಕೃತಿ ಅರ್ಚನ ಎಂಬ ಹೆಸರಿನಲ್ಲಿ ಈಗಾಗಲೇ ಪ್ರಕಟವಾಗಿದೆ. ಈ 'ಧ್ರುವಚರಿತ್ರೆ' ಅವರ ಸಾಂಗತ್ಯ ಛಂದಸ್ಸಿನ ಕಾವ್ಯ.

ಕವಿಯ ಸ್ವಹಸ್ತಲಿಖಿತ ಓಲೆಗರಿಗಳೇ ಸಂಪಾದಕರಿಗೆ ದೊರಕಿರುವುದೊಂದು ವಿಶೇಷ.† ದೇಶ ಕಾಲಗಳಿಂದ ಕವಿಯು ನಮಗೆ ಹತ್ತಿರದವನೇ ಆಗಿದ್ದರೂ ಕೆಲವು

---

* ಕವಿ : ಶ್ರೀ ತಿಮ್ಮಪ್ಪದಾಸರು ; ಪ್ರಧಾನ ಸಂಪಾದಕರು : ಪ್ರೊ॥ ಎಂ. ವಿ. ಸೀತಾರಾಮಯ್ಯ ; ಸಂಪಾದಕರು : ಡಾ॥ ಎನ್. ಎಸ್. ಲಕ್ಷ್ಮೀನಾರಾಯಣಭಟ್ಟ ; ಪ್ರಕಾಶನ : ಬಿ. ಎಂ. ಶ್ರೀ. ಪ್ರತಿಷ್ಠಾನ, ಬೆಂಗಳೂರು–೧೯, ಪುಟ : 171 + 30, ಬೆಲೆ : ರೂ. 15–00.

† ಇದು ಸ್ವಹಸ್ತಲಿಖಿತ ತಾಳಪ್ರೋಲೆ ಗ್ರಂಥವಲ್ಲ. ಬೇರೊಬ್ಬ ಲಿಪಿಕಾರನಿಂದ ಲಿಖಿತವಾದುದು–ಎಂದು 'ಅರ್ಚನ'ದ ಪೀಠಿಕೆಯಿಂದ ಗೊತ್ತಾಗುತ್ತದೆ. (ಪು. vi)—ಸಂ.

ಓಲೆಗರಿಗಳು ನಷ್ಟವಾಗಿರುವುದು ನಮ್ಮ ದೌರ್ಭಾಗ್ಯ. ಕೆಲವು ಗರಿಗಳು ಅತ್ಯಂತ ಶಿಥಿಲವಾಗಿದ್ದು ನಡುನಡುವೆ ಕೆಲವು ಶಬ್ದಗಳೂ ಅಕ್ಷರಗಳೂ ಲುಪ್ತವಾಗಿವೆ. ಸಂಪಾದಕರು ಯಥೋಚಿತವಾಗಿ ಅವನ್ನು ಸರಿಪಡಿಸಿದ್ದಾರೆ. ಓಲೆಗರಿಗಳು ದೊರಕದಿದ್ದುದರಿಂದ ಕಾವ್ಯದ ಕಡೆಯ ಭಾಗದಲ್ಲಿ ವರ್ಣನಾಂಶಗಳು ಸ್ವಲ್ಪ ಲುಪ್ತವಾಗಿದ್ದರೂ ಕಥೆಯು ಓಟಕ್ಕೆ ಕಥಾಂಶವನ್ನು ತಿಳಿಯುವುದಕ್ಕೆ ಬಾಧೆಯೇನೂ ಇಲ್ಲ.

ಸ್ವಾಯಂಭುವಮನುವಿನ ಮಗ ಉತ್ತಾನಪಾದರಾಯನಿಗೆ ಸುನೀತಿ, ಸುರುಚಿ ಎಂಬ ಇಬ್ಬರು ಮಡದಿಯರು. ಹಿರಿಯ ಮಡದಿ ಸುನೀತಿಯಲ್ಲಿ ಧ್ರುವ ಎಂಬ ಮತ್ತು ಕಿರಿಯ ಮಡದಿ ಸುರುಚಿಯಲ್ಲಿ ಉತ್ತಮನೆಂಬ ಮಕ್ಕಳು ಜನಿಸಿರುತ್ತಾರೆ. ರಾಯನಿಗೆ ಸುರುಚಿಯಲ್ಲಿ ಅತ್ಯಂತ ಪ್ರೇಮವಿದ್ದುದರಿಂದ ಸುನೀತಿಯ ವಿಷಯದಲ್ಲಿ ಉಪೇಕ್ಷೆ. ಆತನ ರಾಜಧಾನಿಯಾದ ಮಾಹಿಷ್ಮತಿಯ ವರ್ಣನೆ ಸೊಗಸಾಗಿದೆ. ಒಂದು ದಿನ ಉತ್ತಾನಪಾದನು ಉತ್ತಮನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಸುರುಚಿಯೊಡನೆ ವಿಲಾಸದಿಂದ ಕುಳಿತಿದ್ದಾಗ ಧ್ರುವನು ಬಂದು ತನ್ನನ್ನೂ ತೊಡೆಯ ಮೇಲೆ ಕುಳ್ಳಿರಿಸಿಕೊಳ್ಳಬೇಕೆಂದು ತಂದೆಯನ್ನು ಅಂಗಲಾಚುತ್ತಾನೆ. ಸುರುಚಿ ಅದನ್ನೊಪ್ಪದೆ ಐದು ವರ್ಷದ ಆ ಬಾಲಕನನ್ನು ಹಂಗಿಸಿ ಮಾತಾಡುತ್ತಾಳೆ. ತಂದೆ ಸುಮ್ಮನಿದ್ದ. ಧ್ರುವನು ಅಳುತ್ತ ತಾಯಿಯ ಬಳಿಗೆ ಹಿಂದಿರುಗುತ್ತಾನೆ. ಸುನೀತಿ ತನ್ನ ಮಗನ ಪರಿಸ್ಥಿತಿಯನ್ನರಿತು ನೊಂದು ಗೋಳಿಡುತ್ತಾಳೆ. ಅವಳು ಹಲುಬುವುದನ್ನು ಕವಿ ಸುಂದರವಾಗಿ ಚಿತ್ರಿಸಿದ್ದಾನೆ. ರಾಜನ ತೊಡೆಯ ಮೇಲೆ ಕುಳಿತುಕೊಳ್ಳುವಷ್ಟು ಪುಣ್ಯವನ್ನು ಧ್ರುವನು ಗಳಿಸಿಲ್ಲ. ಅದು ಶ್ರೀಮನ್ನಾರಾಯಣನ ಕೃಪೆಯಿಂದ ದೊರೆಯಬೇಕು–ಎಂದು ಹಲುಬುತ್ತಾಳೆ. ಧ್ರುವನು ತಪಸ್ಸಿನಿಂದ ನಾರಾಯಣನನ್ನು ಮೆಚ್ಚಿಸುತ್ತೇನೆಂದು ತಪಸ್ಸಿಗಾಗಿ ಕಾಡಿಗೆ ಹೊರಡುತ್ತಾನೆ. ಈ ಪ್ರಸಂಗದ ಚಿತ್ರಣದಲ್ಲಿ ಕವಿ ತನ್ನ ಪ್ರತಿಭೆಯನ್ನು ಉತ್ತಮ ರೀತಿಯಲ್ಲಿ ತೋರಿದ್ದಾನೆ.

ದಾರಿಯಲ್ಲಿ ಧ್ರುವನಿಗೆ ನಾರದರು ಬಂದು ಉಪದೇಶ ಮಾಡಿದ ಸಂದರ್ಭ ಸೊಗಸಾಗಿದೆ. ಆಮೇಲೆ ನಾರದರು ಮಾಹಿಷ್ಮತಿಗೆ ಬಂದದ್ದು, ರಾಜಧಾನಿಯಲ್ಲಿ ಅವರು ಕಂಡ ದೃಶ್ಯ, ಉತ್ತಾನಪಾದನ ಸಂದರ್ಶನ, ಅವನಿಗೆ ಧೈರ್ಯ ಹೇಳಿದ್ದು– ಇವೆಲ್ಲ ರೋಚಕಗಳಾಗಿವೆ. ಅತ್ತ ಧ್ರುವನ ಅರಣ್ಯಪ್ರವೇಶ, ಅರಣ್ಯವರ್ಣನೆ, ತಪೋವಿಧಾನ, ಶ್ರೀಮನ್ನಾರಾಯಣನ ಸಾಕ್ಷಾತ್ಕಾರ, ಅವನನ್ನು ಸ್ತುತಿಸುವುದು– ಈ ಪ್ರಸಂಗಗಳು ಕವಿಯ ಕಾವ್ಯಪ್ರತಿಭೆಗೆ ನಿದರ್ಶನ.

ಧ್ರುವನು ವಿಷ್ಣುವನ್ನೊಲಿಸಿ ವರವನ್ನು ಪಡೆದು ನಗರಕ್ಕೆ ಹಿಂದಿರುಗುತ್ತಾನೆ. ತಂದೆ ತಾಯಿಗಳ ಸಂತೋಷಕ್ಕೆ ಎಣೆಯಿಲ್ಲವಾಗುತ್ತದೆ. ಸುರುಚಿಯೂ ಧ್ರುವನನ್ನು ಪ್ರೀತಿಯಿಂದ ಕಾಣುತ್ತಾಳೆ. ಮುಂದೆ ಧ್ರುವನಿಗೆ ಯೌವನೋದಯವಾಗಲು ಉತ್ತಾನಪಾದನು ಅವನಿಗೆ ಮದುವೆ ಮಾಡಿ ರಾಜ್ಯಭಾರವನ್ನೊಪ್ಪಿಸಿ ತಪಸ್ಸಿಗಾಗಿ

ವನಕ್ಕೆ ತೆರಳುತ್ತಾನೆ. ಧ್ರುವನ ತಮ್ಮ ಬೇಟೆಗಾಗಿ ವನಕ್ಕೆ ಹೋಗಿದ್ದಾಗ ಒಬ್ಬ ಯಕ್ಷನಿಂದ ಹತನಾಗುತ್ತಾನೆ. ಅವನನ್ನು ಹುಡುಕುತ್ತ ಹೋದ ಸುರುಚಿ ಕಾಳ್ಗಿಚ್ಚಿಗೆ ಸಿಕ್ಕಿ ಸತ್ತುಹೋಗುತ್ತಾಳೆ. ಇದೆಲ್ಲವನ್ನು ಕೇಳಿದ ಧ್ರುವ ಕೋಪದಿಂದ ಮೊರೆದೆದ್ದು ಯಕ್ಷರಾಜನಾದ ಕುಬೇರನ ಮೇಲೆ ದಂಡೆತ್ತಿ ಹೋಗುತ್ತಾನೆ. ಘೋರ ಯುದ್ಧ ವಾಗುತ್ತದೆ. ಧ್ರುವನು ನಾರಾಯಣಾಸ್ತ್ರವನ್ನು ಪ್ರಯೋಗಿಸುತ್ತಾನೆ. ಯಕ್ಷರ ಸೇನೆ ಕಾಳ್ಗಿಚ್ಚಿನಲ್ಲಿ ಸಿಕ್ಕಿದ ಒಣಗಿದ ತೃಣದಂತೆ ಬಳಲುತ್ತದೆ. ಆಗ ಸ್ವಾಯಂಭುವ ಮನು ಮೊಮ್ಮಗನಾದ ಧ್ರುವನ ಬಳಿಗೆ ಬಂದು ನಾರಾಯಣಾಸ್ತ್ರವನ್ನು ಉಪ ಸಂಹರಿಸುವಂತೆ ಬುದ್ಧಿವಾದ ಹೇಳುತ್ತಾನೆ. ಅದರಂತೆ ಧ್ರುವನು ನಾರಾಯಣಾಸ್ತ್ರ ವನ್ನು ಹಿಂತೆಗೆದುಕೊಳ್ಳಲು, ಕುಬೇರನು ಧ್ರುವನೊಡನೆ ಸ್ನೇಹವನ್ನು ಬೆಳೆಸಿ ಬೇಕಾದ ವರವನ್ನು ಕೇಳಿಕೊಳ್ಳುವಂತೆ ಹೇಳುತ್ತಾನೆ. ಧ್ರುವನು "ನನಗೆ ಬೇರೇನು ವರವೂ ಬೇಡ. ವಾಸುದೇವನಲ್ಲಿ ನನ್ನ ಮನಸ್ಸು ಸದಾ ನೆಲೆಸುವಂತೆ, ಹಿಂಸೆಗೆ ಎಂದೂ ಮನಸ್ಸು ಬಾರದಂತೆ ಅನುಗ್ರಹಿಸು" ಎಂದು ಕೇಳಿಕೊಳ್ಳುತ್ತಾನೆ.

ಅನಂತರ ರಾಜಧಾನಿಗೆ ಹಿಂದಿರುಗಿದ ಧ್ರುವನಿಗೆ ಪುತ್ರ ಸಂತಾನವಾಗುತ್ತದೆ. ಓಲೆಗರಿಗಳು ನಷ್ಟವಾದ್ದರಿಂದ ಮುಂದಿನ ಕಥಾಂಶ ಸ್ಪಷ್ಟವಾಗಿಲ್ಲ. ಕಥೆಯು ಫಲಶ್ರುತಿ, ಮಂಗಳದೊಡನೆ ಸಮಾಪ್ತವಾಗುತ್ತದೆ.

ಮುಂದಿನ ಕಥೆಯೂ ಭಾಗವತದಲ್ಲಿರುವಂತೆ ಅತ್ಯಲ್ಪ. ಧ್ರುವನು ಯಜ್ಞಾದಿ ಪುಣ್ಯಕಾರ್ಯಗಳನ್ನು ಮಾಡುತ್ತ 36 ಸಾವಿರ ವರ್ಷ ರಾಜ್ಯಭಾರ ಮಾಡಿ, ತಪಸ್ಸಿಗೆ ಹೋಗುತ್ತಾನೆ. ಕಡೆಯಲ್ಲಿ ವಿಷ್ಣುದೂತರು ಬಂದು ವಿಮಾನದಲ್ಲಿ ಕರೆದೊಯ್ಯು ತ್ತಾರೆ. ವಿಷ್ಣುಪದವೆನಿಸಿದ ಗಗನದಲ್ಲಿ ಧ್ರುವನಿಗೆ ಒಂದು ಶಾಶ್ವತಸ್ಥಾನ ಲಭಿಸುತ್ತದೆ.

ಭಾಗವತದಲ್ಲಿ ಧ್ರುವನ ಮಕ್ಕಳ ಹೆಸರು ಉತ್ಕಲ, ವತ್ಸರ ಎಂದಿದೆ ಈ ಧ್ರುವ ಚರಿತ್ರೆಯಲ್ಲಿ ಕಲ್ಪ, ವತ್ಸರ ಎಂದು ಹೇಳಿದೆ (ಕಮಲಾಕ್ಷಕರುಣದಿಂಕಲ್ಪ ವತ್ಸರರೆಂದು)–ಪು. 168

ಪೀಠಿಕೆಯಲ್ಲಿ ಲಕ್ಷ್ಮಿ, ಗಣಪತಿ, ಶಿವ ಮತ್ತು ವಿಷ್ಣುವಿನ ದಶಾವತಾರಗಳ ಸ್ತುತಿ ಇದೆ. ಕೆಲವು ಪದ್ಯಗಳು ಸಮಸ್ಯಾಭಿರುಚಿಯುಳ್ಳವು—

ಮೂಗಣ್ಣ ನರಸಿಯ ಪಿತನ ಕಂಡರೆ ತನ
ಗಾಗದವನ ಸಖಿಸಖನ ।
ರಾಗದಾತ್ಮಜನ ತಮ್ಮನ ಹರಿವಿಡಿದಂಥ
ನಾಗೈಯನಡಿಗೆ ವಂದಿಸುವೆ ॥ ಪು. 4

ಇದು ಅರ್ಜುನಸಾರಥಿಯಾದ ಶ್ರೀಕೃಷ್ಣನಿಗೆ ವಂದನೆ.

ಬಾಯಾರಿದ ಪಥಿಕರಿಗೆ ನೀರು ಕೊಡುವ ಅರವಟ್ಟಿಗೆಯಲ್ಲಿ ನೀರು ಕೊಡುವ ವಳಿಗೂ ಪಥಿಕರಿಗೂ ಚಕ್ಕಂದದ ಮಾತನ್ನು ಕವಿ ಹೀಗೆ ವರ್ಣಿಸುತ್ತಾನೆ :

ನೀರಾನೀಯೆಂದು ಪಥಿಕ ಕೇಳಿದಡಲ್ಲಿ
ನಾರಿ ನುಡಿದಳವನೊಡನೆ ।
ನೀರೆಯಾದೆನ್ನನು ನೀರಾನೀಯೆಂಬೆ ಕ–
ಣ್ಣೋರೆಯೆ ನೋಡೆಂದಳವಳು ॥ ಪು. 9

ನೀರಾನ್ + ಈ = ನೀರು ಕೊಡು. ನೀರಾನೀ = ನೀರಾನೆ. ಅಥವಾ ನೀರಾ = ಚೆಲುವನಾದ ಪುರುಷನೆ. ಈ = ಕೊಡು, ಇದು ವಕ್ರೋಕ್ತಿಯೆಂಬ ಅಲಂಕಾರ. ಹೇಳಿದ ಮಾತಿಗೆ ಶ್ಲೇಷದಿಂದ ಅನ್ಯಾರ್ಥವನ್ನು ಇಲ್ಲಿ ಕಲ್ಪಿಸಲಾಗಿದೆ.

ಮಗುವಾದ ಧ್ರುವನ ವರ್ಣನೆ. ಮಗು ಅಂಬೆಗಾಲಿಕ್ಕುತ್ತ ಹರೆಯುತ್ತಿದೆ. ಹಿಂದುಗಡೆ ಯಾರಾದರೂ ಬಂದರೆ ಅವರನ್ನು ಕತ್ತು ತಿರುಗಿಸಿ ನಗುತ್ತ ನೋಡುತ್ತದೆ. ಆ ಚೆಲುವನ್ನು ನೋಡುವುದು ನೋಡತಕ್ಕವರ ಕಣ್ಣಿನ ಪುಣ್ಯ—

ಅಂಬೆಗಾಲಿಟ್ಟವನಿಯೊಳು ಸಾಗುತ ಮತ್ತೆ
ಹಿಂಭಾಗದೊಳು ಬರುತಿಪರ ।
ಮುಂಬರಿಯದೆ ತಿರುಗೀಕ್ಷಿಪ ಸಿರಿಯು ನೋ–
ಳ್ಪಂಬಕಭಾಗ್ಯವಿನ್ನೆಂತೋ ॥ ಪು. 14

ತಂದೆಯ ತೊಡೆಯ ಮೇಲೆ ಕುಳಿತುಕೊಳ್ಳಲು ಬಂದ ಧ್ರುವನನ್ನು ಸುರುಚಿ ಹೀಯಾಳಿಸಿ ಹೇಳುತ್ತಾಳೆ :

ಹೆಳವನೊಬ್ಬನು ದಾರಿಯೊಳಗೈದುತಲಿ ಮತ್ತೆ
ಬಲವುಯಿಲ್ಲದೆ ತನಗೊಬ್ಬ ।
ಎಳನೀರೊಳಾಸೆಯಿದ್ದಡೆ ಬಪ್ಪದೆಂತು ನೀ
ನಳುವೆ ಏತಕೆ ಮಂಕುಮರುಳೆ ॥ ಪು. 21

ಮಡದಿಯ ಮನಸ್ಸು ಕೆಟ್ಟುಹೋದರೆ ಅದನ್ನು ತಿದ್ದುವುದು ಕಷ್ಟ :

ಅಡವಿಯೊಳಿಲ್ಲಿಯು ಪರಿವ ಹಳ್ಳಂಗಳ
ಕಡುಡೊಂಕ ತಿದ್ದಲುಬಹುದು ।
ಮಡದಿಯಾದವಳ ಚಿತ್ತದ ಡೊಂಕ ತಿದ್ದಲ್ಕೆ
ಮೃಡಗಳವಲ್ಲವು ಸಿದ್ಧ ॥ ಪು. 62

ಉತ್ತಾನಪಾದರಾಜನ ನಗರದ ವರ್ಣನೆ ತುಂಬ ಸುಂದರವಾಗಿದೆ. ಅಂಗಡಿ ಬೀದಿಗಳು. ಮಾರುಕಟ್ಟೆ, ಹೂವಾಡಗಿತ್ತಿಯರ ಬೆಡಗು, ರತ್ನಪಡಿ ವ್ಯಾಪಾರಿಗಳ ವೈಭವ–ಬಹು ಸೊಗಸಾಗಿ ವರ್ಣಿಸಲ್ಪಟ್ಟಿದೆ.

ಧ್ರುವನು ತಪಸ್ಸಿಗೆಂದು ಹೋದ ವನದ ವರ್ಣನೆ ಚೆಲುವಾಗಿದೆ. ವೃಕ್ಷಜಾತಿಗಳ ಹೆಸರುಗಳು ಅಚ್ಚರಿ ತರಿಸುವಂತೆ ಇವೆ. ಮರಬಳ್ಳಿಗಳ ಕನ್ನಡ ಶಬ್ದಕೋಶವನ್ನೇ ಇಲ್ಲಿ ಕಾಣಬಹುದು. ಹಾಗೆಯೇ ನಾನಾ ಬಗೆಯ ಪ್ರಾಣಿಗಳ ಮತ್ತು ಪಕ್ಕಿಗಳ ಹೆಸರು ಇಲ್ಲಿ ದೊರೆಯುತ್ತವೆ.

ಸರಳೆ ಬೆಳ್ಳಕ್ಕಿ ಸಾರಸಜಕ್ಕವಕ್ಕಿಯು
ಗೊರವ ಗೀಜಗ ಹಸುಬಗಳು ।
ವರಗುಮ್ಮವಕ್ಕಿ ಲಾವುಗೆ ಬೆಬ್ಬಕ್ಕಿ ಚಕೋರ
ವಿರುವ ಕಾನನವು ಕಾಣಿಸಿತು ॥ ಪು. 109

ಧ್ರುವನು ವಿಷ್ಣುವನ್ನು ಮೆಚ್ಚಿಸಿ ನಗರಕ್ಕೆ ಹಿಂದಿರುಗಿದಾಗ ತಾಯಿ ಸುನೀತಿಯ ಸಂತೋಷಕ್ಕೆ ಪಾರವಿಲ್ಲ.

ತೋಳುಗಳಿಂ ಬಿಗಿದಪ್ಪಿ ತನ್ನಯ ತೊಡೆ
ಮೇಲೆ ಕುಳ್ಳಿರಿಸಿ ಮುದ್ದಿಸುತ ।
ಬಾಲನ ನೆತ್ತಿಯ ವಾಸನಿಸುತಲಾಗ
ಲಾಲಿಸಿದಳು ಪ್ರಿಯೋಕ್ತಿಯಲಿ ॥ ಪು. 129

ಛಂದಸ್ಸು, ಶಬ್ದಶುದ್ಧಿ–ಮೊದಲಾದ ಶಾಸ್ತ್ರೀಯ ವಿಷಯವನ್ನು ಈ ಕೃತಿಯಲ್ಲಿ ನಾವು ನಿರೀಕ್ಷಿಸಬಾರದು. ಕವಿಗೆ ಆ ಕಡೆ ಗಮನವಿಲ್ಲ. ಭಕ್ತಿಪ್ರಧಾನವಾದ ಕಾವ್ಯ ವಿದು, ಶೃಂಗಾರ, ವಾತ್ಸಲ್ಯ, ಕರುಣೆ, ಉತ್ಸಾಹ, ಭಯಾನಕ, ವೀರ–ಇವುಗಳ ಪೋಷಣೆ ಚೆನ್ನಾಗಿ ಬಂದಿದೆ. ಚಮತ್ಕಾರದ ವರ್ಣನೆಗಳೂ ಬೇಕಾದಷ್ಟಿವೆ. ಸಾಂಪ್ರದಾಯಿಕವಾದ ಮಹಾಕಾವ್ಯದ ಲಕ್ಷಣವನ್ನು ಇದರಲ್ಲಿ ಕಾಣಬಹುದು. ಚಿಕ್ಕ ಕಥೆಯನ್ನು ಕಲ್ಪನೆಯಿಂದ ವಿಸ್ತರಿಸಿ ರಸವತ್ತಾಗಿ ರಚಿಸಿದ ಲಲಿತ ಕಾವ್ಯವಿದು. ಈ ಕೃತಿಯನ್ನು ಕಷ್ಟಪಟ್ಟು ಸಂಪಾದಿಸಿ ಪ್ರಕಟಿಸಿರುವ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನಕ್ಕೆ ಕನ್ನಡಿಗರು ಕೃತಜ್ಞರು.

—ಎನ್. ರಂಗನಾಥಶರ್ಮಾ

ಗ್ರಂಥಾವಲೋಕನ

ಕನ್ನಡ ಕಾವ್ಯಗಳಲ್ಲಿ ನವರಸಗಳು*

ಕಾವ್ಯಗಳಲ್ಲಿ ಮುಖ್ಯವಾಗಿ ಆಸ್ವಾದ್ಯವಾದುದು ಹಾಗೂ ಕಾವ್ಯಗಳಿಗೆ ಹಿರಿಮೆಯನ್ನುಂಟುಮಾಡುವಂತಹದು ರಸ. ಅದು ಶೃಂಗಾರ, ಹಾಸ್ಯ, ಕರುಣ, ವೀರ, ರೌದ್ರ, ಅದ್ಭುತ, ಭಯಾನಕ, ಬೀಭತ್ಸ, ಶಾಂತ-ಎಂದು ಒಂಬತ್ತು ವಿಧ. ಭಕ್ತಿ ವಾತ್ಸಲ್ಯಗಳು ರಸಗಳೇ ? ಎಂಬ ಚರ್ಚೆ ನಡೆದಿದೆ. ಅವು ಭಾವಗಳಲ್ಲದೆ ರಸಗಳಲ್ಲ, ರಸಾಂತರ್ಗತಗಳು ಎಂದು ಅಭಿಪ್ರಾಯವಿದೆ. ಇಂತಹ ನವರಸಗಳನ್ನು ಸೋದಾಹರಣವಾಗಿ ವಿವರಿಸುವ ಗ್ರಂಥಗಳು ಕನ್ನಡದಲ್ಲಿ ಕಡಿಮೆ. ಕಾವ್ಯಾವಲೋಕನದಲ್ಲಿ ಬರುವ ರಸಪ್ರಕರಣ, ಸಾಳ್ವನ ರಸರತ್ನಾಕರ-ಉಲ್ಲೇಖನೀಯಗಳು. ಇಂತಹ ಕವಿಕೃತ ರಸಗ್ರಂಥಗಳು ಸುಲಭಗ್ರಾಹ್ಯಗಳಲ್ಲ, ಆದುದರಿಂದ ಹೊಸಗನ್ನಡದಲ್ಲಿ ವಿವರಣೆಗಳೊಂದಿಗೆ ನವರಸಗಳನ್ನು ವಿವರಿಸುವ ಗ್ರಂಥರಚನೆ ಅವಶ್ಯವೇ ಸರಿ. ಈ ಆವಶ್ಯಕತೆಯನ್ನು ನೆರವೇರಿಸುವ ಒಂದು ರಚನೆ-ಕನ್ನಡ ಕೈಪಿಡಿಯ ರಸಪ್ರಕರಣ. ಇದೀಗ 'ಕನ್ನಡ ಕಾವ್ಯಗಳಲ್ಲಿ ನವರಸಗಳು' ಎಂಬೀ ಪುಸ್ತಕ ಒಂದು ಹೊಸ ಪ್ರಕಟನೆಯಾಗಿರುತ್ತದೆ.

ಇದರಲ್ಲಿ ಲೇಖಕರು ರಸವೆಂದರೇನು ಎಂಬುದನ್ನು ಕಾವ್ಯಪ್ರಸಂಗಗಳ ಆಧಾರದೊಡನೆ ನಿರೂಪಣೆ ಮಾಡಿದ್ದಾರೆ. ಒಂಬತ್ತು ರಸಗಳನ್ನು ಪರಿಚಯ ಮಾಡಿಕೊಟ್ಟಿದ್ದಾರೆ. ರಸದೋಷಗಳನ್ನು ಉದಾಹರಿಸಿ ತಿಳಿಸಿದ್ದಾರೆ. ಅನಂತರ ಶೃಂಗಾರರಸದಿಂದ ಪ್ರಾರಂಭಿಸಿ ಎಲ್ಲ ರಸಗಳಿಗೂ ಉದಾಹರಣೆಗಳನ್ನು ಕೊಟ್ಟು, ಅಲ್ಲಲ್ಲಿಯೆ ವಿವರಣೆಗಳನ್ನು ಒದಗಿಸಿದ್ದಾರೆ. ಪೂರ್ವ ಕವಿಗಳ ಕಾವ್ಯಗಳಿಂದಲ್ಲದೆ-ಡಿ.ವಿ.ಜಿ., ಪು.ತಿ.ನ., ಕುವೆಂಪು, ಜಿ.ಪಿ. ರಾಜರತ್ನಂ, ಕೆ.ಎಸ್. ನರಸಿಂಹಸ್ವಾಮಿ, ಎಸ್.ವಿ. ಪರಮೇಶ್ವರ ಭಟ್ಟ, ಸಿ.ಪಿ.ಕೆ., ಕೈಲಾಸಂ, ಬೀಚಿ, ಬೇಂದ್ರೆ—ಮುಂತಾದವರ ಕಾವ್ಯೋಕ್ತಿಗಳನ್ನು ಉದಾಹರಣೆಗೆ ಬಳಸಿರುತ್ತಾರೆ. ಜಾನಪದ ಪದ್ಯಗಳನ್ನೂ ಉದಾಹರಿಸಿರುತ್ತಾರೆ. ನವರಸಗಳಲ್ಲಿ ವೀರರಸವನ್ನು 'ರಸಚಕ್ರವರ್ತಿ' ಎಂದಿರುವ ಮಹೀಶವಾಡಿಯವರ ಹೇಳಿಕೆಯನ್ನು ಸಮರ್ಥಿಸಿರುತ್ತಾರೆ.

ಪ್ರಸ್ತುತ ಕೃತಿ ಹೇಗಿದ್ದರೂ ಒಂದು ಶಾಸ್ತ್ರ ಗ್ರಂಥ. ಇದನ್ನು ರಚಿಸುವಲ್ಲಿ ಲೇಖಕರ ಶ್ರಮ ಬಹಳವಾಗಿದ್ದಿತೆಂಬುದು ನಿಶ್ಚಯ. ಆದರೂ ಗ್ರಂಥ ಪರಿಷ್ಕಾರಣ ದೃಷ್ಟಿಯಿಂದ ಕೆಲವು ಅರಕೆಗಳು ಕಂಡುಬರುತ್ತವೆ. ಮುಂದಿನ ತಿದ್ದುಪಡಿಗಾಗಿ

---

* ಲೇಖಕರು ಮತ್ತು ಪ್ರಕಾಶಕರು : ಮು. ನ, ಅನಂತರಾಮನ್
316, 9ನೇ ಮುಖ್ಯರಸ್ತೆ, ಹನುಮಂತನಗರ, ಬೆಂಗಳೂರು–19
ಆಕೃತಿ : ಕಿರೀಟ ಅಷ್ಟದಳ, ಪುಟಗಳು : 145. ಬೆಲೆ : ರೂ. 9–00, 1983 ಪ್ರ. ಮು.

ಅವನ್ನಿಲ್ಲಿ ಸೂಚಿಸಬೇಕಾಗುತ್ತದೆ. ಹಲವು ಕಡೆಗಳಲ್ಲಿ ಲೇಖಕರ ವಾಕ್ಯರಚನೆಯೇ ಸರಿಯಿಲ್ಲ. ಉದಾ :

(1) ಕೈಲಾಸಂ ಅವರ 'ಪಾಕವಿಧಾನ' ಎಂಬ ಅಷ್ಟಪಟ್ಟದಿಯಲ್ಲಿ ಗಾಂಧೀಜಿಯನ್ನು ಮಾಡುವ ಸುಲಭೋಪಾಯವೊಂದನ್ನು ಗಾಂಪತನದ ಮೂಲಕ ಹಾಸ್ಯವನ್ನು ಕಾಣಬಹುದು" (ಪುಟ ೬೦)-ಇದೊಂದು ಅಶುದ್ಧ ವಾಕ್ಯ.

(2) ನಿಶ್ಚಿತ ಒಂದು ಗುರಿಯಿಲ್ಲದೆ......ಎಂಬ ಕವಿತೆಯು ಉದ್ದಕ್ಕೂ ವ್ಯಂಗ್ಯವಿವೆ" (ಪುಟ ೬೧)-ಈ ವಾಕ್ಯದಲ್ಲಿ ಕರ್ತೃ ಕರ್ಮ ಕ್ರಿಯೆಗಳು ಹೊಂದಿಕೊಳ್ಳುವುದಿಲ್ಲ.

(3) ಎರಡನೆ ನಾಗವರ್ಮನು ಶ್ರೀರಂಗಪಟ್ಟಣದ (64ನೇ ಶಾಸನದ್ದು) ತನ್ನ ಕಾವ್ಯದಲ್ಲಿ ಉತ್ತಮ ಹಾಸ್ಯಕ್ಕೆ ಉದಾಹರಣೆ ಕೊಟ್ಟಿದ್ದಾನೆ (ಪುಟ ೫೧) ಇಲ್ಲಿ ಅರ್ಥಾಭಾಸವಿದೆ. ಇಂತಹ ದೋಷಮಯ ವಾಕ್ಯರಚನೆಗಳು ಅಲ್ಲಲ್ಲಿ ಕಾಣಿಸುತ್ತವೆ; ಓದಿ ತಿಳಿಯಲು ತೊಡಕಾಗುತ್ತವೆ. 'ಉದ್ಧೃತ' ಎಂದಿರಬೇಕಾದುದನ್ನು ಲೇಖಕರು 'ಉದೃತ' ಎಂತಲೇ ಬರೆದುಕೊಂಡಿದ್ದಾರೆ. 'ಉದೃತ' ಎಂದಾಗ 'ಶ್ರೇಷ್ಠವಾದ ಋತ' ಎಂದು ಅರ್ಥವಾಗುವುದಲ್ಲದೆ 'ಆಯ್ದುಕೊಂಡದ್ದು' ಎಂಬ ಅರ್ಥವನ್ನು ಅದು ಕೊಡಲಾರದು. ಇನ್ನು ಅಚ್ಚಿನ ತಪ್ಪುಗಳಂತೂ ಈ ಗ್ರಂಥದಲ್ಲಿ ಅಸಂಖ್ಯ. ಅವಕ್ಕೆ ಒಪ್ಪೋಲೆಯಿಲ್ಲ. ಕೇಶಿರಾಜನು ಅಸಭ್ಯ ವೃತ್ತಿಗಾಗಿ ಉದಾಹರಿಸಿರುವ "ಬಡವಾದಿರರಸ ಕಾಲೊಳ್ ನಡೆದಪಿರ್..." ಎಂಬುದು ವ್ಯಂಗ್ಯ ಹಾಸ್ಯ. ಲೇಖಕರೆಂದಿರುವಂತೆ ಅದು ಜಿಪುಣ ರಾಜನ ವರ್ಣನೆಯಲ್ಲ, ದರಿದ್ರ ಭಿಕ್ಷುಕನೊಬ್ಬನನ್ನು ಸಂಬೋಧಿಸಿರುವ ಮಾತು.

ಪ್ರೊ॥ ಎಂ.ವಿ. ಸೀತಾರಾಮಯ್ಯ ಹಾಗೂ ವಿದ್ವಾನ್ ರಂಗನಾಥಶರ್ಮಾ–ಇವರ ಮಾರ್ಗದರ್ಶನದಿಂದಾಗಿ, ಈ ಗ್ರಂಥರಚನೆ ಲಕ್ಷ್ಯಲಕ್ಷಣಾನ್ವಯದಲ್ಲಿ ಪರಿಷ್ಕಾರವಾಗಿರುವುದು ಮೆಚ್ಚತಕ್ಕುದಾಗಿದೆ. ಇತರ ದೋಷಗಳನ್ನು ಪುನರ್ಮುದ್ರಣದಲ್ಲಿ ಸರಿಗೊಳಿಸಬಹುದಾಗಿದೆ. ಕಾವ್ಯ ವ್ಯಾಸಂಗಕ್ಕೆ, ರಸಗ್ರಹಣಕ್ಕೆ ಈ ಪುಸ್ತಕ ಸರಳ ಸಹಕಾರಿಯಾಗುವುದು.

—ಟಿ. ಕೇಶವ ಭಟ್ಟ

'ಶ್ರೀ' ನೆನಪಿನಲ್ಲಿ ವಿದ್ವಜ್ಜನರ ಜ್ಞಾನಲೋಚನ

ಕನ್ನಡ ಭಾಷೆ–ಸಾಹಿತ್ಯಗಳ ಏಳಿಗೆಯ ಮೂಲಕ ಸಂಸ್ಕೃತಿ ಹಾಗೂ ಜ್ಞಾನ ಸಂಪತ್ತು ಪ್ರಗತಿಗೊಳ್ಳುವಂತಹ ಕಾರ್ಯೋನ್ಮುಖ ಧ್ಯೇಯವಿಟ್ಟು 1979ರಲ್ಲಿ ಸ್ಥಾಪಿತವಾದುದು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಎಂಬ ಸಾಹಿತ್ಯ ಸಂಸ್ಥೆ. ಈ ಸಂಸ್ಥೆ ಇದುವರೆಗೆ ತನ್ನ ಪರಿಚಾಯಕವಾಗಿ ಆಗಾಗ ವಾರ್ತಾ ಸಂಚಿಕೆಗಳನ್ನು ಪ್ರಕಟಿಸುತ್ತಾ ಬಂದಿದೆ. ಇದೀಗ 1983ನೆಯ ಜೂನ್‌ನಿಂದ 'ಲೋಚನ' ಎಂಬ ಷಾಣ್ಮಾಸಿಕ ಪತ್ರಿಕೆಯನ್ನು ಹೊರತರಲು ತೊಡಗಿದೆ. ಅದರ ಪ್ರಥಮ ಸಂಪುಟದ ಪ್ರಥಮ ಸಂಚಿಕೆ ಇದು.

ಇದೊಂದು ವಿದ್ವತ್ಪತ್ರಿಕೆ. ಸಂಶೋಧನ ಲೇಖನಗಳೊಂದಿಗೆ ಕಾವ್ಯಶಾಸ್ತ್ರ ವಿಮರ್ಶ ವಿಷಯಗಳನ್ನೊಳಗೊಂಡು ಇದು ಈ ಸಂಸ್ಥೆಯ ಧ್ಯೇಯಸಾಧನೆಗಳ ಮುಖವಾಣಿಯಂತಿರುತ್ತದೆ. ಈ ಬಗೆಯ ಪತ್ರಿಕೆಗಳು ಕನ್ನಡದಲ್ಲಿರುವುವು ಬೆರಳೆಣಿಕೆಯವು. ಈ ಪರಿಸ್ಥಿತಿಯಲ್ಲಿ ಪತ್ರಿಕೆ ವಿದ್ವಜ್ಜನರ ಜ್ಞಾನಲೋಚನವಾಗಿ. ಓದುಗರಿಗೆ ವಿಶೇಷತರ ಅರಿವೆಂಬ ತೃತೀಯ ಲೋಚನವನ್ನು ಒದಗಿಸುವಂಥಾದ್ದಾಗಿದೆ.

—ಕನ್ನಡಪ್ರಭ, 15-1-84, ಪು. V

ಶ್ರದ್ಧಾಂಜಲಿ

ಪ್ರೊ॥ ವಿ. ಜಿ. ಕುಲಕರ್ಣಿ

ಪ್ರೊ॥ ವಿ. ಜಿ. ಕುಲಕರ್ಣಿ ಅವರು ಮಾರ್ಚ 4ರಂದು ಪುಣೆಯಲ್ಲಿ ದೈವಾಧೀನರಾದರು. ಅವರಿಗೆ 79 ವರ್ಷ ವಯಸ್ಸಾಗಿತ್ತು. ಅವರು ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಇಂಗ್ಲಿಷ್ ಹಾಗೂ ಕನ್ನಡ ಪ್ರಾಧ್ಯಾಪಕರಾಗಿ 26 ವರ್ಷಕಾಲ ಸೇವೆ ಸಲ್ಲಿಸಿದ್ದರು. 1960ರಲ್ಲಿ ಉದ್ಯೋಗದಿಂದ ನಿವೃತ್ತರಾಗುವ ಮುನ್ನ ಕೆಲವು ಕಾಲ ಕಾಲೇಜಿನ ಪ್ರಿನ್ಸಿಪಾಲರೂ ಆಗಿದ್ದರು. ಕರ್ನಾಟಕ ವಿಶ್ವವಿದ್ಯಾನಿಲಯದ ಗಾಂಧಿ ಅಧ್ಯಯನ ಸಂಸ್ಥೆಯ ಸ್ಥಾಪಕ–ನಿರ್ದೇಶಕರಾಗಿದ್ದರು. ಅವರು ಒಳ್ಳೆಯ ಅಭಿನಯ ಪಟುವೂ ಆಗಿದ್ದು. ಬಿ.ಎಂ.ಶ್ರೀ.ಯವರ ಗದಾಯುದ್ಧ ನಾಟಕದ ದುರ್ಯೋಧನನ ಪಾತ್ರವನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತಿದ್ದರು.

ತ. ರಾ. ಸು.

(ಜನನ : 21–4–1920 ; ನಿಧನ : 10–4–1984)

ಜನಪ್ರಿಯ ಕಾದಂಬರಿಕಾರರೆಂದು ಹೆಸರಾಗಿದ್ದ "ತರಾಸು" ಅವರು ರಾಮನವಮಿಯಂದು ತಮ್ಮ 64ನೆಯ ವಯಸ್ಸಿನಲ್ಲಿ ಸಾಹಿತ್ಯ ಪ್ರೇಮಿಗಳನ್ನೂ ಅಪಾರ ಸಂಖ್ಯೆಯ ಅಭಿಮಾನಿವಾಚಕರನ್ನೂ ಶೋಕಸಾಗರದಲ್ಲಿ ಮುಳುಗಿಸಿ ನಮ್ಮನ್ನಗಲಿ ಹೋದದ್ದು ಕನ್ನಡಿಗರ ದುರ್ದೈವ. ಗಳಗನಾಥ, ಬಿ. ವೆಂಕಟಾಚಾರ್ಯ, ಅ.ನ.ಕೃ. ಇವರ ಸಾಲಿಗೆ ಸೇರತಕ್ಕ ಜನಪ್ರಿಯ ಕಾದಂಬರಿಕಾರರು ತ.ರಾ.ಸು. ಮೊದಲಿನ ಇಬ್ಬರು ಹೇಳಿ ಕೇಳಿ ಬೇರೆಯ ಭಾಷೆಗಳಿಂದ (ಮರಾಠಿ. ಬಂಗಾಳಿ) ಕಾದಂಬರಿಗಳನ್ನು ಅನುವಾದ ಮಾಡಿದವರು. (ಹೀಗೆಂದ ಮಾತ್ರಕ್ಕೆ ಅವರ ದರ್ಜೆ ಕಡಮೆಯದು ಎಂದು ನಮ್ಮ ಅಭಿಪ್ರಾಯವಲ್ಲ. ಕಾದಂಬರೀ ಸಾಹಿತ್ಯಪ್ರಕಾರವನ್ನು ಕನ್ನಡಿಗರಿಗೆ ಪರಿಚಯಿಸಿ, ವಾಚನಾಭಿರುಚಿಯೇ ಇಲ್ಲದ ಕಾಲದಲ್ಲಿ ಕೊಂಡು ಪುಸ್ತಕ ಓದಹಚ್ಚಿದ ಪುಣ್ಯಶ್ಲೋಕರು ಅವರು.) ಸ್ವತಂತ್ರ ಕಾದಂಬರಿಗಳ ಮೂಲಕ ಸಾಮಾನ್ಯ ಜನರಲ್ಲೂ ವಾಚನಾಭಿರುಚಿ ಹುಟ್ಟಿಸಿದ ಶ್ರೇಯಸ್ಸು ಅ.ನ.ಕೃ.ಗೆ ಸಲ್ಲಬೇಕು. ತಮ್ಮ ಜಿಲ್ಲೆಯವರೇ ಆದ ದಿವಂಗತ ಸಿದ್ದಪ್ಪನ ಹಳ್ಳಿಯ ಕೃಷ್ಣಶರ್ಮರ ಪ್ರಭಾವಕ್ಕೆ ಒಳಗಾಗಿ ರಾಷ್ಟ್ರೀಯತೆಯನ್ನೂ ಅವರ ಅನನುಕರಣೀಯವಾದ ಗದ್ಯಶೈಲಿಯ ಸೊಬಗನ್ನೂ ಮೈಗೂಡಿಸಿಕೊಂಡಿದ್ದ ತ.ರಾ.ಸು., ಅ.ನ.ಕೃ. ಅವರ ಸ್ನೇಹಶೀಲ. ಸಜ್ಜನಿಕೆ. ಪ್ರತಿಭೆಯನ್ನು ಗುರುತಿಸಿ ಅವರಿಗೆ ಉತ್ತೇಜನ ಕೊಡುವ ಜಾಯಮಾನ. ಇವುಗಳಿಂದ ಆಕರ್ಷಿತರಾಗಿ ಅವರನ್ನು ತಮ್ಮ ಸಾಹಿತ್ಯ ಗುರುವಾಗಿ ಸ್ವೀಕರಿಸಿದರು. ಠಾಕೂರರಂತೆ ಕವಿಯಾಗಬೇಕೆಂದು ಬಯಸಿದ್ದ ಅವರು ಅ.ನ.ಕೃ. ಪ್ರಭಾವದಿಂದಾಗಿ ಕಾದಂಬರಿಕಾರರಾದರು.

ತ.ರಾ.ಸು. ಗಣ್ಯಸಾಹಿತಿ ಆದದ್ದಕ್ಕೆ ಅವರ ಸ್ವಪ್ರತಿಭೆ, ಅವರು ಬೆಳೆದು ಬಂದ ಸಾಹಿತ್ಯದ ಪರಿಸರ ಇವು ಪ್ರಧಾನ ಕಾರಣಗಳು. ತಂದೆ ರಾಮಸ್ವಾಮಯ್ಯನವರ ಅಣ್ಣ ತಳಕಿನ ವೆಂಕಣ್ಣಯ್ಯನವರು, ಚಿಕ್ಕಪ್ಪ ತ. ಸು. ಶಾಮರಾಯರು. ವೆಂಕಣ್ಣಯ್ಯನವರ ಅಳಿಯ 'ಕ್ಷೀರಸಾಗರ' (ನಾಟಕಕಾರ. ಕತೆಗಾರ). ಇವರ ನಡುವೆ ಸಾಹಿತ್ಯದ

ಗಾಳಿ ಬೀಸುತ್ತಿದ್ದ ಪರಿಸರದಲ್ಲಿ ತ.ರಾ.ಸು. ಉಸಿರೆಲ್ಲವೂ ಕನ್ನಡ ಸಾಹಿತ್ಯಮಯ ವಾಯಿತು. ಓದಿದ್ದು ಇಂಟರ್‌ಮೀಡಿಯಟ್‌ವರೆಗಾದರೂ ಹಳಗನ್ನಡ ಸಾಹಿತ್ಯ, ನವೋದಯ ಯುಗದ ಸಾಹಿತ್ಯ, ಎಲ್ಲವೂ ತರುಣ ತರಾಸು. ಅವರ ಅಡುಂಬೊಲ. ಈ ಕಾರಣದಿಂದ, ಅ.ನ.ಕೃ. ಪ್ರಭಾವಕ್ಕೆ ಒಳಗಾಗಿದ್ದರೂ (ಅ.ನ.ಕೃ. ಅವರು ಹಳಗನ್ನಡ ಸಾಹಿತ್ಯಪ್ರೇಮಿ) ತಮ್ಮದೇ ಆದ ಕಾವ್ಯಮಯವಾದ, ಅಭಿಜಾತವಾದರೂ ಸರಳ ಸುಂದರವಾದ ಶೈಲಿಯನ್ನು ರೂಪಿಸಿಕೊಂಡರು. ಅ.ನ.ಕೃ. ಅವರಲ್ಲಿ ಕಾಣದಿದ್ದ ತ.ರಾ.ಸು. ವಿಶಿಷ್ಟತೆ ಎಂದರೆ, ಸ್ಥಳ–ಸನ್ನಿವೇಶ ವರ್ಣನಾಕೌಶಲ, ಪ್ರಯೋಗಶೀಲದ ಪರಿಣಾಮಫಲವಾದ ವೈವಿಧ್ಯದಿಂದ ಕೂಡಿದ ತಂತ್ರ ಕೌಶಲ, ಅವಸರವಿಲ್ಲದ ಆದರೂ ಪ್ರಲಂಬನಪ್ರವಣವಲ್ಲದ ನಿರೂಪಣಾ ವಿಧಾನ ತುಸು ಗ್ರಾಂಥಿಕ ಎನ್ನಬಹುದಾದರೂ ಬನಿಯಾದ ಮೋಹಕ ಶೈಲಿ, ಸಾಮಾನ್ಯ ಓದುಗರಿಗೆ ಪ್ರಿಯ ಎನ್ನಿಸುವ ಭಾವುಕತೆ, ಮುಂತಾದ ಅನೇಕ ಗುಣಗಳು ಮೇಳಯಿಸಿ ಸಿದ್ಧಿಪಡೆಯುತ್ತಿದ್ದ ಶಬ್ದಶಿಲ್ಪ. ಕಾರಂತರ ಅನೇಕ ಕಾದಂಬರಿಗಳಲ್ಲಿ ಒಂದು ಸಾಮಾಜಿಕ–ಭೌಗೋಳಿಕ ಪ್ರಾದೇಶಿಕತೆಯನ್ನು ಗುರುತಿಸಬಹುದಾದ ಎಡೆಯಲ್ಲಿ ತ.ರಾ.ಸು. ಅವರ ಐತಿಹಾಸಿಕ ಕಾದಂಬರಿಗಳಲ್ಲಿ ಐತಿಹಾಸಿಕ–ಭೌಗೋಳಿಕ ಪ್ರಾದೇಶಿಕತೆಯನ್ನು ಗುರುತಿಸಬಹುದು. ಚಿತ್ರದುರ್ಗದ ಸಮಗ್ರ ಇತಿಹಾಸ ತ.ರಾ.ಸು. ಅವರ ಚಾರಿತ್ರಿಕ ಕಾದಂಬರಿಗಳಲ್ಲಿ ಮರುಹುಟ್ಟು ಪಡೆಯಿತು. 'ಕಂಬನಿಯ ಕುಯಿಲು' ಇಂದ ಮೊದಲಾದ ಅವರ ಚಿತ್ರದುರ್ಗದ ವೀರಗಾಥೆ 'ದುರ್ಗಾಸ್ತಮಾನ'ದಲ್ಲಿ ಅನಿರೀಕ್ಷಿತವಾಗಿ ಮುಗಿದು ಒಬ್ಬ ಶ್ರೇಷ್ಠ ಕಾದಂಬರಿಕಾರನ ಅಸ್ತಮಾನಕ್ಕೆ ಸಂಕೇತವಾಯಿತು. ರಾಜ್ಯಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದ ಈ ಕಾದಂಬರಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಮರಣೋತ್ತರ ಪ್ರಶಸ್ತಿಯನ್ನು ಪಡೆಯಲು ಸರ್ವಥಾ ಅರ್ಹವಾಗಿದೆ—ಇದು ಅನೇಕ ಸಹೃದಯರ ಅಭಿಪ್ರಾಯ, ಅಪೇಕ್ಷೆ.

ಐತಿಹಾಸಿಕ ಕಾದಂಬರಿಗಳಷ್ಟೇ ಅಲ್ಲದೆ ಉತ್ತಮವಾದ ಸಾಮಾಜಿಕ ಕಾದಂಬರಿ ಗಳನ್ನೂ ರಚಿಸಿದ್ದಾರೆ ತ.ರಾ.ಸು. (ಬಿಡುಗಡೆಯ ಬೇಡಿ, ಚಂದವಳ್ಳಿಯ ತೋಟ. ಮುಂಜಾವಿಂದ ಸಂಜೆಯವರೆಗೆ, ಬೆಂಕಿಯ ಬಲೆ, ಇತ್ಯಾದಿ). ಇವರ ಐತಿಹಾಸಿಕ ಕಾದಂಬರಿಗಳು ತ.ರಾ.ಸು. ಅವರ ಚರಿತ್ರೆಯ ಪಾಂಡಿತ್ಯಕ್ಕೂ ಸಂಶೋಧನಮತಿಗೂ ನಿದರ್ಶನಗಳು. ಎಂತಲೇ ಇವು ಪಂಡಿತ ಪಾಮರರಿಬ್ಬರಿಗೂ ಪ್ರಿಯವೆನಿಸುವವು. ಇತಿಹಾಸ ಪ್ರಜ್ಞೆ, ಕಲ್ಪನಾ ಚಾತುರ್ಯ ಇವುಗಳ ಯೋಗ್ಯ ಸಂಲಗ್ನ ತ.ರಾ.ಸು. ಐತಿಹಾಸಿಕ ಕಾದಂಬರಿಗಳ ಹೆಚ್ಚಳ.

ತ.ರಾ.ಸು. ಕಾದಂಬರಿಗಳು ಕೆಲವು (ಹಂಸಗೀತೆ. ಚಂದವಳ್ಳಿಯ ತೋಟ, ಚಕ್ರತೀರ್ಥ ಇತ್ಯಾದಿ) ವಾಕ್‌ಚಿತ್ರಗಳೂ ಆಗಿರುವುದು ಮಹತ್ವದ ಸಂಗತಿ ಅಲ್ಲದಿದ್ದರೂ ಉಲ್ಲೇಖನಾರ್ಹ.

ಪ್ರತಿಷ್ಠಾನ ವಾರ್ತೆ

ಬಿ.ಎಂ.ಶ್ರೀ. ಜನ್ಮಶತಮಾನೋತ್ಸವ
ಮತ್ತು
ಬಿ.ಎಂ.ಶ್ರೀ. ಪ್ರತಿಷ್ಠಾನದ ಐದನೆಯ ಹುಟ್ಟುಹಬ್ಬ

ಮೇ 5, 6, 1984, ಈ ಎರಡೂ ದಿನ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ಬಿ. ಎಂ. ಶ್ರೀ. ಪ್ರತಿಷ್ಠಾನವು ಗೋಖಲೆ ವಿಚಾರ ಸಂಸ್ಥೆ ಮತ್ತು ಎ.ಆರ್.ಕೃ. ಸಂಸ್ಕೃತಿ ಪೀಠಗಳ ನೆರವಿನೊಂದಿಗೆ ವಿಶಿಷ್ಟವಾದ ರೀತಿಯಲ್ಲಿ ಕಾರ್ಯಕ್ರಮ ನಡಸಿತು.

ಬಿ.ಎಂ.ಶ್ರೀ. ಜನ್ಮಶತಮಾನೋತ್ಸವ

5–5–1984 ಶನಿವಾರ ಬೆಳಗ್ಗೆ **'ಬಿ.ಎಂ.ಶ್ರೀ. ಮತ್ತು ಅವರ ಕಾಲದ ಸಾಹಿತ್ಯ ಸೇವಕರು'** ಎಂಬ ವಿಷಯ ಕುರಿತು ಎರಡು ಗೋಷ್ಠಿಗಳು ನಡೆದವು. ಶ್ರೀ ಎಸ್. ಎಸ್. ರಾಮಸ್ವಾಮಿ ಅಯ್ಯರ್ ಅವರ 'ಕರುಣಾಳು ಬಾ ಬೆಳಕೆ' ಪ್ರಾರ್ಥನೆಯೊಂದಿಗೆ ಆರಂಭವಾದ ಮೊದಲ ಗೋಷ್ಠಿಯ ("ಭಾಷೆ–ಸಾಹಿತ್ಯ") ಅಧ್ಯಕ್ಷತೆಯನ್ನು ಶ್ರೀ ನಿಟ್ಟೂರು ಶ್ರೀನಿವಾಸ ರಾವ್ ಅವರು ವಹಿಸಿದ್ದರು. ಶ್ರೀ ಡಿ. ಆರ್. ವೆಂಕಟರಮಣನ್ ಅವರು ಬೆಳ್ಳಾವೆ ವೆಂಕಟನಾರಾಯಣಪ್ಪ, ಡಿ.ವಿ.ಜಿ., ಟಿ. ಎಸ್. ವೆಂಕಣ್ಣಯ್ಯ, ಎ.ಆರ್.ಕೃ. ಮತ್ತು ಇತರರ ಬಗ್ಗೆಯೂ, ಪ್ರೊ॥ ಎಸ್. ಆರ್. ಮಳಗಿ ಅವರು ಆಲೂರು ವೆಂಕಟರಾವ್, ಗಳಗನಾಥ, ಬಿ. ವೆಂಕಟಾಚಾರ್ಯ, ಎಂ. ಎನ್. ಕಾಮತ್ ಮತ್ತು ಇತರರ ಬಗ್ಗೆಯೂ, ಶ್ರೀ ಹಂ. ಪ. ನಾಗರಾಜಯ್ಯ ಅವರು ಎ. ಶಾಂತರಾಜಶಾಸ್ತ್ರಿ, ಭುಜಬಲಿಶಾಸ್ತ್ರಿ ಮತ್ತು ಇತರರ ಬಗ್ಗೆಯೂ, ಶ್ರೀಮತಿ ಕಮಲ ಹಂಪನಾ ಅವರು ತಿರುಮಲಾಂಬ, ಆರ್. ಕಲ್ಯಾಣಮ್ಮ, ಡಿ. ಚಂಪಾಬಾಯಿ ಮತ್ತು ಇತರರ ಬಗ್ಗೆಯೂ ಸ್ವಾರಸ್ಯವಾಗಿ ಮಾತನಾಡಿದರು. ಈ ಗೋಷ್ಠಿಯ ನಿರ್ವಹಣೆಯನ್ನು ಶ್ರೀಮತಿ ಕೆ. ಶಾಂತ ಅವರು. ವಂದನಾರ್ಪಣೆಯನ್ನು ಶ್ರೀ ಟಿ. ಎನ್. ಪದ್ಮನಾಭನ್ ಅವರು ನಡಸಿಕೊಟ್ಟರು.

ಶ್ರೀ ಕೆ. ಎಸ್. ಮಧುಸೂದನ ಅವರು ನಡಸಿಕೊಟ್ಟ ಎರಡನೆಯ ಗೋಷ್ಠಿಯ ("ಕಾವ್ಯ") ಅಧ್ಯಕ್ಷರಾದ ಡಾ॥ ರಂ. ಶ್ರೀ. ಮುಗಳಿ ಅವರ ನೇತೃತ್ವದಲ್ಲಿ ಡಾ॥ ವರದರಾಜ ಹುಯಿಲುಗೋಳ. ಆರ್. ಎಸ್. ರಾಮರಾವ್, ಪ್ರೊ॥ ಎಸ್. ಅನಂತ ನಾರಾಯಣ ಅವರು ಮಾತನಾಡಿದರು. ಮೊದಲನೆಯ ಗೋಷ್ಠಿಯಲ್ಲಿ ಬಿ.ಎಂ.ಶ್ರೀ. ಯವರ ಕಾಲದ ಗದ್ಯ ಸಾಹಿತಿಗಳನ್ನು ಕುರಿತು ಚರ್ಚೆ ನಡೆದರೆ, ಈ ಗೋಷ್ಠಿಯಲ್ಲಿ

ಕವಿಗಳನ್ನು ಕುರಿತು ವಿಶೇಷ ಚರ್ಚೆ ನಡೆಯಿತು. ಪಂಜೆ ಮಂಗೇಶರಾವ್, ಪಟ್ಟಿಯಂಗಡಿ ನಾರಾಯಣರಾವ್, ಹುಯಿಲುಗೋಳ ನಾರಾಯಣರಾವ್, ಬೆನಗಲ್ ರಾಮರಾವ್, ಶಾಂತಕವಿ, ಮಂಜೇಶ್ವರ ಗೋವಿಂದ ಪೈ, ಎಸ್. ಜಿ. ನರಸಿಂಹಾಚಾರ್, ಮುಂತಾಗಿ ಬಹುಮಟ್ಟಿಗೆ ಬಿ.ಎಂ.ಶ್ರೀ.ಯವರ ಕಾಲದ ಎಲ್ಲ ಕವಿಗಳನ್ನು ಗುರುತಿಸಿ. ಬಿ.ಎಂ.ಶ್ರೀ.ಯವರ ಇಂಗ್ಲಿಷ್ ಗೀತಗಳ ಅನುವಾದ ಕಾರ್ಯಕ್ಕೆ ಆ ಕವಿಗಳು ಹೇಗೆ ಪೂರ್ವಭಾವಿ ಆವರಣವನ್ನು ಒದಗಿಸಿಕೊಟ್ಟರು, ಅವರುಗಳ ಆರಂಭದ ಕೃಷಿ ಬಿ.ಎಂ.ಶ್ರೀ.ಯವರಿಗೆ ಹೇಗೆ ಸಹಾಯವಾಯಿತು. 'ಶ್ರೀ'ಯವರು ಇಂಗ್ಲಿಷ್ ಗೀತಗಳ ರಚನೆಯ ಮೂಲಕ ಒಂದು ಕಾವ್ಯಪರಂಪರೆಯನ್ನು ಸೃಷ್ಟಿಸಿದ್ದಲ್ಲದೆ ಬಹುಮುಖವಾಗಿ ಕನ್ನಡದ ಪುನರುತ್ಥಾನಕ್ಕಾಗಿ ದುಡಿದ ಅವರು ನಿಸ್ಸಂದೇಹವಾಗಿ ಕನ್ನಡ ನವೋದಯ ಯುಗ ಪ್ರವರ್ತಕರು ಎಂಬ ಪ್ರಶಸ್ತಿಗೆ ಹೇಗೆ ಅರ್ಹರಾದರು ಎಂಬುದನ್ನು ಎಲ್ಲ ಉಪನ್ಯಾಸಕರೂ ಸ್ಪಷ್ಟವಾಗಿ ಸಭಿಕರಿಗೆ ಮನವರಿಕೆಮಾಡಿ ಕೊಟ್ಟರು.

ಪ್ರೊ॥ ಎಸ್. ಅನಂತನಾರಾಯಣ ಅವರು ಬಿ. ಎಂ. ಶ್ರೀ. ಕಾಲದ ಕವಿಗಳ ಸುಮಾರು ಏಳು ಸಾವಿರ ಹೊಸಗನ್ನಡ ಪದ್ಯಗಳ ಸಂಗ್ರಹ ತಮ್ಮ ಬಳಿ ಇದೆ ಎಂದು ಹೇಳಿ ಕೆಲವು ಪದ್ಯಗಳನ್ನು ವಾಚನ ಮಾಡಿದರು. ಬಿ. ಎಂ. ಶ್ರೀ. ಕಾಲದ ಎಲ್ಲ ಕವಿಗಳ ಕೃತಿಗಳನ್ನು ಹುಡುಕಿ ಬಿ. ಎಂ. ಶ್ರೀ. ಪ್ರತಿಷ್ಠಾನ ಪ್ರಕಟಿಸಬೇಕು ಎಂದು ಪ್ರೊ॥ ಎಸ್. ಆರ್. ಮಳಗಿ ಅವರು ಸಲಹೆ ಮಾಡಿದರು. ವಿಶೇಷವಾಗಿ ಶಾಂತ ಕವಿಗಳ ರಚನೆಗಳ ಬಗ್ಗೆ ಶೋಧನೆ ನಡಸಬೇಕು ಎಂದರು.

ಈ ಎರಡೂ ಗೋಷ್ಠಿಗಳ ಆರಂಭದಲ್ಲಿ ಪ್ರಾಸ್ತಾವಿಕ ಭಾಷಣ ಮಾಡಿದ ಪ್ರೊ॥ ಎಂ. ವಿ. ಸೀತಾರಾಮಯ್ಯನವರು ಇತ್ತೀಚೆಗೆ 'ಲಂಕೇಶ್ ಪತ್ರಿಕೆ'ಯಲ್ಲಿ ಬಂದಿದ್ದ "ಬಿ. ಎಂ. ಶ್ರೀ. ನವೋದಯ ಯುಗದ ನೇತಾರರಲ್ಲ. ನೇತಾರರು ಪಂಜೆ" ಎಂಬ ವಾದಕ್ಕೆ ಸಮರ್ಪಕ ಉತ್ತರ ನೀಡಿ ಅದನ್ನು ಅಲ್ಲಗಳೆದರು. ಹೊಸಗನ್ನಡ ಕವಿತೆ ಗಳನ್ನು ಬರೆದವರಲ್ಲಿ ಪಂಜೆ ಮೊದಲಿಗರಾಗಬಹುದೇ ಹೊರತು ಇಡೀ ನವೋದಯ ಯುಗಕ್ಕೆ ಪ್ರವರ್ತಕರಾಗಲಾರರು ಎಂಬ ಅಂಶವನ್ನು ಸ್ಪಷ್ಟಪಡಿಸಿದರು. ಅಧ್ಯಕ್ಷ ರಾಗಿದ್ದ ಡಾ॥ ರಂ. ಶ್ರೀ. ಮುಗಳಿ ಅವರೂ ಈ ಅಂಶವನ್ನು ಸಮರ್ಥಿಸಿದರು. ಈ ಗೋಷ್ಠಿಗೆ ಸಂಬಂಧಪಟ್ಟಂತೆ ವಂದನಾರ್ಪಣೆಯನ್ನು ಶ್ರೀ ಎ. ವೆಂಕಟರಾವ್ ಅವರು ನಡಸಿಕೊಟ್ಟರು.

ಸಂಜೆ 4 ಗಂಟೆಗೆ ನಡೆದ ಕವಿಗೋಷ್ಠಿಯಲ್ಲಿ ಡಾ॥ ಎನ್. ಎಸ್. ಲಕ್ಷ್ಮೀ ನಾರಾಯಣಭಟ್ಟ. ದೊಡ್ಡರಂಗೇಗೌಡ. ಎ. ಆರ್. ಪ್ರತಿಭಾ. ರಮಜಾನ್ ದರ್ಗಾ. ಜಯಸುದರ್ಶನ. ಕೆ. ಎಸ್. ಮಧುಸೂದನ. ಎಚ್. ಎಸ್. ಶಿವಪ್ರಕಾಶ್. ಡಾ॥ ಗೋವಿಂದ ಅ. ಜಾಲಿಹಾಳ. ಎಸ್. ಮಾಲತಿ. ನಾ. ಗೀತಾಚಾರ್ಯ ಮತ್ತು

ಗೋಷ್ಠಿಯ ನಿರ್ವಾಹಕರಾಗಿದ್ದ ಕೆ. ಎಂ. ಮುನಿಕೃಷ್ಣಪ್ಪ ಅವರುಗಳು ಭಾಗವಹಿಸಿದ್ದರು. ಖ್ಯಾತ ಕವಿ ಪ್ರೊ॥ ಎಂ. ಗೋಪಾಲಕೃಷ್ಣ ಅಡಿಗ ಅವರು ಗೋಷ್ಠಿಯ ಅಧ್ಯಕ್ಷರಾಗಿದ್ದರು. ಪ್ರೊ॥ ಎಂ. ವಿ. ಸೀತಾರಾಮಯ್ಯನವರು ಪ್ರಾಸ್ತಾವಿಕ ಭಾಷಣ ಮಾಡುತ್ತ ಬಿ. ಎಂ. ಶ್ರೀ.ಯವರಿಗೆ ಪ್ರಿಯವಾಗಿದ್ದ ಕವಿಗೋಷ್ಠಿಗಳನ್ನು ಏರ್ಪಡಿಸಿದುದರ ಉದ್ದೇಶವನ್ನು ತಿಳಿಸಿ, ಎಲ್ಲ ಪಂಥದ ಕವಿಗಳನ್ನು ಒಂದಡೆ ಸೇರಿಸಿರುವುದು ಈ ಗೋಷ್ಠಿಯ ವೈಶಿಷ್ಟ್ಯ ಎಂದರು. ವಿ. ಆರ್. ಪ್ರತಿಭಾ, ಜಯಸುದರ್ಶನ, ಗೋವಿಂದ ಅ. ಜಾಲಿಹಾಳ ಮತ್ತು ನಾ. ಗೀತಾಚಾರ್ಯ ಅವರುಗಳು ಬಿ.ಎಂ.ಶ್ರೀ. ಅವರನ್ನು ಕುರಿತು ರಚಿಸಿದ್ದ ಒಂದೊಂದು ಕವನವನ್ನು ಓದಿದರು.

ಸಂಜೆ 6 ಗಂಟೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉದಾರ ನೆರವಿನೊಂದಿಗೆ ನಡೆದ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಖ್ಯಾತ ಗಾಯಕ ಶ್ರೀ ಮೈಸೂರು ಅನಂತಸ್ವಾಮಿ ಮತ್ತು ವೃಂದದವರು ಬಿ.ಎಂ.ಶ್ರೀ. ಗೀತೆಗಳನ್ನು ಹಾಡಿದರು. ಸೂಕ್ತ ಸಂಗೀತ ಸಂಯೋಜನೆಯೊಂದಿಗೆ ಭಾವಕ್ಕೆ ತಕ್ಕ ರಾಗದಲ್ಲಿ ಮೂಡಿ ಬಂದ ಗಾಯನ ಕಾರ್ಯಕ್ರಮ ಸಭಿಕರನ್ನು ರಂಜಿಸಿತು. ಸಹಗಾಯಕಿಯರಾಗಿ ಕುಮಾರಿ ಪದ್ಮಾವತಿ ಮತ್ತು ಸುನೀತ ಅವರೂ, ವಾದ್ಯಗಾರರಾಗಿ ಎಂ. ಜಿ. ಶ್ರೀನಿವಾಸರಾವ್, ಬಿ. ಸಂಪತ್ ಮೊದಲಾದವರೂ ಪಾಲ್ಗೊಂಡಿದ್ದರು. ಬಿ. ಎಂ. ಶ್ರೀ. ಗೀತೆಗಳನ್ನು ಹಾಡಿದ ಅನಂತಸ್ವಾಮಿಯವರನ್ನು ಅವರ ಸಹಪಾಠಿಯಾಗಿದ್ದ ಶ್ರೀ ಎಂ. ವಿ. ಪಟ್ಟಾಭಿರಾಮಯ್ಯ ಪರಿಚಯಮಾಡಿಕೊಟ್ಟರು. ಎಂ. ವಿ. ಸೀ. ಅವರು ಎಲ್ಲರನ್ನೂ ಸ್ವಾಗತಿಸಿದರು. ನಾ. ಗೀತಾಚಾರ್ಯ ಅವರು ವಂದಿಸಿದರು. ಈ ಸಂದರ್ಭದಲ್ಲಿ ಎರಡು ದಿನಗಳಲ್ಲೂ ಪ್ರತಿಷ್ಠಾನ ಪುಸ್ತಕ ಪ್ರದರ್ಶನವನ್ನು ವ್ಯವಸ್ಥೆ ಮಾಡಿತ್ತು.

ಬಿ.ಎಂ.ಶ್ರೀ. ಜನ್ಮಶತಮಾನೋತ್ಸವ ಕೇಂದ್ರ ಸಮಿತಿಯ ಸಭೆ

ಬಿ. ಎಂ. ಶ್ರೀ. ಜನ್ಮಶತಮಾನೋತ್ಸವ ಸಂದರ್ಭದಲ್ಲಿ ಸಮಸ್ತ ಕನ್ನಡಿಗರನ್ನೂ ಪ್ರತಿನಿಧಿಸುವಂತೆ ಅಖಿಲ ಭಾರತ ಮಟ್ಟದ ಒಂದು ಕೇಂದ್ರಸಮಿತಿಯನ್ನು ಉತ್ಸವ ಸಮಿತಿ ನಿಯೋಜಿಸಿದೆ. ಭಾರತದ ಮತ್ತು ಕರ್ನಾಟಕದ ಪ್ರಮುಖ ಕೇಂದ್ರಗಳಲ್ಲಿ 'ಶ್ರೀ' ಶತಮಾನ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡುವಾಗ ಈ ಸದಸ್ಯರ ಸಲಹೆ ಸೂಚನೆಗಳ ನೆರವನ್ನು ಪಡೆಯುವುದು ಈ ಸಮಿತಿಯ ರಚನೆಯ ಮುಖ್ಯ ಉದ್ದೇಶ. ಅದರಂತೆ ಉತ್ಸವ ಕಾರ್ಯಕ್ರಮಗಳಿಗೆ ಸಲಹೆ ಸೂಚನೆ ಪಡೆಯುವ ಸಲುವಾಗಿ ಈ ಕೇಂದ್ರ ಸಮಿತಿಯ ಸಭೆಯನ್ನು 6–5–84ರಂದು ಸಂಜೆ 3–30ಕ್ಕೆ ಕರೆಯಲಾಗಿತ್ತು. ಸ್ಥಳೀಯ ಸದಸ್ಯರೇ ಸುಮಾರು ನೂರು ಜನರಷ್ಟಿರುವ ಈ ಸಮಿತಿಯ ಸಭೆಗೆ ಸಾಕಷ್ಟು ಸಂಖ್ಯೆಯಲ್ಲಿ ಸದಸ್ಯರು ಬಾರದಿದ್ದುದು ವಿಷಾದನೀಯ. ಆದರೂ, ಬಂದಿದ್ದ ಸದಸ್ಯರನೇಕರು ಅಮೂಲ್ಯವಾದ ಸಲಹೆಗಳನ್ನು ನೀಡಿದರು.

ಶ್ರೀ ಜಿ. ನಾರಾಯಣ ಅವರು ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದು ಉತ್ಸವದ ಧ್ಯೇಯೋದ್ದೇಶಗಳನ್ನು ಸವಿವರವಾಗಿ ತಿಳಿಸಿದರು. ವಂತಿಗೆ ಸಂಗ್ರಹಿಸುವ ಉದ್ದೇಶದಿಂದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಕರ್ನಾಟಕದ ಯಾವುದೇ ಶಾಖೆಯಲ್ಲಿ ಉಳಿತಾಯ ಖಾತೆ 25/9192ನೇ ನಂಬರಿಗೆ ಜಮಾ ಮಾಡಿದರೂ ನಮಗೆ ತಲುಪುವಂತೆ ನಾವು ವ್ಯವಸ್ಥೆ ಮಾಡಿದ್ದರೂ ಇದುವರೆಗೆ ಒಂದು ರೂಪಾಯಿ ಸಹಾ ಜಮಾ ಆಗಿಲ್ಲ ಎಂದು ವಿಷಾದದಿಂದ ಹೇಳುತ್ತ, ಸಾರ್ವಜನಿಕರ ಈ ಕೆಲಸಕ್ಕೆ ಸಾರ್ವಜನಿಕರೇ ನೆರವು ನೀಡಬೇಕೆಂದರು. ಪ್ರೊ॥ ಎಂ. ವಿ. ಸೀತಾರಾಮಯ್ಯನವರು ಪ್ರಾಸ್ತಾವಿಕ ಭಾಷಣ ಮಾಡುತ್ತ ಉತ್ಸವ ನೆನಪಿನ "ಶ್ರೀಭವನ ನಿಧಿ"ಗೆ ಮತ್ತು ಉತ್ಸವ ನಿಧಿಗೆ ಸಾರ್ವಜನಿಕರು ಉದಾರವಾದ ನೆರವು ನೀಡುವಂತೆ ಮನವಿ ಮಾಡಿದರು.

ಶ್ರೀ ನಾ. ಗೀತಾಚಾರ್ಯ ಅವರು ಈವರೆಗೆ ನಡೆದಿರುವ ಮತ್ತು ಮುಂದೆ ನಡೆಸಲುದ್ದೇಶಿಸಿರುವ ಕಾರ್ಯಕ್ರಮದ ವರದಿಯನ್ನು ಸ್ಥೂಲವಾಗಿ ಪರಿಚಯಿಸಿ ಕೊಟ್ಟರು. ಶ್ರೀ ಬಿ. ಕೆ. ಗುಂಡೂರಾವ್ ಅವರು ನಿರ್ವಾಹಕರಾಗಿದ್ದರು. ಆರ್. ಎಚ್. ರಾಜು ಅವರು ವಂದನಾರ್ಪಣೆ ಮಾಡಿದರು.

ಕೇಂದ್ರ ಸಮಿತಿಯ ಸದಸ್ಯರಾದ ಶ್ರೀ ಎಸ್. ಆರ್. ಮಳಗಿ, ಕೆ. ಎಸ್. ನಾರಾಯಣಸ್ವಾಮಿ, ಟಿ. ಸುನಂದಮ್ಮ, ಕೆ. ಸುಬ್ಬರಾಯನ್, ಎಚ್. ಎಸ್. ದೊರೆಸ್ವಾಮಿ, ಕೆ. ಶಾಂತ, ಜಿ. ಕೆ. ಅನಂತ್, ಟಿ. ಆರ್. ಅಚ್ಯುತರಾವ್. ಬಾಲಸುಬ್ರಹ್ಮಣ್ಯ ಮೊದಲಾದವರು ಅಮೂಲ್ಯ ಸಲಹೆಗಳನ್ನು ನೀಡಿದರು.

ಸದಸ್ಯರ ಸಲಹೆಗಳು :

* ಎಲ್ಲ ಶಾಲಾ ಕಾಲೇಜುಗಳಲ್ಲೂ ಬಿ. ಎಂ. ಶ್ರೀ. ಭಾವಚಿತ್ರದ ಅನಾವರಣವಾದರೂ ಆಗಬೇಕು.

* ಬಿ.ಎಂ.ಶ್ರೀ.ಯವರ ಸಮಕಾಲೀನ ಕವಿಗಳ ಅಪ್ರಕಟಿತ ಸಾಹಿತ್ಯ ಕೃತಿಗಳನ್ನು ಸಂಗ್ರಹಿಸಲು ಪತ್ರಿಕಾ ಪ್ರಕಟನೆ ನೀಡಿ, ಸಾರ್ವಜನಿಕರಿಗೆ ವಿನಂತಿಸಿಕೊಳ್ಳಬೇಕು.

* ಮಹಿಳೆಯರನ್ನು ಕಾರ್ಯಕ್ರಮದಲ್ಲಿ ಹೆಚ್ಚುಹೆಚ್ಚಾಗಿ ತೊಡಗಿಸಿ, ಮಕ್ಕಳಿಗೆ 'ಶ್ರೀ' ಸಾಹಿತ್ಯ ಪ್ರಚಾರ ಮಾಡಬೇಕು.

* ಕಾರ್ಯಕ್ರಮಗಳು ಕೇವಲ ನಗರ ಮಟ್ಟಕ್ಕೆ ಮೀಸಲಾಗಿರದೆ, ಹಳ್ಳಿಗಳಿಗೂ ಹೋಗಿ ಜನೋತ್ಸವವಾಗಬೇಕು. 'ಉತ್ಸವದ ತಿಂಗಳು' ಎಂದು ಕರೆದು ಗಮಕಿಗಳನ್ನೂ ಉಪನ್ಯಾಸಕರನ್ನೂ ಕಳಿಸಿ ಪ್ರಚಾರ ಮಾಡಬೇಕು.

* ಪ್ರೇಮ್‌ಚಂದ್ ಜನ್ಮಶತಾಬ್ದಿಯ ರೀತಿಯಲ್ಲಿ, ಇಡೀ ದೇಶದಲ್ಲಿ ಬೇರೆ ಬೇರೆ ಭಾಷೆಗಳಲ್ಲಿ ಶ್ರೀಯವರ ಪರಿಚಯವಾಗಬೇಕು.

* ಖ್ಯಾತ ಸಂಗೀತಗಾರರಿಂದ, ಕಲಾವಿದರಿಂದ ಸಹಾಯಾರ್ಥ ಕಾರ್ಯಕ್ರಮಗಳನ್ನು ನಡಸಿ 'ಶ್ರೀ ಭವನ'ಕ್ಕೆ ರೂ. 100, 50, 25, 10, 5 ರೂಗಳ ಕೂಪನ್ ಮಾಡಿ ಹಣ ಸಂಗ್ರಹಿಸಬೇಕು.

* ಬಿ.ಎಂ.ಶ್ರೀ. ಶತಮಾನೋತ್ಸವ ಕೇವಲ ಒಂದು ವರ್ಷಕ್ಕೆ ಮಾತ್ರ ಮೀಸಲಾಗದೆ "ಬಿ.ಎಂ.ಶ್ರೀ. ಕನ್ನಡ ಸೇನೆ" ಹೆಸರಿನಲ್ಲಿ ಕನ್ನಡ ಕಾರ್ಯಕರ್ತರನ್ನು ಸಿದ್ಧಮಾಡಿ, ಸದಾಕಾಲವೂ ಕನ್ನಡ ಸಮಸ್ಯೆಗಳ ಪರಿಹಾರಕ್ಕೆ ಶಾಂತಿಯುತವಾಗಿ ಹೋರಾಡುವಂಥ ವ್ಯವಸ್ಥೆ ಮಾಡಬೇಕು.

* ಆಕಾಶವಾಣಿ, ದೂರದರ್ಶನಗಳಲ್ಲಿ ಕನಿಷ್ಠ ಮೂರು ತಿಂಗಳಿಗೊಂದಾದರೂ ಬಿ. ಎಂ. ಶ್ರೀ. ನೆನಪು, ಪರಿಚಯ, ಕೃತಿ ಪ್ರಯೋಗ ಇತ್ಯಾದಿ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವಂತೆ ವ್ಯವಸ್ಥೆ ಮಾಡಬೇಕು.

ನವೋದಯ ಯುಗ ಪ್ರವರ್ತಕರು ಶ್ರೀಯವರೇ*

ಈವರೆಗೆ ನಡೆದಿರುವ ಉತ್ಸವಗಳ ಸಂಬಂಧದಲ್ಲಿ ಒಂದೆರಡು ಟೀಕೆಗಳು ಬಂದಿವೆ. ಒಳ್ಳೆಯ ಉದ್ದೇಶದಿಂದಲೇ ಮಾಡಿದ ಟೀಕೆಗಳು ಇವು. ನನ್ನ ಮಾನ್ಯ ಮಿತ್ರರು ಕೆಲವರು ಹೀಗೆ ಪ್ರಶ್ನಿಸಿದರು: ಎಲ್ಲ ಉತ್ಸವಗಳಲ್ಲೂ ಶ್ರೀಯವರ ಬಗೆಗೇ ಭಾಷಣ ಮಾಡುವುದು ಚರ್ವಿತ ಚರ್ವಣ, ಪಿಷ್ಟ ಪೇಷಣ ಆಗುವುದಿಲ್ಲವೆ? ಇನ್ನೊಬ್ಬರು ಮಿತ್ರರು ಪ್ರಮುಖ ಕನ್ನಡ ವಾರಪತ್ರಿಕೆ ಒಂದರಲ್ಲಿ ಬಿ. ಎಂ. ಶ್ರೀ. ನವೋದಯದ ನೇತಾರರಲ್ಲ, ಈ ಗೌರವ ಪಂಜೆ ಅವರಿಗೆ ಸಲ್ಲಬೇಕು ಎಂದು ಟೀಕಿಸಿದರು. ಮೊದಲ ಅಭಿಪ್ರಾಯದ ಬಗೆಗೆ ನನ್ನ ಮಿತ್ರರಿಗೆ ಸಮಾಧಾನ ಹೇಳಿದ್ದೇನೆ. ಶ್ರೀಯವರೇ ಭಾಷಣಗಳ ವಿಷಯ ಆದಾಗ ಮಾತನಾಡುವವರು ಬೇರೆ ಬೇರೆ ವಿದ್ವಾಂಸರು: ಬೇರೆ ಬೇರೆ ಸ್ಥಳಗಳಲ್ಲೂ ಭಾಷಣ ನಡೆಯುವುದರಿಂದ ಕೇಳುವವರೂ ಬೇರೆ ಬೇರೆ ಜನ. ಒಬ್ಬರೇ ಹಲವು ಕಡೆ ಶ್ರೀಯವರನ್ನು ಕುರಿತು ಮಾತಾಡಿದಾಗಲೂ ಅವರ ಸಾಧನೆಯ ಬೇರೆ ಬೇರೆ ಮುಖಗಳನ್ನು ಕುರಿತು ಮಾತಾಡಲು ಅವಕಾಶ ಉಂಟು. ಭಾಷಣಕಾರರ ಪ್ರತಿಪಾದನೆಯ ವಿಧಾನ ಒಂದೊಂದು ಕಡೆ

ದಿನಾಂಕ 5-5-84 ರಂದು ನಡೆದ ಬಿ.ಎಂ.ಶ್ರೀ. ಜನ್ಮಶತಮಾನೋತ್ಸವ ಕಾರ್ಯಕ್ರಮದಲ್ಲಿ 'ಬಿ. ಎಂ. ಶ್ರೀ. ಮತ್ತು ಅವರ ಕಾಲದ ಸಾಹಿತ್ಯ ಸೇವಕರು' ಎಂಬ ವಿಚಾರಗೋಷ್ಠಿಯಲ್ಲಿ ಪ್ರೊ॥ ಎಂ.ವಿ.ಸೀ. ಅವರು ಮಾಡಿದ ಪ್ರಾಸ್ತಾವಿಕ ಭಾಷಣದಿಂದ ತೆಗೆದದ್ದು.

ಒಂದೊಂದು ತೆರನಾಗಿರಬಹುದು. ಈ ಹಿನ್ನೆಲೆಯಲ್ಲಿ, ಇಂದಿನ ಗೋಷ್ಠಿಗಳ ವಿಷಯ ಪ್ರಸ್ತುತ ಎಂದು ತೋರುತ್ತದೆ.

"ಬಿ. ಎಂ. ಶ್ರೀ.ಯವರು ನವೋದಯ ಸಾಹಿತ್ಯದ, ಮುಖ್ಯವಾಗಿ ನವೋದಯ ಕಾವ್ಯದ ಕ್ಷೇತ್ರವನ್ನು ಪ್ರವೇಶಿಸುವುದಕ್ಕೆ ಮೊದಲಿನಲ್ಲಿಯೂ ಅವರ ಜೊತೆಯಲ್ಲಿಯೂ ಅವರಿಗಿಂತ ವಯಸ್ಸಿನಲ್ಲಿ ಹಿರಿಯರಾದವರು ವ್ಯವಸಾಯ ಮಾಡಿದರು. ಅವರೆಲ್ಲರೂ ಪ್ರಾತಃಸ್ಮರಣೀಯರು. ಅವರಲ್ಲಿ ಪ್ರಮುಖರಾದವರ ಹೆಸರುಗಳನ್ನು ಮಾತ್ರ ನಮ್ಮ ಇಂದಿನ ಎರಡು ವಿಚಾರ ಗೋಷ್ಠಿಗಳ ಉಪನ್ಯಾಸಮಾಲಿಕೆಗಳಲ್ಲಿ ಅಳವಡಿಸಿದೆ. ಉಪನ್ಯಾಸಾವಸರದಲ್ಲಿ ಕೆಲವು ಹೆಸರುಗಳು ಬಿಟ್ಟುಹೋಗಬಹುದು. ಈ ಲೋಪ ಉದ್ದೇಶಪೂರ್ವಕವಾಗಿರುವುದಿಲ್ಲ, ಕಾಲಪರಿಮಿತಿಯೇ ಕಾರಣ. ಆದ್ದರಿಂದಲೇ 'ಮುಂತಾದವರು' ಎಂದು ನಾವು ಸೂಚಿಸಿರುವುದು. ಈ ಉಪನ್ಯಾಸಮಾಲಿಕೆಯ ಫಲಿತವಾಗಿ, ಕಾಲಮಾನ ದೃಷ್ಟಿಯಿಂದ ಅವರೆಲ್ಲರೂ ಕನ್ನಡ ನವೋದಯ ಯುಗದ ಆದ್ಯರು, ಪೂರ್ವಸೂರಿಗಳು ಎಂದು ಭಾವಿಸಿ, ಬಿ.ಎಂ.ಶ್ರೀ.ಯವರು ಆದ್ಯರ ಪೈಕಿ ಸ್ವಲ್ಪ ಹಿರಿಯರ ನಡುವೆ ಹಿರಿಯರಾಗಿ, ಕಿರಿಯರಿಗೆ ಸ್ಫೂರ್ತಿ ಕೇಂದ್ರವಾಗಿ, ಅಗ್ರಗಣ್ಯರಾಗಿ ಕಂಡುಬರುತ್ತಾರೆ ಎನ್ನುವುದರಲ್ಲಿ ಸಂದೇಹವಿಲ್ಲ. ಶ್ರೀಯವರು ನವೋದಯ ಪ್ರವರ್ತಕರು ಎನ್ನುವುದು ಕೇವಲ ಪ್ರತೀತಿಯಲ್ಲ, ಅಭಿಮಾನಿಗಳ ಅಭಿಮಾನದ ಮಾತಲ್ಲ: ಅವರ ಕೃತಿಗಳಿಂದ, ಅವರು ಕೈಗೊಂಡ ಕನ್ನಡ ನಾಡಿನ ತೀರ್ಥಯಾತ್ರೆಯಿಂದ, ಸೌಮ್ಯವಾದರೂ ಪರಿಣಾಮಕಾರಿಯಾಗಿ ಎಸಗಿದ ಕನ್ನಡದ ಹೋರಾಟದಿಂದ, ಚಳವಳಿಯಿಂದ, ಶಿಷ್ಯಪ್ರಶಿಷ್ಯರಿಗೆ ಕನ್ನಡದ ದೀಕ್ಷೆ ಕೊಟ್ಟ ಆಚಾರ್ಯ ಪದವಿಯಿಂದ—ಅವರು ನಿಸ್ಸಂದೇಹವಾಗಿ ಕನ್ನಡ ನವೋದಯ ಪ್ರವರ್ತಕರು ಎನ್ನುವುದು ಸತ್ಯವಾಗಿ ಉಳಿಯುತ್ತದೆ ಎನ್ನುವುದು ನಮ್ಮ ದೃಢವಾದ ನಂಬಿಕೆ. ಈ ದೃಷ್ಟಿಯಿಂದ ಇಂದಿನ ಎರಡು ವಿಚಾರಗೋಷ್ಠಿಗಳು ವಿಶಿಷ್ಟವಾದವು"

—ಎಂದು ಹೇಳಿ ತಮ್ಮ ಮಾತು ಮುಗಿಸಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಐದನೆಯ ಹುಟ್ಟುಹಬ್ಬ

ಸ್ಥಾಪನೆಯಾದ ಕೆಲವೇ ವರ್ಷಗಳಲ್ಲಿ ನಾಡಿನ ವಿದ್ವಜ್ಜನರ ಮನ್ನಣೆಗೆ ಪಾತ್ರವಾಗಿರುವ ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನದ ಐದನೆಯ ಹುಟ್ಟುಹಬ್ಬವನ್ನು 6–5–84 ಭಾನುವಾರದಂದು ಆಚರಿಸಲಾಯಿತು. ಸಮಾರಂಭದಲ್ಲಿ ಮಾಜಿ ಶಿಕ್ಷಣ ಸಚಿವ ಶ್ರೀ ಎ. ಆರ್. ಬದರೀನಾರಾಯಣ್, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯದ ಕಾರ್ಯದರ್ಶಿ ಶ್ರೀ ಎ. ಎಸ್. ಮೇಲುಕೋಟೆ, ಉದ್ದಾಮ ಸಾಹಿತಿ ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮುಂತಾದ ಗಣ್ಯರು ಪಾಲ್ಗೊಂಡಿದ್ದರು.

ಶ್ರೀ ನಿಟ್ಟೂರು ಶ್ರೀನಿವಾಸ ರಾವ್ ಅವರ ಸ್ವಾಗತದೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಸಮಾರಂಭವನ್ನು ಉದ್ಘಾಟಿಸಿದ ಶ್ರೀ ಬದರೀ ನಾರಾಯಣ ಅವರು ಮಾತನಾಡುತ್ತಾ – "ಹರಿದು ಹಂಚಿಹೋಗಿದ್ದ ಕನ್ನಡ ನಾಡಿನ ಸಾಹಿತ್ಯವನ್ನೂ ನಮ್ಮ ಸಂಸ್ಕೃತಿ ಮತ್ತು ಹೊರನಾಡ ಸಂಸ್ಕೃತಿಯನ್ನೂ ಸೇರಿಸಿ ಬೆಳಸಿದ ಕೀರ್ತಿ ಬಿ.ಎಂ.ಶ್ರೀ.ಯವರದು. ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ, ಮೈಸೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರರಾಗಿ, ಉತ್ತಮ ಪ್ರಾಧ್ಯಾಪಕರಾಗಿ ಕನ್ನಡವನ್ನು ಬೆಳಸಿ ಪೋಷಿಸಿದ ಶ್ರೀಯವರು ಯುಗಪುರುಷರು. ಚೆದರಿಹೋಗಿದ್ದ ಕನ್ನಡ ನಾಡನ್ನು ಒಂದೆಡೆ ಸೇರಿಸುವಲ್ಲಿ ಶ್ರೀಯವರು ಅತಿ ಮುಖ್ಯ ಪಾತ್ರ ವಹಿಸಿದ್ದರು" ಎಂದು ಹೇಳಿ, ಶ್ರೀಯವರ ಕೃತಿಗಳನ್ನು ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಅವರಿಗೆ ಮುಟ್ಟಿಸಬೇಕೆಂದು ಪ್ರತಿಷ್ಠಾನಕ್ಕೆ ಸಲಹೆ ಮಾಡಿದರು.

ಸಂಸ್ಥಾಪಕ ಕಾರ್ಯದರ್ಶಿಗಳಾದ ಪ್ರೊ॥ ಎಂ. ವಿ. ಸೀತಾರಾಮಯ್ಯನವರು ಮಾತನಾಡುತ್ತಾ, ಪ್ರತಿಷ್ಠಾನದ ಬೆಳವಣಿಗೆಗೆ ಸರ್ಕಾರದ ಸಹಾಯವಲ್ಲದೆ ಸಾರ್ವಜನಿಕರ ಸಹಾಯ, ಸಹಕಾರಗಳೂ ಅಗತ್ಯವೆಂದರು. ಹಿಟ್ಟು ಯಾವುದು, ಬೂದಿ ಯಾವುದು ಎಂಬುದನ್ನು ಅರಿಯುವ ಶಕ್ತಿ ನಮ್ಮ ಜನಕ್ಕೆ ಬರುವವರೆಗೆ ಉತ್ತಮ ಕಾರ್ಯಗಳಿಗೆ ಅವರಿಂದ ಪ್ರೋತ್ಸಾಹ ದೊರೆಯುವುದಿಲ್ಲ ಎಂದು ವಿಷಾದಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ಖಾತೆಯ ಕಾರ್ಯದರ್ಶಿ ಶ್ರೀ ಎ. ಎಸ್. ಮೇಲುಕೋಟೆಯವರು ಕನ್ನಡಿಗರನ್ನು ಹುಚ್ಚು ಕನ್ನಡಿಗರು ಮತ್ತು ಅಚ್ಚ ಕನ್ನಡಿಗರು ಎಂದು ವಿಭಾಗಿಸಿ ಹೊರನಾಡ ಕನ್ನಡಿಗರು ಹುಚ್ಚು ಕನ್ನಡಿಗರಾಗಿದ್ದಾರೆ, ಏಕೆಂದರೆ ಅವರಿಗೆ ಕನ್ನಡ ಕಲಿಯಲು ಅವಕಾಶವಿಲ್ಲವಾಗಿದೆ. ಎಂದರು. ಕನ್ನಡಕ್ಕೆ ಭದ್ರ ಬುನಾದಿ ಹಾಕಬಲ್ಲ ಬಿ. ಎಂ. ಶ್ರೀ. ಪ್ರತಿಷ್ಠಾನಕ್ಕೆ ಹೆಚ್ಚಿನ ಸಹಾಯ ಮಾಡಬೇಕೆಂಬುದು ಸರ್ಕಾರದ ಆಶಯವಾಗಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಶ್ರೀಯವರ ಹೆಸರು ಕನ್ನಡಿಗರ ಮನಸ್ಸಿನಲ್ಲಿ ಹಚ್ಚಹಸಿರಾಗಿ ಉಳಿಯುವಲ್ಲಿ ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ ಶ್ರೇಷ್ಠಕಾರ್ಯ ನಿರ್ವಹಿಸಿದೆ ಎಂದರು. ಕನ್ನಡ ಸಾರಸ್ವತ ಲೋಕದಲ್ಲಿ ಶ್ರೀಯವರ ಹೆಸರು, ಸಾಹಿತ್ಯ ಚಿರಸ್ಥಾಯಿಯಾಗಲೆಂದು ಹಾರೈಸಿದರು.

ಉದ್ಘಾಟನಾ ಸಮಾರಂಭದ ನಂತರ "ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ : ಹುಟ್ಟು, ಬೆಳವಣಿಗೆ, ಭವಿಷ್ಯ"ದ ಬಗ್ಗೆ ಸದಸ್ಯರ ಮತ್ತು ಅಭಿಮಾನಿಗಳ ಸಭೆ ನಡೆಯಿತು.

ಪ್ರಾಸ್ತಾವಿಕ ಭಾಷಣ ಮಾಡಿದ ಪ್ರೊ॥ ಎಂ. ವಿ. ಸೀತಾರಾಮಯ್ಯನವರು "ಬಿ. ಎಂ. ಶ್ರೀ. ತೀರಿಕೊಂಡ ಹೊಸತರಲ್ಲೇ ಅವರ ನೆನಪನ್ನು ಚಿರಸ್ಥಾಯಿಯಾಗಿಸು ವಂತೆ ಏನಾದರೂ ಸ್ಮಾರಕವಾಗಬೇಕೆಂದು ಆಗಿನ ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು 1947ರಲ್ಲಿ ಕನ್ನಡಿಗರಿಗೆ ಕರೆಕೊಟ್ಟ ಸಂಗತಿಯನ್ನು ಸಭೆಯ ಗಮನಕ್ಕೆ ತಂದು ಮಾಸ್ತಿಯವರ ಬಯಕೆ 3 ದಶಕಗಳು ಕಳೆದ ಮೇಲಾದರೂ ಫಲ್ಗಾಯಿತು" ಎಂದು ತಿಳಿಸಿದರು. ಪ್ರತಿಷ್ಠಾನದ ಸರ್ವಾಂಗೀಣ ಬೆಳವಣಿಗೆಗೆ ಸರ್ಕಾರ, ಸಾರ್ವಜನಿಕರ ಸಹಾಯ, ಸಹಕಾರಗಳನ್ನು ಅಪೇಕ್ಷಿಸಿದರು. ಅನಂತರ ಶ್ರೀ ವಿ. ವೆಂಕಟರಾವ್ 'ಪ್ರತಿಷ್ಠಾನ ನಡೆದು ಬಂದ ದಾರಿ'ಯ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದರು.

ಪ್ರತಿಷ್ಠಾನದ ಪ್ರಗತಿಪಥದ ರೂಪರೇಷೆಗಳನ್ನು ಕುರಿತು ಮಾತನಾಡಿದ ಶ್ರೀ ಜಿ. ನಾರಾಯಣ ಅವರು—"ಯಾವುದೇ ಸಂಸ್ಥೆ ಯಶಸ್ವಿಯಾಗಿ ಕೆಲಸ ಮಾಡ ಬೇಕಾದರೆ ಅದರ ನೇತಾರ ವ್ಯಕ್ತಿಯ ಶಕ್ತಿ. ಸಾಧನೆ ಪ್ರಮುಖವಾದುವು. ಅಧ್ಯಾಪಕರು, ವಿದ್ವಾಂಸರು, ಸಂಶೋಧಕರು ಮಾತ್ರ ಪ್ರತಿಷ್ಠಾನದ ವಿದ್ವತ್ ಕಾರ್ಯದ ಕೊರತೆ ತುಂಬಬಲ್ಲರು" ಎಂದು ಹೇಳಿ, ಆರ್ಥಿಕವಾಗಿ ಮಾತ್ರ ಸಾರ್ವಜನಿಕ ರನ್ನು ಪ್ರತಿಷ್ಠಾನ ಅವಲಂಬಿಸಬೇಕಾಗಿದೆ ಎಂದು ಸೂಚಿಸಿದರು. ಕೇಂದ್ರ ಸರ್ಕಾರ ಸಂಶೋಧನೆಗೆಂದೇ ಮೀಸಲಾಗಿಟ್ಟಿರುವ ಅನುದಾನವನ್ನು ತಮಿಳುನಾಡು ಬಿಟ್ಟರೆ ದಕ್ಷಿಣದ ಬೇರಾವ ರಾಜ್ಯಗಳೂ ಬಳಸಿಕೊಳ್ಳುತ್ತಿಲ್ಲ ಎಂದು ವಿಷಾದಿಸಿದ ಶ್ರೀ ನಾರಾಯಣ ಅವರು, ಹಣ ಪಡೆಯಲು ಪ್ರತಿಷ್ಠಾನ ಸರ್ಕಾರದ ಅಧಿಕಾರಿಗಳೊಡನೆ ಸಂಪರ್ಕ ಇಟ್ಟುಕೊಳ್ಳಬೇಕು ಎಂದರು. ಉದಯೋನ್ಮುಖ ಬರಹಗಾರರಿಗೆ ಪ್ರೋತ್ಸಾಹ, ಜನಸಾಮಾನ್ಯರಿಗಾಗಿ ನಿಘಂಟು, ಹಳಗನ್ನಡ ಕಾವ್ಯಗಳಿಂದ ಆಯ್ದ ರಸವತ್ತಾದ ಭಾಗಗಳ ಪ್ರಕಟನೆ. ಇತ್ಯಾದಿ ಕಾರ್ಯಗಳನ್ನು ಪ್ರತಿಷ್ಠಾನ ಮಾಡಿದರೆ ಅದರ ಭವಿಷ್ಯ ಮತ್ತಷ್ಟೂ ಉಜ್ವಲವಾಗುವುದು ಎಂದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಡಾ॥ ಹಾ. ಮಾ. ನಾಯಕರು ಪ್ರತಿಷ್ಠಾನ ಒಂದು ವಿಶಿಷ್ಟ ಸಂಸ್ಥೆ ಎಂದು ಪ್ರಶಂಸಿಸಿದರು. ಮಾಸ್ಕೋ ನಗರದಲ್ಲಿ ಪ್ರತಿ ರಷ್ಯನ್ ಲೇಖಕನ ಹೆಸರಿನಲ್ಲಿ ಸಂಸ್ಥೆ, ವಸ್ತುಸಂಗ್ರಹಾಲಯಗಳಿವೆ ಎಂದು ತಿಳಿಸಿ. ನಮ್ಮ ದೇಶದಲ್ಲೂ ಸಾಹಿತಿಗಳ ಹೆಸರಿನಲ್ಲೂ ಸಂಸ್ಥೆಗಳು ಹುಟ್ಟಿಕೊಳ್ಳಬೇಕು ಎಂದರು. ಇಂದು ನಾವು ನಾಡು–ನುಡಿಗಳಿಗೆ ನಿಃಸ್ವಾರ್ಥ ಸೇವೆ ಸಲ್ಲಿಸಿರುವ ಎಷ್ಟೋ ಸಾಹಿತಿ ಗಳನ್ನು ಮರೆತಿದ್ದೇವೆ ; ಇಂಥವರ 'ಸ್ಮಾರಕ' ನಿರ್ಮಿಸುವುದು ಹಾಗಿರಲಿ. ಅವರುಗಳು ಬರೆದ ಕೃತಿಗಳನ್ನೆಲ್ಲಾ ಸಂಗ್ರಹಿಸಿ ಪ್ರಕಟಿಸಿದರೆ ಅದೇ ಉತ್ತಮ ಸ್ಮಾರಕವಾಗುತ್ತದೆ. ಎಂದು ಅಭಿಪ್ರಾಯಪಟ್ಟರು.

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನಕ್ಕೆ ಸ್ವಂತ ಕಟ್ಟಡದ ಅಗತ್ಯವಿದೆ ಎಂದು ತಿಳಿಸಿದ ಅವರು, ಈ ಕಟ್ಟಡದಲ್ಲಿ ಬಿ. ಎಂ. ಶ್ರೀ ಅವರ ಸಾಧನೆ, ಸಿದ್ಧಿಗಳು ನೋಡ

ಬರುವವರಿಗೆ ತಿಳಿಯುವಂತೆ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡಿದರು. ಕರ್ನಾಟಕದ ವಿಶ್ವವಿದ್ಯಾನಿಲಯಗಳು ಪ್ರತಿಷ್ಠಾನವನ್ನು ಸಂಶೋಧನಾ ಕೇಂದ್ರವೆಂದು ಮಾನ್ಯ ಮಾಡಬೇಕು. ಈ ಬಗ್ಗೆ ಪ್ರತಿಷ್ಠಾನ ಪ್ರಯತ್ನಿಸಬೇಕು ಎಂದು ಸಲಹೆ ಮಾಡಿದರು.

ಸದಸ್ಯರ ಸಲಹೆಗಳು

ಅಧ್ಯಕ್ಷ ಭಾಷಣಕ್ಕೆ ಮುನ್ನ ಪ್ರತಿಷ್ಠಾನದ ಸದಸ್ಯರೂ ಇತರರೂ ಕೆಲವು ಸಲಹೆಗಳನ್ನು ಕೊಟ್ಟರು. ಅವುಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ:

1) ಪ್ರೊ॥ ಎಸ್. ಆರ್. ಮಳಗಿ : ಬಿ.ಎಂ.ಶ್ರೀ.ಯವರ ಸಮಕಾಲೀನರು ಬರೆದ ಅಪ್ರಕಟಿತ ಕೃತಿಗಳನ್ನು ಪ್ರತಿಷ್ಠಾನ ಪ್ರಕಟಿಸಬೇಕು. ಆ ಕಾಲದ ಎಲ್ಲ ಲೇಖಕರ ಬಗ್ಗೆ ಸಂಶೋಧನೆ, ಅವರ ಕೃತಿಗಳ ವಿಮರ್ಶೆ, ಆಗಬೇಕು.

2) ಶ್ರೀ ಕೆ. ಎಸ್. ನಾರಾಯಣಸ್ವಾಮಿ : ಕನ್ನಡ ಸಾಹಿತ್ಯವನ್ನು ಚೆನ್ನಾಗಿ ಬಲ್ಲ ನಿವೃತ್ತ ಶಿಕ್ಷಕರ ಸಂಪರ್ಕವನ್ನು ಪ್ರತಿಷ್ಠಾನ ಬೆಳಸಿಕೊಂಡು, ಅವರ ಮೂಲಕ ಉತ್ತಮ ಕಾರ್ಯಗಳನ್ನು ಮಾಡಬಹುದು.

3) ಶ್ರೀ ಎಚ್. ಎಸ್. ದೊರೆಸ್ವಾಮಿ : ಈವರೆಗೂ ಉತ್ತಮ ಇಂಗ್ಲಿಷ್-ಕನ್ನಡ ನಿಘಂಟು ಪ್ರಕಟವಾಗಿಲ್ಲ. ಭಾಷಾಂತರ ಕಾರ್ಯಕ್ಕೆ ಅನುಕೂಲವಾಗುವಂಥ ಉತ್ತಮ ನಿಘಂಟನ್ನು ಪ್ರಕಟಿಸಬೇಕು.

ಆಹ್ವಾನಿತರಲ್ಲಿ ಒಬ್ಬರಾದ ಶ್ರೀ ಅಚ್ಯುತರಾಯರು ಪ್ರತಿಷ್ಠಾನದ ವಾರ್ಷಿಕ ಸದಸ್ಯತ್ವದ ಚಂದಾ ದರವನ್ನು 10 ರೂಪಾಯಿಗೆ ಇಳಿಸಬೇಕೆಂದು ಸಲಹೆ ಮಾಡಿದರು.

ಶ್ರೀ ಎಂ. ವಿ. ಸತ್ಯನಾರಾಯಣ ಅವರು ಈ ಸಭೆಯನ್ನು ನಿರ್ವಹಿಸಿ ಕೊಟ್ಟು ವಂದನೆಯನ್ನು ಸಲ್ಲಿಸಿದರು.

ಸಂಜೆ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ತಿಮ್ಮಪ್ಪದಾಸರ ಮತ್ತು ನಾರಾಯಣದಾಸರ ಕೀರ್ತನೆಗಳ ಗಾಯನವನ್ನು ಮೈಸೂರಿನ ಶ್ರೀಮತಿ ಸುಕನ್ಯಾ ಪ್ರಭಾಕರ್ ಅವರು ನಡೆಸಿಕೊಟ್ಟರು. ಶ್ರೀ ಎಂ. ಎಸ್. ಸುಬ್ರಹ್ಮಣ್ಯಂ ಪಿಟೀಲು ವಾದಕರಾಗಿಯೂ, ಶ್ರೀ ಎ. ಆರ್. ದತ್ತಾತ್ರೇಯ ಶರ್ಮ ಮೃದಂಗ ವಾದಕರಾಗಿಯೂ ಭಾಗವಹಿಸಿದ್ದರು. ಸಂಗೀತ ಕಾರ್ಯಕ್ರಮ ಸಭಿಕರನ್ನು ರಂಜಿಸಿತು.

ಈ ಕಾರ್ಯಕ್ರಮ ಪ್ರೊ॥ ಎಂ. ವಿ. ಸೀತಾರಾಮಯ್ಯನವರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ತಿಮ್ಮಪ್ಪದಾಸರ ಹೆಸರಿನಲ್ಲಿ ಇಟ್ಟಿರುವ ದತ್ತಿ ಕಾರ್ಯಕ್ರಮವಾಗಿದ್ದು, ಪರಿಷತ್ತಿನ ಸಹಕಾರದೊಂದಿಗೆ ನೆರವೇರಿತು. ಎಂ. ವಿ. ಸೀ. ಅವರು ಎಲ್ಲರಿಗೂ

ಸ್ವಾಗತ ಕೋರಿದರು. ಕಾರ್ಯಕ್ರಮದ ಕೊನೆಯಲ್ಲಿ ಶ್ರೀಮತಿ ಸುಕನ್ಯಾ ಅವರ ಗಾಯನವನ್ನು ಪ್ರಶಂಸಿಸಿ ಮಾತನಾಡುತ್ತಾ, ಕನ್ನಡಿಗರಿಂದ ಇನ್ನೂ ಹೆಚ್ಚಿನ ಉತ್ತೇಜನ ದೊರೆತಲ್ಲಿ ಪ್ರತಿಭೆ ಹಾಗೂ ಕಂಠಮಾಧುರ್ಯ ಉಳ್ಳ ಶ್ರೀಮತಿಯವರು ಎಂ. ಎಸ್. ಸುಬ್ಬುಲಕ್ಷ್ಮಿ ಅವರ ಮಟ್ಟಕ್ಕೆ ಏರಬಲ್ಲ ಗಾಯಕಿ ಎಂದರು. ಕೆ. ಶಾಂತ ಅವರು ವಂದಿಸಿದರು.

ಸಹೃದಯ ಗೋಷ್ಠಿ

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ ಪ್ರಧಾನವಾಗಿ ಕನ್ನಡ ಸಾಹಿತ್ಯ ಸಂಶೋಧನ ಕೇಂದ್ರವಾದರೂ ಬಿ. ಎಂ. ಶ್ರೀಕಂಠಯ್ಯನವರಿಗೆ ಅತ್ಯಂತ ಪ್ರಿಯವಾಗಿದ್ದ ಕಾವ್ಯಕ್ಷೇತ್ರದಲ್ಲೂ ಕೆಲಸ ಮಾಡುತ್ತಿದೆ. ಬಿ. ಎಂ. ಶ್ರೀ.ಯವರು ಕನ್ನಡ ಕವಿಕುಲಕ್ಕೆ ಗುರುಗಳು. ಆಗೊಮ್ಮೆ ಈಗೊಮ್ಮೆ ನಡೆಯುವ ಕವಿಗೋಷ್ಠಿ ಹೊರತು ಬಹು ಮಟ್ಟಿಗೆ ಇಲ್ಲವಾಗುತ್ತಿರುವ ಕಾವ್ಯವಾಚನದ ಬಗ್ಗೆ ಮತ್ತೆ ಅಭಿರುಚಿ ಮೂಡಿಸುವ ಸಲುವಾಗಿ ಮತ್ತು ಕವಿಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಪ್ರಸಿದ್ಧ ಮತ್ತು ಉದಯೋನ್ಮುಖ ಕವಿಗಳಿಂದ ಪ್ರತಿ ತಿಂಗಳೂ ಸ್ವರಚಿತ ಕವನಗಳನ್ನು ಓದಿಸುವ ಕಾರ್ಯಕ್ರಮವನ್ನು ನಡಸುತ್ತಿದೆ.

ದಿನಾಂಕ 26-11-1983ರಂದು ಶ್ರೀ ಎಚ್. ಎಸ್. ವೆಂಕಟೇಶಮೂರ್ತಿ ಮತ್ತು ಶ್ರೀ ವಿ. ಚಂದ್ರಶೇಖರ ನಂಗಲಿ ಅವರೂ, ಡಿಸೆಂಬರ್ ತಿಂಗಳಲ್ಲಿ ಶ್ರೀ ಎಚ್. ಎಸ್. ಶಿವಪ್ರಕಾಶ್ ಮತ್ತು ಶ್ರೀಮತಿ ಸರಸ್ವತಿ ಗೌಡ ಅವರೂ, 27-3-84 ರಂದು ಶ್ರೀ ರಮಜಾನ್ ದರ್ಗಾ ಮತ್ತು ಶ್ರೀ ಹೀ. ಬೋರಲಿಂಗಯ್ಯ ಅವರೂ 26-4-84ರಂದು ವಿ. ಆರ್. ಪ್ರತಿಭಾ, ಮೋಹನ್ ಅವರೂ, 28-5-84ರಂದು ಶ್ರೀಮತಿ ಭಾಗ್ಯ. ಜಯ ಸುದರ್ಶನ ಮತ್ತು ಡಾ॥ ಎಸ್. ಪಿ. ಪದ್ಮಪ್ರಸಾದ್ ಅವರೂ ಸ್ವರಚಿತ ಕವನಗಳನ್ನು ವಾಚನ ಮಾಡಿದರು. ಸಹೃದಯ ಗೋಷ್ಠಿಯ ಸಂಚಾಲಕರಾದ ಶ್ರೀ ಕೆ. ಎಂ. ಮುನಿಕೃಷ್ಣಪ್ಪ ಅವರು ಈ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡಿದ್ದರು. ವಾಚನ ಮಾಡಿದ ಕವಿಗಳೂ, ಸಂಚಾಲಕರೂ ಪ್ರತಿಷ್ಠಾನದ ವಂದನೆಗೆ ಪಾತ್ರರು.

ಸಹೃದಯ ಗೋಷ್ಠಿ : ಮನವಿ

ಸಹೃದಯಗೋಷ್ಠಿಯ ಕಾರ್ಯಕ್ರಮಗಳ ನಿರ್ವಹಣೆಗಾಗಿ ಒಂದು ಪ್ರತ್ಯೇಕ ನಿಧಿಯನ್ನು ಸ್ಥಾಪಿಸುವ ಯೋಜನೆಯಿದೆ. ಸದಸ್ಯರ ಸಹಕಾರದಿಂದಲೇ ನಡೆಯ ಬೇಕಾಗಿರುವ ಪ್ರತಿಷ್ಠಾನಕ್ಕೆ ಸಹೃದಯ ಗೋಷ್ಠಿಯನ್ನು ಸ್ವಂತ ವೆಚ್ಚದಲ್ಲಿ ನಡಸುವ ಹಣದ ಬಲ ಇನ್ನೂ ಬಂದಿಲ್ಲ. ಆದ್ದರಿಂದ ಸಹೃದಯಗೋಷ್ಠಿಗೆ ವಾರ್ಷಿಕ ಚಂದಾ ರೂ. 10 ಎಂದು ನಿಗದಿ ಮಾಡಿದೆ. ಕಾವ್ಯಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ

ಗೋಷ್ಠಿ ಸದಸ್ಯರಾಗುವುದರ ಮೂಲಕ ಸಹೃದಯಗೋಷ್ಠಿಗೆ ನೆರವಾಗಬೇಕೆಂದೂ; ಉದಯೋನ್ಮುಖ ಕವಿಗಳ ಪ್ರಥಮ ಕವನ ಸಂಕಲನಗಳನ್ನು ಪ್ರಕಟಿಸಿ ಪ್ರೋತ್ಸಾಹಿಸುವ ಯೋಜನೆಯೂ ಪ್ರತಿಷ್ಠಾನಕ್ಕಿದ್ದು. ಸಾಹಿತ್ಯಾಭಿಮಾನಿಗಳೂ ಕಾವ್ಯಪ್ರೇಮಿಗಳೂ ಆಢ್ಯ ಜನರೂ ಈ ಯೋಜನೆಯನ್ನು ಬೆಳಸಬೇಕೆಂದೂ ಪ್ರತಿಷ್ಠಾನ ಪ್ರಾರ್ಥಿಸುತ್ತದೆ.

ಕವನ ಭಂಡಾರ

ಕನ್ನಡದಲ್ಲಿ ಪ್ರಕಟವಾಗುವ ಎಲ್ಲ ಕವನ ಸಂಕಲನಗಳೂ ಒಂದುಕಡೆ ದೊರೆಯುತ್ತಿಲ್ಲ. ಈ ಕೊರತೆಯನ್ನು ನೀಗಿಸುವ ಸಲುವಾಗಿ ಬಿ. ಎಂ. ಶ್ರೀ ಪ್ರತಿಷ್ಠಾನದ ಸಹೃದಯಗೋಷ್ಠಿಯ ಅಂಗವಾಗಿ 'ಕವನ ಭಂಡಾರ'ವೊಂದನ್ನು ಸ್ಥಾಪಿಸಲು ಉದ್ದೇಶಿಸಿದೆ. ಹಿರಿಯರು ಕಿರಿಯರು, ಪ್ರಸಿದ್ಧರು ಅಪ್ರಸಿದ್ಧರು, ಎನ್ನುವ ಭೇದವನ್ನು ತೋರದೆ ಕನ್ನಡದ ಪ್ರಕಟಿತ ಕವನ ಸಂಕಲನಗಳೆಲ್ಲವನ್ನೂ ಸಂಗ್ರಹಿಸುವುದು ಪ್ರತಿಷ್ಠಾನದ ಆಶಯ. ಇದು ಕನ್ನಡ ಕಾವ್ಯದ ಬಗ್ಗೆ ಸಂಶೋಧನೆ ಮಾಡುವವರಿಗೆ ಉಪಯುಕ್ತವಾಗುವುದು ಎಂದು ನಮ್ಮ ಭಾವನೆ.

ಈ ಹಿನ್ನೆಲೆಯಲ್ಲಿ ಸ್ಥಾಪಿತವಾಗಿರುವ 'ಕವನ ಭಂಡಾರಕ್ಕೆ' ಈಗಾಗಲೆ ಅನೇಕ ಕವಿಗಳೂ ಕಾವ್ಯಪ್ರೇಮಿಗಳೂ ಪ್ರೋತ್ಸಾಹ ನೀಡಿ ತಮ್ಮಲ್ಲಿದ್ದ ಕವನ ಸಂಕಲನಗಳನ್ನು ಪ್ರತಿಷ್ಠಾನಕ್ಕೆ ನೀಡಿದ್ದಾರೆ. ಶ್ರೀ ಎಚ್. ಎಸ್. ವೆಂಕಟೇಶಮೂರ್ತಿ, ಶಾರದಾ ಜಡೆ, ವಿ. ಮಂಜುನಾಥ ಪ್ರಸಾದ್. ಹೋತಪೇಟ ಸಂಗಣ್ಣ, 'ಸಿಡಿ', ಮಹೇಂದ್ರ ಪ್ರಸಾದ್, ವಿಶ್ವಸಮಾಜ, ಆರ್. ವೆಂಕಟೇಶ್, ಕೆ. ಎಂ. ರೇವಣ್ಣ, ಡಿ. ಪಾಂಡುರಂಗರಾವ್, ಶಾರದಾನಂದನ, ಎಸ್. ಸಿದ್ಧರಾಮಸ್ವಾಮಿ ಹಿರೇಮಠ, ಚನ್ನಪ್ಪ ಕಟ್ಟಿ, ಇನ್ನೂ ಮುಂತಾದವರು ತಾವು ಹೊರತಂದಿರುವ ಕವನ ಸಂಕಲನಗಳನ್ನು ಪ್ರತಿಷ್ಠಾನದ ಕವನ ಭಂಡಾರಕ್ಕೆ ನೀಡಿದ್ದಾರೆ.

ಶ್ರೀ ರಾಮಚಂದ್ರದೇವ ಅವರು ತಮ್ಮ ಬಳಿ ಇದ್ದ ಸುಮಾರು 15 ಕವನ ಸಂಕಲನಗಳನ್ನು ಕವನ ಭಂಡಾರಕ್ಕೆ ದಾನ ಮಾಡಿದ್ದಾರೆ.

ಇವರೆಲ್ಲರಿಗೆ ಬಿ. ಎಂ. ಶ್ರೀ ಪ್ರತಿಷ್ಠಾನ ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸುತ್ತ ಕವಿಗಳು ಮತ್ತು ಪ್ರಕಾಶಕರು ಹಾಗೂ ಕವನ ಸಂಕಲನಗಳುಳ್ಳ ಮಹನೀಯರು ಕವನ ಭಂಡಾರಕ್ಕೆ ತಮ್ಮಲ್ಲಿರುವ ಕವನ ಸಂಕಲನಗಳ ಒಂದೊಂದು ಪ್ರತಿಯನ್ನು ದಾನ ಮಾಡುವದರ ಮೂಲಕ ಪ್ರತಿಷ್ಠಾನದ ಈ ಉಪಯುಕ್ತ ಯೋಜನೆಯನ್ನು ಯಶಸ್ವಿಗೊಳಿಸಬೇಕೆಂದು ವಿನಂತಿ.

ಹಸ್ತಪ್ರತಿಗಳ ದಾನ

1. ತರೀಕೆರೆಯ ದಿ॥ ಶ್ರೀ ವೆಂಕಟಕೃಷ್ಣ ಜೋಯಿಸ್ ಅವರ ಬಳಿ ಇದ್ದ ಐದಾರು ಓಲೆಗರಿ ಕಟ್ಟುಗಳನ್ನು ಅದೇ ಊರಿನ ಶ್ರೀ ಎಸ್. ಸುಬ್ರಹ್ಮಣ್ಯ ಸಹೋದರರು ಪ್ರತಿಷ್ಠಾನಕ್ಕೆ ದಾನ ಮಾಡಿದ್ದಾರೆ. ಇನ್ನೂ ಬಿಡಿ ಗರಿಗಳು ಇದ್ದು ಅವನ್ನೂ ನೀಡುವುದಾಗಿ ಭರವಸೆ ನೀಡಿದ್ದಾರೆ. ಮತ್ತು ಅನೇಕ ಹಳೆಯ ಮುದ್ರಿತ ಪುಸ್ತಕಗಳನ್ನು ನೀಡಿದ್ದಾರೆ.

2. ದೊಡ್ಡಬಳ್ಳಾಪುರ ತಾಲೂಕು ದೊಡ್ಡ ಹೆಜ್ಜಾಜಿಯ ಶ್ರೀ ರಾಮಕೃಷ್ಣ ಶಾಸ್ತ್ರಿಗಳು ಕೆಲವು ಓಲೆಗರಿ ಕಾವ್ಯಗಳು ಮತ್ತು ಬಿಡಿ ಗರಿಗಳನ್ನು ಬಿ. ಎಂ. ಶ್ರೀ. ಪ್ರತಿಷ್ಠಾನಕ್ಕೆ ದಾನ ಮಾಡಿದ್ದಾರೆ. ಇವುಗಳನ್ನು ಅದೇ ಊರಿನ ಶ್ರೀ ಡಿ. ಎನ್. ಚಂದ್ರಶೇಖರ್ ಮತ್ತು ಡಿ. ಎನ್. ವಿಶ್ವನಾಥ್ ಅವರ ಸಹಾಯದಿಂದ ಶ್ರೀ ನಾ. ಗೀತಾಚಾರ್ಯ ಅವರು ಪ್ರತಿಷ್ಠಾನಕ್ಕೆ ತಂದಿದ್ದಾರೆ.

3. ಶ್ರೀ ವಿ. ವೆಂಕಟರಾವ್ ಅವರು ಕೆಲವು ಕಾವ್ಯಗಳು ಮತ್ತು ಬಿಡಿ ಓಲೆಗರಿಗಳನ್ನು ಪ್ರತಿಷ್ಠಾನಕ್ಕೆ ದಾನ ಮಾಡಿದ್ದಾರೆ.

ಇವರೆಲ್ಲರಿಗೂ ಬಿ. ಎಂ. ಶ್ರೀ. ಪ್ರತಿಷ್ಠಾನ ಕೃತಜ್ಞತೆಯ ವಂದನೆಗಳನ್ನ ಅರ್ಪಿಸುತ್ತ ಇತರ ಹಸ್ತಪ್ರತಿ ಒಡೆಯರೂ ಉದಾರ ಮನಸ್ಸಿನಿಂದ ಪ್ರತಿಷ್ಠಾನಕ್ಕೆ ದಾನ ಮಾಡಬೇಕೆಂದು ಪ್ರಾರ್ಥಿಸುತ್ತದೆ.

ಗ್ರಂಥದಾನ

1. ಶ್ರೀ ಎಸ್. ಎನ್. ನಾಗರಾಜ್ ಅವರು ಬಿ. ಎಂ. ಶ್ರೀ. ಪ್ರತಿಷ್ಠಾನದ ಗ್ರಂಥ ಭಂಡಾರಕ್ಕೆ ತಮ್ಮಲ್ಲಿದ್ದ 'ಕಸ್ತೂರಿ', 'ಭವಾನ್ಸ್ ಜರ್ನಲ್' 'ತಪೋವನ್ ಪ್ರಸಾದ್' ಮುಂತಾದ ಪತ್ರಿಕೆಗಳ ಸಂಚಿಕೆಗಳನ್ನು ಕೆಲವು ಇಂಗ್ಲಿಷ್ ಮತ್ತು ಕನ್ನಡ ಪುಸ್ತಕಗಳನ್ನೂ ದಾನ ಮಾಡಿದ್ದಾರೆ. 1941ರ ಮೈಸೂರು ಜನಗಣತಿ ವರದಿಯ ಪ್ರತಿಯೊಂದಿಗೆ ಇನ್ನೂ ಕೆಲವು ಅಮೂಲ್ಯ ಪುಸ್ತಕಗಳು ಈ ಸಂಗ್ರಹದಲ್ಲಿದೆ.

2. ಶ್ರೀ ಎಸ್. ವೆಂಕಟಸುಬ್ಬಯ್ಯ ಅವರು ಕನ್ನಡನುಡಿ ಮತ್ತು ಪ್ರಬುದ್ಧ ಕರ್ನಾಟಕದ ಕೆಲವು ಸಂಚಿಕೆಗಳನ್ನು ನೀಡಿದ್ದಾರೆ.

3. ಖ್ಯಾತ ವಿದ್ವಾಂಸರಾದ ಮೈಸೂರಿನ ಡಾ॥ ಎನ್. ಅನಂತರಂಗಾಚಾರ್ ಪ್ರತಿಷ್ಠಾನದ ಮೇಲಿನ ಅಭಿಮಾನದಿಂದ ಈಗಾಗಲೇ ದಾನವಾಗಿ ನೀಡಿರುವ ಅಮೂಲ್ಯ ಗ್ರಂಥಗಳ, ಜೊತೆಗೆ ಈಗ ಇನ್ನೂ ಕೆಲವು ಪತ್ರಿಕೆಗಳು (ಶರಣ ಸಾಹಿತ್ಯ. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಕನ್ನಡ ನುಡಿ) ಮತ್ತು ಬಿಡಿ ಪುಸ್ತಕಗಳನ್ನು ದಾನ ಮಾಡಿದ್ದಾರೆ. ಈ ಸಂಗ್ರಹದಲ್ಲಿ ಅನೇಕ ಅಮೂಲ್ಯ ಪತ್ರಿಕೆಗಳು. ಪುಸ್ತಕಗಳು ಇವೆ. 'ಕನ್ನಡ ಚಂಪೂ ಕಾವ್ಯಗಳು' ಪದ್ಯಾನುಕರಣಿಕೆ, ಕನ್ನಡ ಹಸ್ತಪ್ರತಿಗಳ

ವರ್ಣನಾತ್ಮಕ ಸೂಚಿ (4 ಸಂಪುಟಗಳು), ಸಂಸ್ಕೃತ ಕನ್ನಡ ಪ್ರಾಕೃತ ಹಸ್ತಪ್ರತಿಗಳ, ಪುಸ್ತಕಗಳ ಸೂಚಿಗಳು. ಎಪಿಗ್ರಾಫಿಯ ಕರ್ನಾಟಕದ XIV, XV ಸಂಪುಟಗಳು, ಕರ್ನಾಟಕ ಇನ್ಸ್‌ಕ್ರಿಪ್‌ಷನ್ಸ್‌ನ II, III, IV ಸಂಪುಟಗಳು, ಆರ್ಕಿಯಾಲಜಿಕಲ್ ಸರ್ವೆ ಆಫ್ ಇಂಡಿಯಾದ ಅನೇಕ ಸಂಪುಟಗಳು ಇತ್ಯಾದಿ ಅನೇಕ ಅಮೂಲ್ಯ ಗ್ರಂಥಗಳನ್ನು ದಾನ ಮಾಡಿದ್ದಾರೆ.

ಇನ್ನೂ ಅನೇಕ ಮಹನೀಯರು ಅಮೂಲ್ಯ ಗ್ರಂಥಗಳನ್ನು ನೀಡಿ ಸಹಕರಿಸಿದ್ದಾರೆ. ಇವರೆಲ್ಲರಿಗೆ ಪ್ರತಿಷ್ಠಾನ ಕೃತಜ್ಞವಾಗಿದೆ.

4. ಮೈಸೂರು ವಿಶ್ವವಿದ್ಯಾನಿಲಯ ತನ್ನ ಎಲ್ಲ ಪ್ರಕಟನೆಗಳ ಒಂದೊಂದು ಪ್ರತಿಗಳನ್ನು ಬಿ.ಎಂ.ಶ್ರೀ. ಪ್ರತಿಷ್ಠಾನದ ಗ್ರಂಥಭಂಡಾರಕ್ಕೆ ದಾನಮಾಡಲು ಕೃಪೆಯಿಟ್ಟು ಒಪ್ಪಿದೆ. ಈ ಸಂಬಂಧದಲ್ಲಿ ಸಹಕರಿಸಿ ಉಪಕರಿಸಿದ ಪ್ರಸಾರಾಂಗದ ನಿರ್ದೇಶಕರಾದ ಶ್ರೀ ಕೆ. ಟಿ. ವೀರಪ್ಪ ಅವರಿಗೂ, ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಿಗೂ ನಮ್ಮ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ. ಈ ದಾನಕ್ಕೆ ಪ್ರೇರಕ ಶಕ್ತಿ ಡಾ॥ ಕುವೆಂಪು. ಅವರಿಗೆ ನಮ್ಮ ನಮನ.

ಮುದ್ರಿತ ಪುಸ್ತಕಗಳ ದಾನ

1. ಶ್ರೀ ಡಿ. ಎ. ಕೃಷ್ಣಮೂರ್ತಿ ಅವರು "ಮಹಾಕವಿ ರತ್ನಾಕರ" ಎಂಬ ಐತಿಹಾಸಿಕ ನಾಟಕದ ೧೮ ಪ್ರತಿಗಳನ್ನು ಪ್ರತಿಷ್ಠಾನಕ್ಕೆ ದಾನಮಾಡಿದ್ದಾರೆ. (ಬೆಲೆ : ರೂ. 3-00)

2. "A COMPARATIVE STUDY OF SARANA AND DASA LITERATURE" ಎಂಬ ವಿದ್ವತ್ ಗ್ರಂಥದ ಲೇಖಕರಾದ ಡಾ॥ ಪಾ. ಶ. ಶ್ರೀನಿವಾಸ್ ಅವರು ಪ್ರತಿಷ್ಠಾನಕ್ಕೆ ಹತ್ತು ಪ್ರತಿಗಳನ್ನು ದಾನಮಾಡಿದ್ದಾರೆ. (ಬೆಲೆ : ರೂ. 22-00)

ಈ ಎರಡೂ ಪುಸ್ತಕಗಳ ಮಾರಾಟದಿಂದ ಬಂದ ಹಣ ಬಿ. ಎಂ. ಶ್ರೀ. ಪ್ರತಿಷ್ಠಾನದ ನಿಧಿಗೆ ಸೇರುತ್ತದೆ. ಈ ಮಹನೀಯರಿಗೆ ಪ್ರತಿಷ್ಠಾನ ಕೃತಜ್ಞವಾಗಿದೆ.

ಅಭಿನಂದನೆ

ಪ್ರತಿಷ್ಠಾನದ ಗೌರವ ಸದಸ್ಯರಾದ ಡಾ॥ ಎಸ್. ಅನಂತರಂಗಾಚಾರ್ ಅವರು ತಮಗೆ 80 ವರ್ಷಗಳು ತುಂಬಿದ ಸಂದರ್ಭದಲ್ಲಿ 'ಸಹಸ್ರಚಂದ್ರದರ್ಶನ'ದ ಉತ್ಸವವನ್ನು ಶಾಸ್ತ್ರೋಕ್ತವಾಗಿ ಅತ್ಯಂತ ವಿಜೃಂಭಣೆಯಿಂದಆಚರಿಸಿದರು. ಈ ಸಂದರ್ಭದಲ್ಲಿ ಶ್ರೀಯುತರಿಗೆ ಪ್ರತಿಷ್ಠಾನ ತನ್ನ ಅಭಿಮಾನಪೂರ್ವಕವಾದ ಅಭಿನಂದನೆಗಳನ್ನೂ ಶುಭಾಶಯಗಳನ್ನೂ ವ್ಯಕ್ತಪಡಿಸುತ್ತದೆ.

ವಿವಿಧ ಸ್ಥಳಗಳಲ್ಲಿ ಬಿ.ಎಂ.ಶ್ರೀ. ಜನ್ಮಶತಮಾನೋತ್ಸವ

ವಿದ್ಯಾವರ್ಧಕ ಸಂಘ, ರಾಜಾಜಿನಗರ, ಬೆಂಗಳೂರು : ನಗರದ ರಾಜಾಜಿನಗರದ ವಿದ್ಯಾವರ್ಧಕ ಸಂಘ ಬಿ. ಎಂ. ಶ್ರೀ. ಪ್ರತಿಷ್ಠಾನದೊಂದಿಗೆ ಸಂಯುಕ್ತವಾಗಿ 22–1–84 ರಂದು ಬಿ.ಎಂ.ಶ್ರೀ. ಜನ್ಮಶತಮಾನೋತ್ಸವವನ್ನು ಆಚರಿಸಿತು.

ಬೆಳಗ್ಗೆ 10 ಗಂಟೆಗೆ ಶ್ಯಾಮಲಾ ಜಾಗೀರ್‌ದಾರ್ ಹಾಗೂ ವಿ.ವಿ.ಎಸ್. ಪದವಿ ವಿದ್ಯಾರ್ಥಿನಿಯರ ಪ್ರಾರ್ಥನಾ ಗೀತಗಳಿಂದ ಪ್ರಾರಂಭವಾದ ಕಾರ್ಯಕ್ರಮಕ್ಕೆ ಆಗಮಿಸಿದ ಸರ್ವರಿಗೂ ಸಂಘದ ಪರವಾಗಿ ಶ್ರೀ ಕೆ. ಎಸ್. ಶ್ರೀಹರಿ ಅವರೂ ಪ್ರತಿಷ್ಠಾನದ ಪರವಾಗಿ ಪ್ರೊ॥ ಎಂ. ವಿ. ಸೀತಾರಾಮಯ್ಯ ಅವರೂ ಸ್ವಾಗತ ಕೋರಿದರು. ಶ್ರೀ ನಿಟ್ಟೂರು ಶ್ರೀನಿವಾಸ ರಾವ್ ಅವರು ಕಾರ್ಯಕ್ರಮಗಳನ್ನು ಉದ್ಘಾಟಿಸಿದರು. ಶ್ರೀ ಜಿ. ನಾರಾಯಣ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಕನ್ನಡದ ಸ್ಥಿತಿಗತಿಗಳನ್ನು ಮುಕ್ತಮನಸ್ಸಿನಿಂದ ತಿಳಿಸಿದರು. ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಶ್ರೀ ಪಿ. ಆರ್. ಮುಂಡೇವಾಡಿ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದಲ್ಲಿ ಖ್ಯಾತ ಗಮಕಿಗಳಾದ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗ ರಾವ್ ಅವರಿಂದ ಕವಿತಾವಾಚನವನ್ನು ಏರ್ಪಡಿಸಲಾಗಿತ್ತು.

ಮಧ್ಯಾಹ್ನ 11–30ಕ್ಕೆ ಏರ್ಪಡಿಸಿದ್ದ ವಿಚಾರಗೋಷ್ಠಿಯಲ್ಲಿ "ಶ್ರೀಸಾಹಿತ್ಯ" ವಿಚಾರವಾಗಿ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಗೋಷ್ಠಿಯನ್ನು ಶ್ರೀಮತಿ ಮಂಗಳಾ ಪ್ರಿಯದರ್ಶಿನಿ ಅವರು ನಿರ್ವಹಿಸಿದರು. ಶ್ರೀ ಎಚ್. ಎನ್. ಕಟ್ಟಿ ಸ್ವಾಗತಿಸಿದರು. ವಿಚಾರಗೋಷ್ಠಿಯಲ್ಲಿ ಡಾ॥ ರಾಮಚಂದ್ರ ಶರ್ಮ ಅವರು "ಶ್ರೀಯವರ ಇಂಗ್ಲೀಷ್ ಗೀತಗಳು" ಎಂಬ ವಿಚಾರವಾಗಿಯೂ, ಪ್ರೊ॥ ಅ. ರಾ. ಮಿತ್ರ ಅವರು "ಶ್ರೀಯವರ ನಾಟಕಗಳು" ಎಂಬ ವಿಚಾರವಾಗಿಯೂ, ಪ್ರೊ॥ ಸಿದ್ಧಲಿಂಗಯ್ಯ ಅವರು "ಶ್ರೀಯವರ ಕಾವ್ಯದರ್ಶನ" ಎಂಬ ವಿಚಾರವಾಗಿಯೂ ವಿದ್ವತ್‌ಪೂರ್ಣ ಉಪನ್ಯಾಸವನ್ನು ನೀಡಿದರು. ಡಾ॥ ಜಿ. ವಿ. ಕರಜಗಿ ಅವರು ವಂದನೆ ಸಲ್ಲಿಸಿದರು.

ಮಧ್ಯಾಹ್ನ 3–30ಕ್ಕೆ ಏರ್ಪಡಿಸಿದ್ದ "ಶ್ರೀಯವರ ನೆನಪುಗಳು" ಎಂಬ ಗೋಷ್ಠಿಯಲ್ಲಿ ಡಾ॥ ರಂ. ಶ್ರೀ. ಮುಗಳಿ, ಶ್ರೀ ಎಂ. ಎನ್. ಲಕ್ಷ್ಮಿನಾರಾಯಣರಾವ್. ಪ್ರೊ॥ ಎಂ.ವಿ. ಸೀತಾರಾಮಯ್ಯ ಅವರು ಬಿ.ಎಂ.ಶ್ರೀ. ಅವರಿಗೂ ತಮಗೂ ಇದ್ದ ಸಂಬಂಧದ ನೆನಪುಗಳನ್ನು ಸಭಿಕರೊಡನೆ ಹಂಚಿಕೊಂಡರು. ಶ್ರೀ ನಿಟ್ಟೂರು ಶ್ರೀನಿವಾಸ ರಾವ್ ಅವರು ಅಧ್ಯಕ್ಷತೆ ವಹಿಸಿದ್ದರು. ಗೋಷ್ಠಿಯ ನಿರ್ವಹಣೆಯನ್ನು ಶ್ರೀಮತಿ ಮಂಗಳ ಪ್ರಿಯದರ್ಶಿನಿ ವಹಿಸಿದ್ದರು. ಶ್ರೀ ಟಿ. ಎಸ್. ಕೃಷ್ಣಮೂರ್ತಿ ಸ್ವಾಗತಿಸಿದರು. ಡಾ॥ ಜಿ. ವಿ. ಕರಜಗಿ ವಂದಿಸಿದರು.

ಸಂಜೆ 6 ಗಂಟೆಗೆ 'ಶ್ರೀ ಸಾಹಿತ್ಯ ಪ್ರಯೋಗ ಕಾಣಿಕೆ' ಎಂಬ ಸಾಂಸ್ಕೃತಿಕ ಕಾರ್ಯಕ್ರಮವು ಶ್ರೀಮತಿ ಶ್ಯಾಮಲಾ ಜಾಗೀರ್‌ದಾರ್ ಅವರ ಪ್ರಾರ್ಥನೆಯಿಂದ

ಪ್ರಾರಂಭವಾಯಿತು. ಶ್ರೀಹರಿ ಮತ್ತು ಗೆಳೆಯರಿಂದ ನಡೆದ ಶ್ರೀಯವರ 'ಅಶ್ವತ್ಥಾಮನ್' ನಾಟಕದ ಶ್ರವ್ಯರೂಪಕ ಸೊಗಸಾಗಿ ಮೂಡಿ ಬಂತು. ಸಂಸ್ಥೆಯ ವಿದ್ಯಾರ್ಥಿನಿಯರಿಂದ ನಡೆದ ಶ್ರೀಯವರ ಕವಿತೆಗಳ ಗಾಯನ, ರೂಪಕ, ಕೋಲಾಟ, ನೃತ್ಯ ಮುಂತಾದ ಕಾರ್ಯಕ್ರಮಗಳು ರಂಜನೀಯವಾಗಿದ್ದವು.

ಸಮಾರಂಭದ ನಿರ್ವಹಣೆಯನ್ನು ಶ್ರೀಮತಿ ಪದ್ಮಾ ಚಿಕ್ಕೆರೂರ್ ಅವರು ವಹಿಸಿದ್ದರು. ಶ್ರಿ ಪಿ. ಜಿ. ದ್ವಾರಕನಾಥ್ ವಂದಿಸಿದರು. ಬೆಳಗಿನಿಂದ ಸಂಜೆಯವರೆಗೆ ಕಾರ್ಯಕ್ರಮ ವೈವಿಧ್ಯಪೂರ್ಣವಾಗಿ ನಡೆಯಿತು.

2) ಕನ್ನಡ ಸಾಹಿತ್ಯ ವೇದಿಕೆ, ಬಾಗಲಕೋಟೆ : 19–2–1984ರ ಭಾನುವಾರ ಸಂಜೆ 5 ಗಂಟೆಗ ಬಿಜಾಪುರ ಜಿಲ್ಲೆಯ ಬಾಗಲಕೋಟೆಯ ನಗರಸಭಾ ಭವನದಲ್ಲಿ ಬಾಗಲಕೋಟೆಯ ಕನ್ನಡ ಸಾಹಿತ್ಯ ವೇದಿಕೆ ಹಾಗೂ ಬಿ. ಎಂ. ಶ್ರೀ. ಪ್ರತಿಷ್ಠಾನಗಳ ಸಂಯುಕ್ತ ಆಶ್ರಯದಲ್ಲಿ ಬಿ. ಎಂ. ಶ್ರೀ. ಜನ್ಮಶತಮಾನೋತ್ಸವ ಸಮಾರಂಭ ನಡೆಯಿತು.

ಮುಖ್ಯ ಅತಿಥಿಗಳಾಗಿ ಕನ್ನಡ–ಕನ್ನಡ ನಿಘಂಟಿನ ಉಪಸಂಪಾದಕರಾದ ಶ್ರೀ ಟಿ. ಆರ್. ಮಹಾದೇವಯ್ಯ ಅವರು ಭಾಗವಹಿಸಿದ್ದರು. ಪ್ರತಿಷ್ಠಾನದ ಪರವಾಗಿ ಗೌರವ ಕಾರ್ಯದರ್ಶಿ ಶ್ರೀ ನಾ. ಗೀತಾಚಾರ್ಯ ಅವರು ಮಾತನಾಡಿದರು. ಬಾಗಲ ಕೋಟೆಯ ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀ ಎಸ್. ಟಿ. ಪುರಾಣಿಕ ಅವರು ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದಲ್ಲಿ ಸ್ಥಳೀಯ ಉದಯೋನ್ಮುಖ ಕವಿಗಳಿಂದ ಶ್ರೀಯವರಿಗೆ ಪ್ರಿಯವಾಗಿದ್ದ ಕವಿತಾ ವಾಚನವನ್ನು ಏರ್ಪಡಿಸಲಾಗಿತ್ತು. ಕನ್ನಡ ಸಾಹಿತ್ಯ ವೇದಿಕೆಯ ಅಧ್ಯಕ್ಷರಾದ ಶ್ರೀ ಪಿ. ವೈ. ಗಿರಿಸಾಗರ ಅವರು ಸ್ವಾಗತಿಸಿದರು. ವೇದಿಕೆಯ ಕಾರ್ಯದರ್ಶಿ ಗುರುಸ್ವಾಮಿ ಗಣಾಚಾರಿ ಅವರು ವಂದನಾರ್ಪಣೆ ಮಾಡಿದರು.

3) ಕನ್ನಡ ಬಳಗ, ಸಿಂದಗಿ : 20–2–1984ರ ಸೋಮವಾರ ಬಿಜಾಪುರ ಜಿಲ್ಲೆಯ ಸಿಂದಗಿಯ ಶಿವಾನುಭವ ಮಂಟಪದಲ್ಲಿ ಅಲ್ಲಿಯ ಕನ್ನಡ ಬಳಗ ಹಾಗೂ ಬಿ. ಎಂ. ಶ್ರೀ. ಪ್ರತಿಷ್ಠಾನ ಸಂಯುಕ್ತವಾಗಿ ಶ್ರೀ ಜನ್ಮಶತಮಾನೋತ್ಸವವನ್ನು ಆಚರಿಸಿತು.

ಸಮಾರಂಭಕ್ಕೆ ಸಿಂದಗಿಯ ಕನ್ನಡ ಬಳಗದ ಅಧ್ಯಕ್ಷರು ಸ್ವಾಗತವನ್ನು ಕೋರಿ ದರು. ಪ್ರತಿಷ್ಠಾನದ ಪರವಾಗಿ ಶ್ರೀ ನಾ. ಗೀತಾಚಾರ್ಯ ಅವರು ಪ್ರತಿಷ್ಠಾನದ ಪರಿಚಯ ಮಾಡಿಕೊಟ್ಟು ಸ್ವಾಗತ ಕೋರಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕನ್ನಡ–ಕನ್ನಡ ನಿಘಂಟಿನ ಉಪಸಂಪಾದಕರಾದ ಶ್ರೀ ಟಿ. ಆರ್. ಮಹಾದೇವಯ್ಯ ನವರು ಶ್ರೀಯವರ ಜೀವನ-ಸಾಧನೆ ಕುರಿತು ಮಾತನಾಡಿದರು. ಇದೇ ಸಂದರ್ಭದಲ್ಲಿ ಪ್ರತಿಭಾವಂತ ಚಿತ್ರಗಾರರಾದ ಶ್ರೀ ಹಣಮಂತ ತಾಸಗಾಂವಕರ ಅವರ 'ಹೆಜ್ಜೆಗಳು'

ಕಥಾಸಂಕಲನವನ್ನು ಮುಖ್ಯ ಅತಿಥಿಗಳು ಬಿಡುಗಡೆ ಮಾಡಿದರು. ಸ್ಥಳೀಯ ಹೆಸರಾಂತ ವೈದ್ಯರಾದ ಡಾ॥ ಬಿ. ಆರ್. ನಾಡಗೌಡ ಅವರು ಅಧ್ಯಕ್ಷತೆ ವಹಿಸಿದ್ದರು. ಕಥಾಸಂಕಲನವನ್ನು ಕುರಿತು ಪ್ರಾಧ್ಯಾಪಕ ಶ್ರೀ ಬಸವಲಿಂಗ ಸೊಪ್ಪಿಮಠ ಅವರು ಮಾತನಾಡಿದರು. ಬಳಗದ ಕಾರ್ಯದರ್ಶಿಗಳ ವಂದನೆಯ ನಂತರ ಮುಗಿದ ಸಮಾರಂಭ ಸಭಿಕರನ್ನು ಉಲ್ಲಾಸಗೊಳಿಸಿತು.

ಜಿ. ಪಿ. ಪೋರ್‌ವಾಲ್ ಕಾಲೇಜು, ಸಿಂದಗಿ : 21–2–84ರಂದು ಸಿಂದಗಿಯ ಜಿ. ಪಿ. ಪೋರ್‌ವಾಲ್ ಕಾಲೇಜು, ಪ್ರತಿಷ್ಠಾನದೊಡನೆ ಸೇರಿ ಬಿ. ಎಂ. ಶ್ರೀ. ಜನ್ಮಶತಮಾನೋತ್ಸವವನ್ನು ಆಚರಿಸಿತು. ಕಾಲೇಜಿನ ಪ್ರಾಚಾರ್ಯರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕನ್ನಡ–ಕನ್ನಡ ನಿಘಂಟಿನ ಉಪಸಂಪಾದಕರಾದ ಶ್ರೀ ಟಿ. ಆರ್. ಮಹಾದೇವಯ್ಯ ಅವರು ಭಾಗವಹಿಸಿದ್ದರು. ಪ್ರತಿಷ್ಠಾನದ ಪರವಾಗಿ ಶ್ರೀ ನಾ. ಗೀತಾಚಾರ್ಯ ಅವರು ಸ್ವಾಗತಿಸಿದರು. ಪ್ರಾಧ್ಯಾಪಕ ಬಸವಲಿಂಗ ಸೊಪ್ಪಿಮಠ ಅವರು ವಂದಿಸಿದರು.

ಸರ್ಕಾರಿ ಕಿರಿಯ ಕಾಲೇಜು, ಕೆಂಬಾವಿ : 21–2–1984ರಂದು ಗುಲ್ಬರ್ಗ ಜಿಲ್ಲೆಯ ಕೆಂಬಾವಿ ಸರ್ಕಾರಿ ಕಿರಿಯ ಕಾಲೇಜು, ಪ್ರತಿಷ್ಠಾನದೊಡನೆ ಸೇರಿ ಬಿ. ಎಂ. ಶ್ರೀ. ಜನ್ಮಶತಮಾನೋತ್ಸವವನ್ನು ಆಚರಿಸಿತು.

ಮಧ್ಯಾಹ್ನ 3–30ಕ್ಕೆ ಶಾಲಾ ವಿದ್ಯಾರ್ಥಿಗಳಿಂದ ಬಿ. ಎಂ. ಶ್ರೀ. ಗೀತೆಗಳ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಶ್ರೀಮತಿ ದಿನಮಣಿ ಎಸ್. ಮೂರ್ತಿ ಅವರು ಸ್ವಾಗತ ಕೋರಿ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಪ್ರತಿಷ್ಠಾನದ ಪರವಾಗಿ ಕಾರ್ಯದರ್ಶಿ ಶ್ರೀ ನಾ. ಗೀತಾಚಾರ್ಯ ಅವರು ಮಾತನಾಡಿ ಪ್ರತಿಷ್ಠಾನದ ಪರಿಚಯವನ್ನು ಮಾಡಿಕೊಟ್ಟರು. ಬಿ. ಎಂ. ಶ್ರೀ. ಜೀವನ–ಸಾಧನೆ ಕುರಿತು ಕಾಲೇಜಿನ ವಿದ್ಯಾರ್ಥಿ ಮತ್ತು ಸಾರ್ವಜನಿಕರೊಬ್ಬರು ಮಾತಾಡಿದುದು ಕಾರ್ಯಕ್ರಮದ ವೈಶಿಷ್ಟ್ಯವಾಗಿತ್ತು. ಕನ್ನಡ–ಕನ್ನಡ ನಿಘಂಟಿನ ಉಪಸಂಪಾದಕರಾದ ಶ್ರೀ ಟಿ. ಆರ್. ಮಹಾದೇವಯ್ಯ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ತುಂಬಿದ ಸಭೆಯನ್ನು ಕುರಿತು ಪರಿಣಾಮಕಾರಿಯಾಗಿ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಕೆಂಬಾವಿಯ ಎಕ್ಸಿಕ್ಯುಟಿವ್ ಇಂಜನಿಯರ್ ಅವರು ವಹಿಸಿದ್ದರು. ಶ್ರೀಮತಿ ಮಂಗಳ ಪಾಟೀಲ ಅವರು ವಂದನಾರ್ಪಣೆ ಮಾಡಿದರು. ಉತ್ಸಾಹಿ ಪ್ರತಿಭಾವಂತ ಪ್ರಾಧ್ಯಾಪಿಕೆಯಾದ ಶ್ರೀಮತಿ ಜಯಾ ಎಸ್. ನೆಲ್ಲಗಿ ಅವರು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡಸಿಕೊಟ್ಟರು.

ಈ ಮೂರೂ ಕಾರ್ಯಕ್ರಮಗಳನ್ನು ವಿಶೇಷ ಶ್ರಮವಹಿಸಿ ವ್ಯವಸ್ಥೆ ಮಾಡಿಸಿದ್ದವರು ಬಾಗಲಕೋಟೆಯ ತರುಣ ಬರಹಗಾರರೂ, ಉತ್ಸಾಹಿ ಕಾರ್ಯಕರ್ತರೂ ಆದ ಶ್ರೀ ಹಣಮಂತ ತಾಸಗಾಂವಕರ ಅವರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮಂಡ್ಯ : 26-2-1984ರಂದು ಮಂಡ್ಯ ರೈತ ಸಭಾಂಗಣದಲ್ಲಿ ಬಿ. ಎಂ. ಶ್ರೀ. ಪ್ರತಿಷ್ಠಾನ ಹಾಗೂ ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಂಯುಕ್ತವಾಗಿ ಸೇರಿ ಬಿ.ಎಂ.ಶ್ರೀ. ಜನ್ಮಶತಮಾನೋತ್ಸವ ವನ್ನು ಇಡೀ ದಿವಸ ಆಚರಿಸಿತು.

ಬೆಳಗ್ಗೆ 10-30ಕ್ಕೆ ಸ್ಥಳೀಯ ಕಲಾವಿದರಿಂದ ಪ್ರಾರ್ಥನೆಯಿಂದ ಆರಂಭವಾದ ಸಮಾರಂಭವನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಕೆ.ಟಿ. ಚಂದು ಸ್ವಾಗತಿಸಿದರು. ರಾಜ್ಯ ವಯಸ್ಕ ಶಿಕ್ಷಣ ಸಮಿತಿಯ ಮಾಜಿ ಅಧ್ಯಕ್ಷರಾದ ಶ್ರೀ ನ. ಭದ್ರಯ್ಯ ಅವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾದ ಪ್ರೊ॥ ಕೆ. ವೆಂಕಟ ರಾಮಪ್ಪನವರು ಶ್ರೀಯವರನ್ನು ಕುರಿತ ತಮ್ಮ ಸ್ವಾರಸ್ಯಕರವಾದ ಅನುಭವವನ್ನು ನಿವೇದಿಸಿದರು. ಶ್ರೀ ಜಿ. ನಾರಾಯಣ ಅವರು ಕನ್ನಡದ ಬಗ್ಗೆ ಶ್ರೀಯವರ ಸಾಧನೆಯನ್ನು, ಕನ್ನಡದ ಇಂದಿನ ಸ್ಥಿತಿಗತಿಯನ್ನು ಕುರಿತು ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಮೈಸೂರು ಸಕ್ಕರೆ ಕಂಪೆನಿಯ ಮಾಜಿ ಅಧ್ಯಕ್ಷ ಶ್ರೀ ಎಂ. ಲಿಂಗಯ್ಯ ಅವರು ವಹಿಸಿದ್ದರು. ಶ್ರೀ ಎಂ. ಎಚ್. ಕೃಷ್ಣಯ್ಯ ಅವರು ಮಾಡಿದ ವಂದನಾರ್ಪಣೆಯೊಂದಿಗೆ ಬೆಳಗಿನ ಉದ್ಘಾಟನಾ ಕಾರ್ಯಕ್ರಮ ತುಂಬಾ ಯಶಸ್ವಿಯಾಗಿ ಮುಗಿಯಿತು.

ಮಧ್ಯಾಹ್ನ 3-30ಕ್ಕೆ 'ಬಿ.ಎಂ.ಶ್ರೀ. ಮತ್ತು ಕನ್ನಡನಾಡು ನುಡಿಗಳ ಏಳಿಗೆ' ಎಂಬ ವಿಷಯವಾಗಿ ವಿಚಾರಗೋಷ್ಠಿಯನ್ನು ಡಾ॥ ಸಿದ್ಧಯ್ಯ ಪುರಾಣಿಕ ಅವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿತ್ತು.

ಪ್ರೊ॥ ಎಸ್. ಆರ್. ಮಳಗಿ ಆವರು "ಕನ್ನಡಿಗರ ಭಾವೈಕ್ಯತೆಗೆ ಬಿ.ಎಂ.ಶ್ರೀ. ಅವರ ಕೊಡುಗೆ" ಎಂಬ ವಿಷಯವಾಗಿ ಮತ್ತು "ಕನ್ನಡ ಸಾಹಿತ್ಯಕ್ಕೆ ಬಿ.ಎಂ.ಶ್ರೀ. ಅವರ ಕೊಡುಗೆ" ಎಂಬ ವಿಷಯವಾಗಿಯೂ, ಪ್ರೊ॥ ವಿ.ಎಂ. ಇನಾಂದಾರ್ ಅವರು "ಶ್ರೀ ನಾಟಕಗಳು" ಎಂಬ ವಿಷಯವಾಗಿಯೂ, ಶ್ರೀ ಎಂ. ಎಚ್. ಕೃಷ್ಣಯ್ಯ ಅವರು "ಕನ್ನಡದ ಸ್ಥಾನಮಾನ ಅಂದು-ಇಂದು" ಎಂಬ ವಿಷಯವಾಗಿಯೂ ವಿದ್ವತ್‌ಪೂರ್ಣ ವಾದ ಉಪನ್ಯಾಸಗಳನ್ನು ನೀಡಿದರು. ಶ್ರೀಮತಿ ಸುಶೀಲಾ ಹೊನ್ನೇಗೌಡ ಅವರು ಕಾರ್ಯಕ್ರಮವನ್ನು ನಿರ್ವಹಿಸಿದರು. ಪರಿಷತ್ತಿನ ಕಾರ್ಯದರ್ಶಿಗಳು ಅತಿಥಿ ಗಳನ್ನು ವಂದಿಸಿದರು.

ಪಿ. ಇ. ಎಸ್. ಕಾಲೇಜು, ಹನುಮಂತನಗರ, ಬೆಂಗಳೂರು : ನಗರದ ಪಿ. ಇ. ಎಸ್. ಕಾಲೇಜು ಬಿ.ಎಂ.ಶ್ರೀ. ಪ್ರತಿಷ್ಠಾನದೊಡನೆ ಸೇರಿ 3-3-1984ರ ಶನಿವಾರ ಕಾಲೇಜಿನ ಸಭಾಂಗಣದಲ್ಲಿ ಬಿ. ಎಂ. ಶ್ರೀ. ಜನ್ಮಶತಮಾನೋತ್ಸವದ ವಿಚಾರಗೋಷ್ಠಿಯನ್ನು ಆಚರಿಸಿತು. ಪ್ರಾರ್ಥನೆಯೊಂದಿಗೆ ಪ್ರಾರಂಭವಾದ 'ಶ್ರೀ ಸಾಹಿತ್ಯ ಕೊಡುಗೆ' ಕಾರ್ಯಕ್ರಮಕ್ಕೆ ಕಾಲೇಜಿನ ಪರವಾಗಿ ಪ್ರಾಚಾರ್ಯರಾದ ಪ್ರೊ॥ ಎಂ. ಆರ್. ದೊರೆಸ್ವಾಮಿ ನಾಯ್ಡು ಅವರೂ, ಪ್ರತಿಷ್ಠಾನದ ಪರವಾಗಿ ಪ್ರೊ॥

ಎಂ. ವಿ. ಸೀತಾರಾಮಯ್ಯ ಅವರೂ ಅತಿಥಿಗಳನ್ನೂ ಸಭಿಕರನ್ನೂ ಸ್ವಾಗತಿಸಿದರು. ಸಮಾರಂಭದ ಉದ್ಘಾಟನೆಯನ್ನು ಪ್ರೊ॥ ಎಲ್. ಎಸ್. ಶೇಷಗಿರಿರಾವ್ ಅವರು ನೆರವೇರಿಸಿದರು. ಡಾ॥ ಸಿದ್ಧಯ್ಯ ಪುರಾಣಿಕ ಅವರ ಅಧ್ಯಕ್ಷತೆಯಲ್ಲಿ ಶ್ರೀ ನರಹಳ್ಳಿ ಬಾಲಸುಬ್ರಹ್ಮಣ್ಯಂ ಅವರು 'ಬಿ. ಎಂ. ಶ್ರೀ. ಮತ್ತು ಕನ್ನಡ'ವನ್ನು ಕುರಿತು, ಶ್ರೀ ಎಚ್.ಎಸ್. ವೆಂಕಟೇಶಮೂರ್ತಿ ಅವರು 'ಶ್ರೀಯವರ ಸ್ವಂತ ಕವನ'ಗಳನ್ನು ಕುರಿತು, ಶ್ರೀ ಪರ್ವತವಾಣಿ ಅವರು 'ಶ್ರೀಯವರ ನಾಟಕ'ಗಳನ್ನು ಕುರಿತು. ವಿಚಾರಪೂರ್ಣ ವಾದ ಉಪನ್ಯಾಸಗಳನ್ನು ನೀಡಿದರು.

ಕಾರ್ಯಕ್ರಮದ ನಿರ್ವಹಣೆಯನ್ನು ಕನ್ನಡ ಅಧ್ಯಾಪಕರಾದ ಎಸ್. ಶಿವ ಕುಮಾರ್ ಅವರು ವಹಿಸಿದ್ದರು. ಉತ್ಸವ ಸಮಿತಿಯ ಗೌರವ ಕಾರ್ಯದರ್ಶಿ ಶ್ರೀ ನಾ. ಗೀತಾಚಾರ್ಯ ಅವರು ವಂದನಾರ್ಪಣೆ ಮಾಡಿದರು.

ಕನ್ನಡ ಸಂಘ, ಬಂಗಾರಪೇಟೆ : ಕೋಲಾರ ಜಿಲ್ಲೆಯ ಬಂಗಾರಪೇಟೆ ಕನ್ನಡ ಸಂಘ ಮತ್ತು ಬಿ. ಎಂ. ಶ್ರೀ. ಪ್ರತಿಷ್ಠಾನ ಸಂಯುಕ್ತವಾಗಿ ಬಂಗಾರಪೇಟೆಯ ಬಾಲಕಿಯರ ಪ್ರೌಢ ಶಾಲೆಯಲ್ಲಿ ಬಿ. ಎಂ. ಶ್ರೀ. ಜನ್ಮಶತಮಾನೋತ್ಸವವನ್ನು ಆಚರಿಸಿತು.

7–3–84ರ ಬುಧವಾರ ಸಂಜೆ 6–30ಕ್ಕೆ ಪ್ರಾರಂಭವಾದ ಸಮಾರಂಭದ ಅಧ್ಯಕ್ಷತೆಯನ್ನು ಬಂಗಾರಪೇಟೆಯ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಶ್ರೀ ಎಸ್. ಎಂ. ಅಶ್ವತ್ಥನಾರಾಯಣ ಶೆಟ್ಟಿ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾದ ಕನ್ನಡ–ಕನ್ನಡ ನಿಘಂಟು ಉಪಸಂಪಾದಕರಾದ ಶ್ರೀ ಹೀ. ಚಿ. ಶಾಂತವೀರಯ್ಯ ಅವರು ಹಾಗೂ ಬಿ.ಇ.ಎಂ.ಎಲ್. ಎಕ್ಸಿಕ್ಯುಟಿವ್ ಡೈರೆಕ್ಟರ್ ಶ್ರೀ ಟಿ. ಆರ್. ಆರ್. ರಾವ್ ಅವರು ಮತ್ತು ಶ್ರೀ ಕೆ. ಎಸ್. ಮೆಂಡೇಗರ ಅವರುಗಳು ಭಾಗವಹಿಸಿದ್ದರು. ಸಮಾರಂಭದ ಕೊನೆಯಲ್ಲಿ ಕೋಲಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕೃಪೆ ಯಿಂದ ಸ್ನೇಹಸಂಪದ ತಂಡದವರು "ಜೋಕುಮಾರಸ್ವಾಮಿ" ನಾಟಕವನ್ನು ಪ್ರದರ್ಶಿಸಿದರು.

ಗಾಂಧಿ ಸಾಹಿತ್ಯ ಸಂಘ, ಮಲ್ಲೇಶ್ವರ, ಬೆಂಗಳೂರು : ನಗರದ ಮಲ್ಲೇಶ್ವರದ ಗಾಂಧಿಸಾಹಿತ್ಯ ಸಂಘ. ಜಿ. ಪಿ. ರಾಜರತ್ನಂ ಸ್ಮಾರಕ ಸಮಿತಿ ಹಾಗೂ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನಗಳು ಸಂಯುಕ್ತವಾಗಿ ಮಲ್ಲೇಶ್ವರದ ಗಾಂಧಿ ಸಾಹಿತ್ಯ ಸಂಘ ದಲ್ಲಿ 13–3–84 ಮತ್ತು 14–3–84 ರಂದು ಈ ಎರಡು ದಿನಗಳ ಬಿ.ಎಂ.ಶ್ರೀ. ಜನ್ಮಶತಮಾನೋತ್ಸವವನ್ನು ವಿಶಿಷ್ಟವಾಗಿ ಆಚರಿಸಿದವು.

13–3–1984ರಂದು ಸಂಜೆ 6–30ಕ್ಕೆ ಶ್ರೀ ಬೆ.ಗೋ. ರಮೇಶ್ ಅವರಿಂದ ಬಿ.ಎಂ.ಶ್ರೀ. ಅವರ ಗೀತೆಗಳ ವಾಚನದೊಂದಿಗೆ ಪ್ರಾರಂಭವಾದ 'ಶ್ರೀ ಸ್ಮರಣೆ' ಕಾರ್ಯಕ್ರಮಕ್ಕೆ ಗಾಂಧಿ ಸಾಹಿತ್ಯ ಸಂಘದ ಕಾರ್ಯದರ್ಶಿಗಳಾದ ಶ್ರೀ ನೀಲತ್ತಳ್ಳಿ

ಕಸ್ತೂರಿ ಅವರು ಸ್ವಾಗತಿಸಿದರು. ಉಪನ್ಯಾಸಕರಾಗಿ ಆಗಮಿಸಿದ್ದ ಪ್ರಸಿದ್ಧ ಹಿರಿಯ ಸಾಹಿತಿ ಡಾ॥ ಎ.ಎನ್. ಮೂರ್ತಿರಾಯರು "ಆಚಾರ್ಯ ಬಿ.ಎಂ.ಶ್ರೀ. ಮತ್ತು ಕನ್ನಡ ಸೇವೆ" ಎಂಬ ವಿಚಾರವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ 56ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದ ಬಿ.ಎಂ.ಶ್ರೀ.ಯವರ ಪ್ರಿಯ ಶಿಷ್ಯರೂ ಆಗಿದ್ದ ಪ್ರೊ॥ ಮೂರ್ತಿರಾಯರಿಗ ಶಾಸಕರಾದ ಪಿ. ರಾಂದೇವ್ ಅವರು ಎಲ್ಲರ ಪರವಾಗಿ ಗೌರವಾರ್ಪಣೆ ಮಾಡಿದರು. ಪ್ರತಿಷ್ಠಾನದ ಪರವಾಗಿ ಶ್ರೀ ನಾ. ಗೀತಾಚಾರ್ಯ ಅವರು ಮಾತನಾಡಿದರು. ಶ್ರೀ ರಮಾಕಾಂತರಾವ್ ಅವರು ವಂದನಾರ್ಪಣೆ ಮಾಡಿದರು.

14–3–84ರಂದು ಸಂಜೆ 6–30ಕ್ಕೆ "ಶ್ರೀ ಕೃತಿ ಸ್ಮರಣೆ" ಕಾರ್ಯಕ್ರಮ ಬಿ.ಎಸ್. ರಾಮಾಚಾರ್ ಅವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ಶ್ರೀ ನೀಲತ್ತಳ್ಳಿ ಕಸ್ತೂರಿ ಅವರು ಸ್ವಾಗತಿಸಿದರು. ಪ್ರೊ॥ ಎಂ.ವಿ. ಸೀತಾರಾಮಯ್ಯ ಅವರು ಪ್ರತಿಷ್ಠಾನದ ಪರಿಚಯವನ್ನು ಸಭೆಗೆ ಮಾಡಿಕೊಟ್ಟರು. ಕ್ರೈಸ್ಟ್ ಕಾಲೇಜಿನ ಅಧ್ಯಾಪಕರಾದ ಶ್ರೀ ಚಿ. ಶ್ರೀನಿವಾಸರಾಜು, ಶ್ರೀಯವರ 'ಅಶ್ವತ್ಥಾಮನ್' ನಾಟಕದ ಪರಿಚಯ ಮಾಡಿಕೊಟ್ಟರು. ರಾಜಾಜಿನಗರದ ವಿದ್ಯಾವರ್ಧಕ ಸಂಘದ ಶ್ರೀ ಕೆ.ಎನ್. ಶ್ರೀಹರಿ ಮತ್ತು ತಂಡದವರಿಂದ 'ಅಶ್ವತ್ಥಾಮನ್' ನಾಟಕದ ಶ್ರವ್ಯರೂಪಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಶ್ರೀ ರಮಾಕಾಂತರಾವ್ ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ರಿಸರ್ವ್ ಬ್ಯಾಂಕ್ ಕನ್ನಡ ಸಂಘ, ಬೆಂಗಳೂರು : ನಗರದ ರಿಸರ್ವ್ ಬ್ಯಾಂಕ್ ಕನ್ನಡ ಸಂಘ ಪ್ರತಿಷ್ಠಾನದ ಸಹಕಾರದೊಡನೆ 20–3–84ರಂದು ಸಂಜೆ ಶ್ರೀ ಜನ್ಮಶತಮಾನೋತ್ಸವವನ್ನು ಆಚರಿಸಿತು. ಈ ಸಂದರ್ಭದಲ್ಲಿ ಕನ್ನಡ ಸಂಘ, ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕೆ ನಿಧಿ ಅರ್ಪಿಸಿತು.

ಕರ್ನಾಟಕ ಸರ್ಕಾರದ ಸಾರಿಗೆ ಸಚಿವ ಶ್ರೀ ಎಂ. ಪಿ. ಪ್ರಕಾಶ್ ಅವರ ಗೈರು ಹಾಜರಿಯಲ್ಲಿ ಅಧ್ಯಕ್ಷರಾದ ಪ್ರೊ॥ ಜಿ. ವೆಂಕಟಸುಬ್ಬಯ್ಯ ಅವರು ಶ್ರೀಯವರ ಭಾವಚಿತ್ರ ಅನಾವರಣ ಮಾಡಿದರು. ಪ್ರೊ॥ ಎಂ. ವಿ. ಸೀತಾರಾಮಯ್ಯ ಅವರು ಮುಖ್ಯ ಅತಿಥಿಗಳಾಗಿ ಕನ್ನಡ ಸಂಘದವರು ಪ್ರಕಟಿಸಿದ್ದ "ಶ್ರೀ ಪರಿಚಯ" ಎಂಬ ಕಿರುಹೊತ್ತಿಗೆಯನ್ನು ಬಿಡುಗಡೆ ಮಾಡಿದರು. ರಿಸರ್ವ್ ಬ್ಯಾಂಕ್ ಜನರಲ್ ಮ್ಯಾನೇಜರ್ ಅವರು ಕನ್ನಡ ಸಂಘದ ಪರವಾಗಿ ಮಾತನಾಡಿದರು.

'ಶ್ರೀ ವಿಚಾರ ಸಂಕಿರಣ'ದಲ್ಲಿ ಶ್ರೀ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು "ಶ್ರೀ ಜೀವನ ಮತ್ತು ಕನ್ನಡ ಸೇವೆ" ಎಂಬ ವಿಚಾರವಾಗಿಯೂ, ಡಾ॥ ಪಿ.ವಿ. ನಾರಾಯಣ ಅವರು 'ಅಶ್ವತ್ಥಾಮನ್' ಎಂಬ ವಿಚಾರವಾಗಿಯೂ. ಶ್ರೀ ಅನಂತ ಪದ್ಮನಾಭ ರಾವ್ ಅವರು 'ಶ್ರೀ ಕಾವ್ಯ' ಎಂಬ ವಿಚಾರವಾಗಿಯೂ ಉತ್ತಮ ಉಪನ್ಯಾಸಗಳನ್ನು ನೀಡಿದರು.

ಕಾರ್ಯಕ್ರಮದ ಕೊನೆಯಲ್ಲಿ ಸಂಘದ ಕಲಾವಿದರು "ಶ್ರೀ ಗೀತೆ"ಗಳನ್ನು ಬಹಳ ಸೊಗಸಾಗಿ ಹಾಡಿ, ಕಾರ್ಯಕ್ರಮಕ್ಕೆ ಮೆರಗು ನೀಡಿದರು. ಶ್ರೀ ಎನ್. ಎಸ್. ರಾಮಸ್ವಾಮಿ ಅಯ್ಯರ್ ಅವರು 'ಶ್ರೀ'ಯವರ 'ಅನಾಥೆ' ಕವನವನ್ನು ಪರಿಣಾಮ ಕಾರಿಯಾಗಿ ವಾಚನ ಮಾಡಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಸತ್ತು, ಹಾಸನ.

ದಿನಾಂಕ 11–5–1984ರಂದು ಬೆಳಗಿನಿಂದ ಸಂಜೆವರೆಗೆ ಹಾಸನದ ನಗರ ಸಭಾ ಸಭಾಂಗಣದಲ್ಲಿ ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನದ ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಂಯುಕ್ತಾಶ್ರಯದಲ್ಲಿ ಬಿ. ಎಂ. ಶ್ರೀ. ಜನ್ಮಶತಮಾನೋತ್ಸವ ನಡೆಯಿತು.

ಬೆಳಗ್ಗೆ ಕಾರ್ಯಕ್ರಮವನ್ನು ಹಾಸನ ಜಿಲ್ಲಾ ವಿಶೇಷ ಜಿಲ್ಲಾಧಿಕಾರಿಗಳಾದ ಶ್ರೀ ಪಿ. ವಾಸುದೇವರಾವ್ ಅವರು ಉದ್ಘಾಟಿಸಿದರು. ಮಾಜಿ ರೋಟರಿ ಗೌರ್ನರ್ ಶ್ರೀ ಕೆ. ಅನಂತರಾಮಯ್ಯ ಮತ್ತು ಶ್ರೀ ಜಿ. ನಾರಾಯಣ ಅವರು ಮುಖ್ಯ ಅತಿಥಿ ಗಳಾಗಿ ಭಾಷಣ ಮಾಡಿದರು. ಶ್ರೀ ನಿಟ್ಟೂರು ಶ್ರೀನಿವಾಸ ರಾವ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದ ಪ್ರಾರಂಭದಲ್ಲಿ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಎಚ್. ಬಿ. ಜ್ವಾಲನಯ್ಯ ಅವರು ಸ್ವಾಗತಿಸಿದರು. ಶ್ರೀ ಪುಟ್ಟಯ್ಯ ಅವರು ವಂದನಾರ್ಪಣೆ ಮಾಡಿದರು.

ಮಧ್ಯಾಹ್ನ "ಆದ್ಯ ಪ್ರವರ್ತಕರಾಗಿ ಬಿ. ಎಂ. ಶ್ರೀ" ವಿಚಾರಗೋಷ್ಠಿಯ ಅಧ್ಯಕ್ಷತೆಯನ್ನು ಪ್ರೊ॥ ಎಂ. ವಿ. ಸೀತಾರಾಮಯ್ಯ ಅವರು ನಿರ್ವಹಿಸಿದರು. 'ಕನ್ನಡ ಸಾಹಿತ್ಯಕ್ಕೆ ಬಿ.ಎಂ.ಶ್ರೀ.ಯವರ ಕೊಡುಗೆ' ಎಂಬ ವಿಷಯವಾಗಿ ಪ್ರೊ॥ ಎಸ್. ಆರ್. ಮಳಗಿ ಅವರೂ, 'ನವೋದಯ ಯುಗ ಪ್ರವರ್ತಕರಾಗಿ ಬಿ.ಎಂ.ಶ್ರೀ.' ಎಂಬ ವಿಷಯವಾಗಿ ಶ್ರೀ ನಾ. ಗೀತಾಚಾರ್ಯ ಅವರೂ, 'ಕನ್ನಡ ಚಳವಳಿಯ ಆದ್ಯ ಪ್ರವರ್ತಕರಾಗಿ ಬಿ.ಎಂ.ಶ್ರೀ.' ಎಂಬ ವಿಷಯವಾಗಿ ಡಾ॥ ಎಚ್. ಎಸ್. ನಿಂಗಪ್ಪ ಅವರೂ, 'ಬಿ.ಎಂ.ಶ್ರೀ. ಅವರ ದುರಂತ ನಾಟಕಗಳು' ಎಂಬ ವಿಷಯವಾಗಿ ಡಾ॥ ಕೆ. ಸುಬ್ಬಣ್ಣ ಅವರೂ ಮಾತನಾಡಿದರು. ಪರಿಷತ್ತಿನ ಕಾರ್ಯದರ್ಶಿಗಳು ವಂದನಾರ್ಪಣೆ ಮಾಡಿದರು.

ಸಂಜೆ ವಿಚಾರಗೋಷ್ಠಿಯ ನಂತರ ಶ್ರೀ ಪುಟ್ಟಯ್ಯ ಅವರು 'ಅಶ್ವತ್ಥಾಮನ್' ನಾಟಕದ ಸ್ವಲ್ಪ ಭಾಗವನ್ನು ಏಕಪಾತ್ರಾಭಿನಯ ರೂಪದಲ್ಲಿ ಪ್ರದರ್ಶನ ಮಾಡಿ ಸಭಿಕರನ್ನು ರಂಜಿಸಿದರು. ಇಡೀ ಕಾರ್ಯಕ್ರಮ ಬೆಳಗ್ಗೆಯಿಂದ ಸಂಜೆಯವರೆಗೆ ಅತ್ಯಂತ ಪರಿಣಾಮಕಾರಿಯಾಗಿ ನಡೆಯಿತು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಚಿಕ್ಕಮಗಳೂರು.

ದಿನಾಂಕ 12-5-1984ರಂದು ಚಿಕ್ಕಮಗಳೂರಿನ ಶಿಕ್ಷಕರ ಭವನದಲ್ಲಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತುಗಳು ಸೇರಿ ಬಿ.ಎಂ.ಶ್ರೀ. ಶತಮಾನೋತ್ಸವ ಕಾರ್ಯಕ್ರಮವನ್ನು ನಡೆಸಿದವು.

ಬೆಳಗಿನ ಕಾರ್ಯಕ್ರಮವನ್ನು ಚಿಕ್ಕಮಗಳೂರು ಜಿಲ್ಲಾ ಕಂದಾಯ ಉಪ ವಿಭಾಗಾಧಿಕಾರಿಗಳಾದ ಶ್ರೀ ಕೆ. ನರಸಿಂಹಯ್ಯನವರು ಉದ್ಘಾಟನೆ ಮಾಡುತ್ತ, ಬಿ.ಎಂ.ಶ್ರೀ.ಯವರ ಜೀವನ ಮತ್ತು ಸಾಧನೆಗಳ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಶ್ರೀ ಕಾಶಿ ವಿಶ್ವನಾಥಶೆಟ್ಟಿ ಅವರೂ, ಶ್ರೀ ಜಿ. ನಾರಾಯಣ ಅವರೂ ಭಾಗವಹಿಸಿದ್ದರು. ಶ್ರೀ ನಾರಾಯಣ ಅವರು ಕನ್ನಡದ ಇಂದಿನ ಸಮಸ್ಯೆಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಿದರು. ಶ್ರೀ ನಿಟ್ಟೂರು ಶ್ರೀನಿವಾಸ ರಾವ್ ಅವರು ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ಬಿ.ಎಂ.ಶ್ರೀ. ಯವರ ಮೊಮ್ಮಗಳಾದ ಶ್ರೀಮತಿ ವಿಶಾಲಾಕ್ಷಿ ಅವರು 'ಚಿಕ್ಕಮಗಳೂರು ಜಿಲ್ಲಾ ಬರಹಗಾರರು' ಎಂಬ ಪುಸ್ತಕವನ್ನು ಬಿಡುಗಡೆ ಮಾಡಿದರು.

ಮಧ್ಯಾಹ್ನ ನಡೆದ "ಬಿ.ಎಂ.ಶ್ರೀ. ಮತ್ತು ಕನ್ನಡ ಸೇವೆ" ಎಂಬ ವಿಚಾರ ಗೋಷ್ಠಿಯಲ್ಲಿ ಪ್ರೊ॥ ಎಸ್.ಆರ್. ಮಳಗಿ, ಶ್ರೀ ಹಿರೇಮಗಳೂರು ಕಣ್ಣನ್, ಶ್ರೀ ಎಚ್. ಎಸ್. ಸೋಮಶೇಖರ್ ಅವರುಗಳು ಕ್ರಮವಾಗಿ 'ಕನ್ನಡಿಗರ ಭಾವೈಕ್ಯತೆಗೆ, ಕನ್ನಡ ಸಾಹಿತ್ಯಕ್ಕೆ ಶ್ರೀಯವರ ಕೊಡುಗೆ', 'ಶ್ರೀಯವರ ಜೀವನ ಮತ್ತು ವ್ಯಕ್ತಿತ್ವ', 'ಕನ್ನಡದ ಸ್ಥಾನಮಾನ : ಅಂದು-ಇಂದು' ಎಂಬ ವಿಷಯಗಳನ್ನು ಕುರಿತು ಮಾತನಾಡಿದರು, ಶ್ರೀ ಕಣ್ಣನ್ ಅವರು ಶ್ರೀಮತಿ ವಿಶಾಲಾಕ್ಷಿ ಅವರೊಡನೆ ಸಂದರ್ಶನ ಮಾಡಿ ಬಿ. ಎಂ. ಶ್ರೀ. ಯವರ ಜೀವನಕ್ಕೆ ಸಂಬಂಧಿಸಿದ ಕೆಲವು ಮುಖ್ಯ ವಿಷಯಗಳನ್ನು ಹೇಳಿದರು. ಪ್ರೊ॥ ಎಂ. ವಿ. ಸೀತಾರಾಮಯ್ಯನವರು ಗೋಷ್ಠಿಯ ಅಧ್ಯಕ್ಷರಾಗಿದ್ದರು. ಶ್ರೀ ಎಚ್. ಎಸ್. ಸೂರ್ಯನಾರಾಯಣ ಅವರು ಗೋಷ್ಠಿಯ ನಿರ್ವಹಣೆ ಮಾಡಿದರು. ಎರಡೂ ಕಾರ್ಯಕ್ರಮಗಳ ಆರಂಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಎಂ. ಜೆ. ಕೋದಂಡರಾಮ ಶೆಟ್ಟಿ ಅವರು ಸ್ವಾಗತ ಮಾಡಿದರು. ಪರಿಷತ್ತಿನ ಕಾರ್ಯದರ್ಶಿಗಳ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ತಕ್ಷಶಿಲಾ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು, ಮೂಡಿಗೆರೆ

ದಿನಾಂಕ 12-5-1984ರ ಸಂಜೆ 7-00 ಗಂಟೆಗೆ ಚಿಕ್ಕಮಗಳೂರು ಜಿಲ್ಲೆ. ಮೂಡಿಗೆರೆಯಲ್ಲಿ ಬಿ. ಎಂ. ಶ್ರೀ. ಪ್ರತಿಷ್ಠಾನ ಮತ್ತು ಅಲ್ಲಿಯ ಕನ್ನಡ ಸಂಘವಾದ ತಕ್ಷಶಿಲೆ ಮತ್ತು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತುಗಳು ಸಂಯುಕ್ತವಾಗಿ

ಮೂಡಿಗೆರೆಯ 'ಜೇಸೀ' ಭವನದಲ್ಲಿ ಬಿ. ಎಂ. ಶ್ರೀ. ಜನ್ಮಶತಮಾನೋತ್ಸವ ಸಮಾರಂಭವನ್ನು ಏರ್ಪಡಿಸಿದ್ದವು.

ಶ್ರೀ ನಿಟ್ಟೂರು ಶ್ರೀನಿವಾಸ ರಾವ್ ಅವರ ಅಧ್ಯಕ್ಷತೆಯಲ್ಲಿ ಪ್ರೊ॥ ಎಂ. ವಿ. ಸೀತಾರಾಮಯ್ಯ, ಪ್ರೊ॥ ಎಸ್. ಆರ್. ಮಳಗಿ, ಶ್ರೀ ಜಿ. ನಾರಾಯಣ ಅವರುಗಳು ಮುಖ್ಯ ಅತಿಥಿಗಳಾಗಿ ಭಾಷಣ ಮಾಡಿದರು. ತಕ್ಷಶಿಲಾ ಅಧ್ಯಕ್ಷರಾದ ಶ್ರೀ ಎಂ. ಡಿ. ಜಯಪಾಲ್ ಅವರು ಸ್ವಾಗತಿಸಿದರು ಮತ್ತು ಅತಿಥಿಗಳ ಪರಿಚಯ ಮಾಡಿಕೊಟ್ಟರು. ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಹಳೆಕೋಟೆ ರಮೇಶ್ ಅವರು ವಂದನಾರ್ಪಣೆ ಮಾಡಿದರು.

ಕರ್ನಾಟಕ ಸಂಘ, ಶಿವಮೊಗ್ಗ

13–5–1984ರ ಭಾನುವಾರ ಬಿ.ಎಂ.ಶ್ರೀ. ಪ್ರತಿಷ್ಠಾನ ಮತ್ತು ಕರ್ನಾಟಕ ಸಂಘಗಳ ಸಂಯುಕ್ತಾಶ್ರಯದಲ್ಲಿ ಶಿವಮೊಗ್ಗದ ಕರ್ನಾಟಕ ಸಂಘದ ಸಭಾಂಗಣದಲ್ಲಿ ಬಿ. ಎಂ. ಶ್ರೀ ಜನ್ಮಶತಮಾನೋತ್ಸವ ನಡೆಯಿತು. ಶ್ರೀ ಜಿ. ನಾರಾಯಣ ಅವರು ಕಾರ್ಯಕ್ರಮವನ್ನು ಉದ್ಘಾಟಿಸುತ್ತ ಬಿ. ಎಂ. ಶ್ರೀ.ಯವರ ಕನ್ನಡ ಕಳಕಳಿ ಮತ್ತು ಇಂದಿನ ಕನ್ನಡ ಸಮಸ್ಯೆಗಳನ್ನು ಕುರಿತು ಮಾತಾಡಿದರು. ಶ್ರೀ ನಿಟ್ಟೂರು ಶ್ರೀನಿವಾಸ ರಾವ್ ಅವರು ಅಧ್ಯಕ್ಷರಾಗಿದ್ದರು. ಕರ್ನಾಟಕ ಸಂಘದ ಅಧ್ಯಕ್ಷರಾದ ಮಹಿಷಿ ನರಸಿಂಹಮೂರ್ತಿ ಅವರು ಸ್ವಾಗತಿಸಿದರು. 'ಬಿ. ಎಂ. ಶ್ರೀ. ಅವರ ಅಖಂಡ ಕರ್ನಾಟಕ ದೃಷ್ಟಿ' ಎಂಬ ವಿಷಯವಾಗಿ ಶ್ರೀ ಎಸ್. ಆರ್. ಮಳಗಿ ಅವರೂ, 'ಶ್ರೀ ಸಾಹಿತ್ಯ ಮತ್ತು ಕನ್ನಡ ಚಳವಳಿ' ಎಂಬ ವಿಷಯವಾಗಿ ಶ್ರೀ ಬಿ. ಕೃಷ್ಣಪ್ಪರೆಡ್ಡಿ ಅವರೂ ಮಾತಾಡಿದರು. ಗೋಷ್ಠಿಯ ಅಧ್ಯಕ್ಷರಾದ ಪ್ರೊ॥ ಎಂ. ವಿ. ಸೀತಾರಾಮಯ್ಯನವರು ವಿಶಿಷ್ಟವಾದ ರೀತಿಯಲ್ಲಿ ಕನ್ನಡದ ಸೇವೆ ಮಾಡಿರುವ ಶಿವಮೊಗ್ಗದ ಕರ್ನಾಟಕ ಸಂಘ ಏರ್ಪಡಿಸಿದ್ದ ಅಂದಿನ ಸಭೆಗಳಿಗೆ. ಅದರಲ್ಲೂ ಕನ್ನಡದ ಆಚಾರ್ಯಪುರುಷರಾದ ಬಿ.ಎಂ.ಶ್ರೀ. ಅಂಥವರ ಸಮಾರಂಭಕ್ಕೆ ಸಾಕಷ್ಟು ಸಂಖ್ಯೆಯಲ್ಲಿ ಜನ ಬಂದಿಲ್ಲ ಎಂದು ವಿಷಾದಪಟ್ಟರು. 'ಇದೇ ಸಭಾಂಗಣದಲ್ಲಿ ಕಿಕ್ಕಿರಿದು ತುಂಬಿದ ಸಭೆಗಳನ್ನು ಕಂಡಿದ್ದ ತಾವು ಇಂದು ಕೆಲವೇ ಜನಕ್ಕೆ ಹೇಳಬೇಕಾಗಿದೆ, ನಮ್ಮ ಜನಕ್ಕೆ ನಾಡು ನುಡಿಗಳ ಬಗ್ಗೆ ಅಭಿಮಾನ ಸಾಲದು' ಎಂದು ಅಭಿಪ್ರಾಯಪಟ್ಟರು. ಶ್ರೀಮತಿ ವಿಜಯಶ್ರೀ ಗೋಷ್ಠಿಯನ್ನು ನಿರ್ವಹಿಸಿದರು. ಕರ್ನಾಟಕ ಸಂಘದ ಕಾರ್ಯದರ್ಶಿ ಬಳ್ಳೆಕೆರೆ ಹನುಮಂತಪ್ಪ ವಂದನಾರ್ಪಣೆ ಮಾಡಿದರು.

ಕನ್ನಡ ಮಿತ್ರ ವೃಂದ, ತುಮಕೂರು

20–5–1984ರ ಭಾನುವಾರ ಇಡೀ ದಿವಸ ತುಮಕೂರಿನ ಶಿಕ್ಷಕರ ಭವನದಲ್ಲಿ ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ ಮತ್ತು ಕನ್ನಡ ಮಿತ್ರ ವೃಂದಗಳು ಸೇರಿ ಬಿ.ಎಂ.ಶ್ರೀ. ಜನ್ಮಶತಮಾನೋತ್ಸವ ಕಾರ್ಯಕ್ರಮವನ್ನು ನಡೆಸಿದವು.

ಜಿಲ್ಲಾಧಿಕಾರಿಗಳಾದ ಶ್ರೀ ಕೆ. ಜೈರಾಜ್ ಅವರು ಬೆಳಗಿನ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಡಾ॥ ಸಿದ್ಧಯ್ಯ ಪುರಾಣಿಕ ಅವರು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಆರಕ್ಷಕ ಅಧೀಕ್ಷಕರಾದ ಶ್ರೀ ಡಿ. ಎನ್. ಮುನಿಕೃಷ್ಣ ಮತ್ತು ಶ್ರೀ ಜಿ. ನಾರಾಯಣ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕಾರ್ಯಕ್ರಮದ ಪ್ರಾರಂಭಕ್ಕೆ ಶ್ರೀ ಶಿವರುದ್ರ ಆರಾಧ್ಯ ಮತ್ತು ಸರಸ್ವತಿ ನಾರಾಯಣಮೂರ್ತಿ ಅವರು ಪ್ರಾರ್ಥನೆ ಮಾಡಿದರು.

ಮಧ್ಯಾಹ್ನದ ವಿಚಾರಗೋಷ್ಠಿ 'ಶ್ರೀಯವರ ಸಾಧನೆ'ಯ ಅಧ್ಯಕ್ಷತೆಯನ್ನು ಪ್ರೊ॥ ಎಂ. ವಿ. ಸೀತಾರಾಮಯ್ಯ ಅವರು ನಿರ್ವಹಿಸಿದರು. ಡಾ॥ ಆರ್. ಶೇಷಶಾಸ್ತ್ರಿಗಳು 'ಶ್ರೀಯವರ ನಾಟಕ'ಗಳನ್ನು ಕುರಿತು, ಪ್ರೊ॥ ಹೆಚ್. ಜಿ. ಸಣ್ಣಗುಡ್ಡಯ್ಯ ಅವರು 'ಶ್ರೀಯವರ ಜೀವನ–ಸಾಧನೆ'ಯನ್ನು ಕುರಿತು, ಶ್ರೀ ವಿ. ಚಿಕ್ಕವೀರಯ್ಯ ಅವರು 'ಕನ್ನಡ ಚಳವಳಿ ಮತ್ತು ಬಿ.ಎಂ.ಶ್ರೀ.' ಎಂಬ ವಿಷಯವಾಗಿಯೂ ಮಾತನಾಡಿದರು. ಶ್ರೀಮತಿ ಎಚ್. ಆರ್. ಸುನಂದ ಮತ್ತು ಶ್ರೀ ಡಿ. ಕೆ. ನಾಗರಾಜ್ ಬಿ.ಎಂ.ಶ್ರೀ.ಯವರ ಗೀತೆಗಳನ್ನು ಹಾಡಿದರು. ಎರಡೂ ಕಾರ್ಯಕ್ರಮಗಳ ಸ್ವಾಗತವನ್ನು ಶ್ರೀ ಹೆಚ್. ಆರ್. ಗುಂಡೂರಾವ್ ಅವರೂ, ನಿರ್ವಹಣೆಯನ್ನು ಶ್ರೀ ಕವಿತಾ ಕೃಷ್ಣ ಅವರೂ, ವಂದನಾರ್ಪಣೆಯನ್ನು ಶ್ರೀ ಹೆಚ್. ಶೇಷಾದ್ರಿ ಅವರೂ ನಡಸಿಕೊಟ್ಟರು. ಶ್ರೀ ಆರ್. ಎಸ್. ಆರಾಧ್ಯ ಮತ್ತು ಶ್ರೀ ಹೆಚ್. ಶೇಷಾದ್ರಿ ಅವರು ಕಾರ್ಯಕ್ರಮವನ್ನು ವ್ಯವಸ್ಥೆ ಮಾಡಿದ್ದರು.

ಈ ಎಲ್ಲ ಕಾರ್ಯಕ್ರಮಗಳಲ್ಲಿ ಬಿ. ಎಂ. ಶ್ರೀ. ಪ್ರತಿಷ್ಠಾನ ಪ್ರಕಟಿಸಿರುವ ಬಿ. ಎಂ. ಶ್ರೀ. ಜನ್ಮಶತಮಾನೋತ್ಸವದ ವಿಶೇಷ ಪ್ರಕಟನೆಗಳನ್ನು ಪ್ರದರ್ಶಿಸಲಾಗಿತ್ತು. ಇದರ ವ್ಯವಸ್ಥೆಯನ್ನು ಶ್ರೀ ನಾ. ಗೀತಾಚಾರ್ಯ ಅವರು ವಹಿಸಿದ್ದರು.

ಬಿ. ಎಂ. ಶ್ರೀ. ಜನ್ಮಶತಮಾನೋತ್ಸವ: ದಾನಿಗಳು

(ಕಳೆದ ಸಂಚಿಕೆಯಿಂದ; ಬೆಂ = ಬೆಂಗಳೂರು, ಕ = ಕಟ್ಟಡ ನಿಧಿ)

ರೂ. 1,000 : ರಿಸರ್ವ್ ಬ್ಯಾಂಕ್ ಕನ್ನಡ ಸಂಘ, ಬೆಂ. (ಕ), ಎಂ. ಜೆ. ಕೋದಂಡರಾಮ ಶೆಟ್ಟಿ, ಚಿಕ್ಕಮಗಳೂರು (ಕ)

ರೂ. 250 : ಯಶವಂತ ಚಿತ್ತಾಲ, ಮುಂಬಯಿ.

ರೂ. 150 : ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆಂ. (ಕ)

ರೂ. 100 : ಬಿ. ಕೃಷ್ಣ, ಬೆಂ; ಶ್ರೀಮತಿ ವಾಣಿ, ಮೈಸೂರು; ಬಿ. ಕೆ. ರಾಮಚಂದ್ರ, ಮುಂಬಯಿ (ಕ) : ಜಿ. ಕೆ. ಎಲ್. ರಾಜನ್, ಬೆಂ. (ಕ); ಶ್ರೀಮತಿ ಪದ್ಮ ಮೂರ್ತಿ, ಬೆಂ.

ರೂ. 90 : ಹೆಚ್. ಎಸ್. ಹೈಸ್ಕೂಲು, ಸಾಗರ.

ರೂ. 50 : ಹೆಚ್. ನಂಜುಂಡಯ್ಯ, ಬೆಂ. (ಕ) ; ಜಿ. ವಿ. ನಾರಾಯಣರಾವ್, ಮೈಸೂರು ; ಜಿ. ಎನ್. ಕೃಷ್ಣಪ್ಪ, ಚಿಕ್ಕಮಂಗಳೂರು (ಕ).

ರೂ. 25 : ಹೋ. ಶ್ರೀ. ನಾಗರಾಜ, ಬೆಮೆಲ್, ಬೆಂ.

ರೂ. 20 : ಟಿ. ಎನ್. ಶಾಮರಾವ್, ಬೆಂ.

ರೂ. 10 : ಟಿ. ಆರ್. ಅಚ್ಯುತರಾವ್, ಬೆಂ ; ಕೆ. ಸುಧಾ, ಸಾಗರ ; ಎಂ. ಎನ್. ಸುಲೋಚನ, ಸಾಗರ ; ಹೆಚ್. ಎಂ. ತಿಮ್ಮಪ್ಪ. ಸಾಗರ ; ಎಂ. ಜಿ. ರಘುಪತಿ ಜೋಯಿಸ್, ಸಾಗರ ; ಎ. ಗಣೇಶ, ಸಾಗರ ; ಬಿ. ಆರ್. ಭೀಮಾಚಾರ್. ಸಾಗರ ; ನಾಗಭೂಷಣ ಮತ್ತು ಗಾಯತ್ರಿ, ಸಾಗರ.

ರೂ. 5 : ಸಿದ್ದಲಿಂಗಯ್ಯ, ಎಸ್. ಕುಮಾರ್, ಎೣ. ಆರ್. ಅಶ್ವತ್ಥನಾರಾಯಣ, ಬಿ. ವಿರೂಪಾಕ್ಷ, ಶ್ರೀಮತಿ ಪದ್ಮ. ಪದ್ದಮ್ಮ, ಹೋ. ಬೋ. ಪುಟ್ಟೇಗೌಡ, ಜವರನಾಯಕ, ಜಿ. ರಂಗಸ್ವಾಮಿ, ಕೆ. ಎಸ್. ರಾಮಭಟ್ಟ, ಪಿ. ಎ. ಶೇಖರ, ವಿಶ್ವನಾಥ. ವಿ.ಚ. ಶೇಖರ, ರಾಜಕುಮಾರ್, ಚಂದ್ರಶೇಖರ್, ವೈದೇಹಿ, ಕೆ. ಶಾರದ, ಗಿರಿಜಾಂಬ ಅಯ್ಯಂಗಾರ್ (ಈ ಮೇಲ್ಕಂಡವರು ಬೆಂಗಳೂರಿನ ಬೆಮೆಲ್‌ನವರು). ಎಚ್. ವಿ. ಗುಂಡಪ್ಪ, ಬೆಂ ; ಜಿ. ಕೆ. ಶ್ರೀನಿವಾಸಮೂರ್ತಿ, ಬೆಂ.

(ಈವರೆಗೆ ಸಂಗ್ರಹವಾಗಿರುವ ಒಟ್ಟು ಮೊತ್ತ : ಕಟ್ಟಡ ನಿಧಿ : ರೂ. 26,205 ಉತ್ಸವ ನಿಧಿ : ರೂ. 5,576).

ಸ್ಥಾಪನೆ: 1979 ದೂರವಾಣಿ: 608374

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ (ರಿ.)

54, ಅರವಿಂದ, 3ನೇ ಅಡ್ಡಬೀದಿ, ಗವಿಪುರ ವಿಸ್ತರಣ

ಬೆಂಗಳೂರು-560 019

"ಬೆಳೆಯೇನೋ ಬಹಳವಿದೆ, ಕುಯಿಲುಗಾರರು ಕಡಮೆ"

"ದೇಶದಲ್ಲಿ ಹುಳು ತಿಂದುಹೋಗದೆ ಇರುವ ಗ್ರಂಥಗಳನ್ನೆಲ್ಲಾ ಶೇಖರಿಸಿ ಒಂದನ್ನೂ ಬಿಡದಂತೆ ಅಚ್ಚು ಹಾಕುವುದು. ಅಚ್ಚಾದಮೇಲೆ ಎಲ್ಲವನ್ನೂ ಕೊನೆಮುಟ್ಟ ಶೋಧಿಸಿ, ಹೊಸದಾಗಿ ಲಕ್ಷಣ ಗ್ರಂಥಗಳನ್ನು ಕಾಲಕ್ಕೆ ತಕ್ಕಂತೆ ರಚಿಸುವುದು."

ಇದು ಶ್ರೀ ವಾಣಿ, ಶ್ರೀ ಪ್ರತಿಷ್ಠಾನದ ಧ್ಯೇಯ ವಾಕ್ಯ. ನಿಮ್ಮಲ್ಲಿ ಅಂಥ ಹಸ್ತಪ್ರತಿಗಳಿದ್ದರೆ ದಯವಿಟ್ಟು ಪ್ರತಿಷ್ಠಾನಕ್ಕೆ ದಾನಮಾಡಿ. ಅಪ್ರಕಟಿತವಾದವುಗಳನ್ನು ಪ್ರಕಟಿಸಲು ಪ್ರಯತ್ನಿಸುತ್ತೇವೆ.

ಸಾಹಿತ್ಯಾಭಿಮಾನಿಗಳ ಸಹಕಾರ ನಮಗೆ ಅತ್ಯಗತ್ಯ. ನಾವು ಹಾಗೆ ಪ್ರಕಟಿಸಿದ ಗ್ರಂಥಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಂಡು, ಸಹಕರಿಸುವುದರ ಮೂಲಕ ಈ ಅಮೂಲ್ಯ ಸಾಹಿತ್ಯ ಸೇವೆಗೆ ನೆರವಾಗಿ. ಬಿ. ಎಂ. ಶ್ರೀ. ಪ್ರತಿಷ್ಠಾನಕ್ಕೆ ಸದಸ್ಯರಾಗುವುದರ ಮೂಲಕ (ವಾರ್ಷಿಕ ರೂ. 25-00, ಆಜೀವ 250-00) ಶ್ರೀ ಕೈಂಕರ್ಯದಲ್ಲಿ ಪಾಲ್ಗೊಳ್ಳಿ.

ಪ್ರಕಟನೆಗಳು : ಮಾರಾಟ ನಿಯಮ

ಪುಸ್ತಕ ವ್ಯಾಪಾರಿಗಳಿಗೆ :

100 ರೂ.ಗಳವರೆಗೆ: ಕೊಳ್ಳುವವರಿಗೆ: ಸೋಡಿ	ಶೇ. 25
100 ರಿಂದ 500 ರೂ ಗಳವರೆಗೆ	ಶೇ. 33⅓
500 ರೂ.ಗಳಿಗೆ ಮೇಲ್ಪಟ್ಟು	ಶೇ. 40

ಈವರೆಗೆ ಪ್ರಕಟವಾಗಿರುವ ಶ್ರೀ ಶತಾಬ್ದಿ ಕೃತಿಗಳಿಗೆ :

100 ರೂ.ಗಳವರೆಗೆ—ಶೇ. 10; 100 ರೂ.ಗಳಿಗೆ ಮೇಲ್ಪಟ್ಟು—ಶೇ. 25

ಇತರರಿಗೆ: ಶೇ. 10

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ

೫೪, ೩ನೆಯ ಅಡ್ಡಬೀದಿ, ಗವಿಪುರಂ ವಿಸ್ತರಣ, ಬೆಂಗಳೂರು-೧೯

ಪ್ರತಿಷ್ಠಾನದ ಪ್ರಕಟನೆಗಳು

೧.	ಕೀರ್ತನ ಕುಸುಮಾಂಜಲಿ (ನಾರಾಯಣದಾಸರ ಕೀರ್ತನೆಗಳು)	ರೂ. ೧೦-೦೦
೨.	ವಃಣಿಹ (ದಿ॥ ಫ. ಗು. ಹಳಕಟ್ಟಿಯವರ ಸಂಸ್ಮರಣ ಸಂಪುಟ)	೫೦-೦೦
೩.	ಬೇಂದ್ರೆ ಸ್ಮೃತಿ	೫-೦೦
೪.	ಸರ್ವಜ್ಞ ವಚನಗಳು	೧೫-೦೦
೫.	ಸೂತ ಭಾರತ	೧೫-೦೦
೬.	ಧ್ರುವ ಚರಿತ್ರೆ (ತಿಮ್ಮಪ್ಪದಾಸರ ಸಾಂಗತ್ಯ ಕೃತಿ)	೧೫-೦೦
೭.	ಶ್ರೀ ಕೃಷ್ಣದೇವರಾಯನ ದಿನಚರಿ	೧೦-೦೦
೮.	ಮೂರು ದತ್ತಿ ಉಪನ್ಯಾಸಗಳು	೧೦-೦೦
೯.	ಹಸ್ತಪ್ರತಿ ಶಾಸ್ತ್ರ	೧೫-೦೦

ಬಿ. ಎಂ. ಶ್ರೀ. ಜನ್ಮಶತಮಾನೋತ್ಸವದ ಪ್ರಕಟನೆಗಳು

೧.	ಆಚಾರ್ಯ ಬಿ.ಎಂ.ಶ್ರೀ. (ಪ್ರೊ॥ ಎಲ್. ಎಸ್. ಶೇಷಗಿರಿರಾವ್)	೨-೦೦
೨.	ಕನ್ನಡದ ಕಣ್ವ (ಹೊ. ಶ್ರೀನಿವಾಸಯ್ಯ)	೧-೫೦
೩.	ಶ್ರೀ ವಾಣಿ (ಬಿ.ಎಂ.ಶ್ರೀ. ಸೂಕ್ತಿಗಳು) (ಡಾ॥ ಹಾ. ಮಾ. ನಾಯಕ)	೧-೦೦
೪.	ಬಿ.ಎಂ.ಶ್ರೀ. ಭಾವಚಿತ್ರ	೨-೦೦
೫.	ಶ್ರೀಯವರ ಆಯ್ದ ಕವನಗಳು	೨-೦೦

ಸಿದ್ಧತೆಯಲ್ಲಿ

೧. ಶ್ರೀನಿಧಿ (ಸಂಸ್ಮರಣ ಸಂಪುಟ)
೨. ಶ್ರೀಗಂಧ (ಸ್ಮರಣ ಸಂಚಿಕೆ) ('ಇಂಗ್ಲಿಷ್ ಗೀತಗಳು' ಮತ್ತು ಆಂಗ್ಲ ಮೂಲಗಳನ್ನು ಒಳಗೊಂಡಿರುತ್ತದೆ.)
೩. ಶ್ರೀಯವರ ನಾಟಕಗಳ ಗದ್ಯಾನುವಾದ
೪. ಶ್ರೀಯವರ ನಾಟಕ ಕಥೆಗಳು

ಪ್ರತಿಷ್ಠಾನದ ಸದಸ್ಯರಿಗೆ ಎಲ್ಲ ಪ್ರಕಟನೆಗಳಿಗೂ ಶೇ. 25 ರಿಯಾಯಿತಿ.

ಶ್ರೀ ಲಕ್ಷ್ಮಿ ಪ್ರಿಂಟರ್ಸ್, ನಂ. 6, 14ನೇ ಅಡ್ಡರಸ್ತೆ, ಪಾದರಾಯನಪುರ, ಬೆಂಗಳೂರು-560026